ಪರಂಪರೆಯನ್ನು ಸಂರಕ್ಷಿಸಬೇಕು. ಸ್ವಾತಂತ್ರ್ಯ ಬಂದು 60 ವರ್ಷ ಕಳೆದರೂ ಮಹಿಳೆಯರಿಗೆ ಸಮಾನ ಅವಕಾಶ ಸಿಕ್ಕಿಲ್ಲ ಎನ್ನುವುದು ನಾಚಿಕೆಗೇಡು. ಇಂದಿನ ತಂತ್ರಜ್ಞಾನ ಯುಗದಲ್ಲಿ ಮಹಿಳೆ ಎಲ್ಲ ಕ್ಷೇತ್ರದಲ್ಲಿ ಕೆಲಸ ಮಾಡುವಷ್ಟು ಸಾಮರ್ಥ್ಯ ಬೆಳೆಸಿಕೊಂಡಿದ್ದರೂ, ಪೈಲಟ್ ಆಗಿ ಕಾರ್ಯನಿರ್ವಹಿಸುವ ಸಾಮರ್ಥ್ಯ ಹೊಂದಿದ್ದರೂ, ಅವರ ಮೇಲೆ ಅತ್ಯಾಚಾರ, ಲೈಂಗಿಕ ಕಿರುಕುಳ, ಹಿಂಸೆ, ವರದಕ್ಷಿಣೆ ಸಾವು, ದೈಹಿಕ ಚೇಷ್ಟೆಯಂಥ ಕೃತ್ಯಗಳು ನಡೆಯುತ್ತಿವೆ. ಇದು ನಮ್ಮ ಪುರುಷಪ್ರಧಾನ ಸಮಾಜದ ವಿಕೃತ ಮನಸ್ಸಿನ ಪ್ರತಿಬಿಂಬ ಎನ್ನಬೇಕು.

ಮಹಿಳೆ ಇಂದಿಗೂ ಕೆಲವೆಡೆ ನಾಲ್ಕು ಗೋಡೆಗಳ ಮಧ್ಯೆ ಬಂಧಿಯಾಗಿಯೇ ಉಳಿದಿದ್ದು, ವಿಮೋಚನೆ ಪಡೆದಿಲ್ಲ. ಮಹಿಳೆಯರ ಯೋಚನೆಗಳು, ಆಸೆ– ಆಕಾಂಕ್ಷೆಗಳನ್ನು ಮತ್ತು ಅವರ ಕೌಶಲಗಳನ್ನು ಗೌರವಿಸುವ ಮೂಲಕ ಮತ್ತು ಗುರುತಿಸುವ ಮೂಲಕ ಸುಭದ್ರ ಭಾರತ ಕಟ್ಟಲು ಅವರ ಸೇವೆಯನ್ನು ಬಳಸಿಕೊಳ್ಳಬೇಕಾಗಿದೆ. ಮಹಿಳೆಯರ ಹಕ್ಕುಗಳನ್ನು ಕಾಪಾಡಲು ಅಗತ್ಯ ಕಾನೂನುಗಳು ಜಾರಿಯಾಗಬೇಕು. ಭಾರತ ಆಧುನೀಕತೆಯ ಮಾರ್ಗದಲ್ಲಿ ಮುನ್ನಡೆಯಬೇಕಾದರೆ, ಮಹಿಳೆಯರಿಗೆ ಸಮಾನ ಅವಕಾಶಗಳು ದೊರೆಯಬೇಕು. ದೇಶದ ಶ್ರೀಮಂತ ಸಂಸ್ಕೃತಿ ಹಾಗೂ ಪರಂಪರೆಗೆ ಧಕ್ಕೆಯಾಗದಂತೆ ಮಹಿಳೆಯನ್ನು ಗೌರವದಿಂದ ಕಾಣಬೇಕು.

ನಮ್ಮದು ಬಹುಧರ್ಮಗಳ ನಾಡು. ಜಾತ್ಯತೀತತೆ ನಮ್ಮ ಪ್ರಮುಖ ಮಂತ್ರ. ಆದರೆ ದೇಶದಲ್ಲಿ ಜಾತೀಯತೆ ಹಾಗೂ ಕೋಮು ದ್ವೇಷದ ವಿಷಬೀಜ ಬಿತ್ತುವ ಮೂಲಕ ನಾವು ನಮ್ಮ ಹಕ್ಕುಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದೇವೆ. ಇಂಥ ವಿನಾಶಕಾರಿ ಪ್ರವೃತ್ತಿಗಳು ಬೆಂಕಿಗಿಂತಲೂ ಹೆಚ್ಚು ವೇಗವಾಗಿ ಸಮಾಜದ ಸಾಮರಸ್ಯವನ್ನು ಸುಡುತ್ತಿವೆ. ಸಮಾಜದಲ್ಲಿ ಶತಮಾನಗಳಿಂದ ತುಳಿತಕ್ಕೊಳಗಾದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೌಲಭ್ಯಗಳನ್ನು ನೀಡುವ ಜತೆಗೆ ಮೇಲ್ಜಾತಿಯ ಬಡವರಿಗೆ ಕೂಡಾ ಸೂಕ್ತ ನೆರವಿನ ಹಸ್ತ ಚಾಚಬೇಕಿದೆ. ಅಂದರೆ ಅಂಬೇಡ್ಕರ್ ಅಥವಾ ಜಗಜ್ಜೀವನರಾಂ ಅವರು ಮೀಸಲಾತಿ ವಿಚಾರದಲ್ಲಿ ದೇಶದ ದೃಷ್ಟಿಕೋನ ಬೆಳೆಸಿಕೊಂಡಿಲ್ಲ ಎಂದೇ ಹೇಳಬೇಕಾಗುತ್ತದೆ.

ದೇಶವನ್ನು ಒಂದು ಮಾದರಿ ರಾಷ್ಟ್ರವಾಗಿ ಕಟ್ಟುವ ಸಲುವಾಗಿ ಪರಸ್ಪರ ನಂಬಿಕೆಯಿಂದ, ವಿಶ್ವಾಸದಿಂದ ಶಾಂತಿ ಹಾಗೂ ಸೌಹಾರ್ದತೆಯ ಬಾಳ್ವೆ ನಡೆಸುವುದು ಅಗತ್ಯ. ಮುಂದಿನ ಭವಿಷ್ಯದಲ್ಲಿ ಇಂಥ ಮೌಲ್ಯಗಳನ್ನು ಬಿತ್ತಬೇಕಾದರೆ ನಾವು ಅದನ್ನು ಸಾಧಿಸಿ ತೋರಿಸಬೇಕು. ಅಂಥ ಕನಸನ್ನು ನಾವು ಕಂಡರೆ ಮಾತ್ರ ಅದನ್ನು ಸಾಧಿಸುವುದು ಸಾಧ್ಯವಾಗುತ್ತದೆ. ನಮ್ಮ ಕನಸು ನನಸಾಗಲು ನಾವು ಜಾಗೃತರಾಗಬೇಕಾದ ಅಗತ್ಯವಿದೆ, ಹೊಸ ಮುಂಜಾನೆಗೆ ನಾವು ತೆರೆದುಕೊಳ್ಳೋಣ, ನಮ್ಮ ಕನಸು ನನಸಾಗಿಸುವ ನಿಟ್ಟಿನಲ್ಲಿ ಪ್ರಯತ್ನಿಸೋಣ. ಎಲ್ಲರೂ ಒಟ್ಟಾಗಿ ಭಾರತವನ್ನು ಕಟ್ಟೋಣ. ಆಗ ನಮ್ಮ ದೇಶಕ್ಕಾಗಿ ತ್ಯಾಗ ಮಾಡಿದ ಜನ ನಮ್ಮನ್ನು ಮೆಚ್ಚಿಕೊಳ್ಳುತ್ತಾರೆ. ನಮ್ಮ ಸ್ವಾತಂತ್ರ್ಯ ಸೇನಾಗಿಗಳು ಹಾಗೂ ಕಾರ್ಗಿಲ್ ಯೋಧರಿಗೆ ತಲೆಬಾಗಿ ನಮಿಸೋಣ. ಅವರ ಸ್ಫೂರ್ತಿಯ ಚಿಲುಮೆ ನಮಗೆ ಮಾರ್ಗದರ್ಶಿಯಾಗಲಿ ಎಂದು ಬೇಡಿಕೊಳ್ಳೋಣ. ಅದು ಖಂಡಿತವಾಗಿಯೂ ಸಮರ್ಥ ಹಾಗೂ ಸದೃಢ ಭಾರತಕ್ಕೆ ಬುನಾದಿಯಾಗಬಲ್ಲದು.

### 21. ರಾಷ್ಟ್ರೀಯ ಏಕತೆ: ಮುಗಿಯದ ಕಥೆ

ಒಂದು ದೇಶದ ಪರಿಕಲ್ಪನೆ ಅಥವಾ ಕೆಲ ಸಾಮಾನ್ಯತೆಗಳನ್ನು ಒಳಗೊಂಡಿರುವ ಜೀವಿಗಳಿಂದ ಕೂಡಿರುವ ಭೌಗೋಳಿಕ ಘಟಕವು ಹೊಸ ಪರಿಕಲ್ಪನೆ. ಸುಮಾರು ಹತ್ತೊಂಬತ್ತನೇ ಶತಮಾನದಲ್ಲಿ ರೂಪುಗೊಂಡ ಪರಿಕಲ್ಪನೆ ಇದು. ಜಾತಿ, ಧರ್ಮಗಳ ಎಲ್ಲೆಯನ್ನು ಮೀರಿ ರಾಷ್ಟ್ರೀಯ ಪ್ರಜ್ಞೆ ಎನ್ನುವುದು ಪ್ರಬಲ ಶಕ್ತಿಯಾದಾಗ ಇದು ರೂಪುಗೊಂಡಿತು. ಒಂದು ದೇಶದ ಅಸ್ತಿತ್ವ ಎನ್ನುವುದು ಒಂದು ರಾಜಕೀಯ ಅಂಶ. ಇದು ಸಾಂಸ್ಕೃತಿಕ ಅಂಶಗಳನ್ನೂ ಒಳಗೊಂಡಿದ್ದು, ಎಲ್ಲ ನಿವಾಸಿಗಳನ್ನು ಒಂದು ರೀತಿಯಲ್ಲಿ ಭಾವನಾತ್ಮಕವಾಗಿ ಒಗ್ಗೂಡಿಸುವಂಥದ್ದು. ದೇಶ ಹಾಗೂ ನಾವೆಲ್ಲರೂ ಒಂದೇ ಎಂಬ ಭಾವನೆಯನ್ನು ಒಟ್ಟಾಗಿ ರಾಷ್ಟ್ರೀಯ ಭಾವೈಕ್ಯ ಎನ್ನಬಹುದು.

ಒಂದು ಸಾಂಸ್ಕೃತಿಕ ಘಟಕವಾಗಿ ಭಾರತದ ಅಸ್ತಿತ್ವವನ್ನು ಸುಮಾರು ಐದು ಸಾವಿರ ವರ್ಷಗಳಿಂದ ಗಮನಿಸಬಹುದು. ಪ್ರಾಚೀನ ರಾಜರುಗಳಾದ ಅಶೋಕ, ಚಂದ್ರಗುಪ್ತ ಮೌರ್ಯ ಮೊದಲಾದವರು ರಾಜಕೀಯವಾಗಿ ಇಡೀ ಉಪಖಂಡವನ್ನು ಒಗ್ಗೂಡಿಸಿದರು. ಮುಂದೆ ಭರತವರ್ಷ ಮಹಾರಾಜನ ಹೆಸರಿನಲ್ಲಿ ಇದನ್ನು ಭಾರತ ಎಂದು ಗುರುತಿಸಲಾಯಿತು. ತನ್ನ ಭೌಗೋಳಿಕ ಗುಣಲಕ್ಷಣಗಳಿಂದಾಗಿ ಪ್ರಪಂಚದ ಇತರ ಭಾಗಗಳಿಂದ ಭಿನ್ನತೆ ರೂಢಿಸಿಕೊಂಡಿತ್ತು ಹಾಗೂ ಹೊರಜಗತ್ತಿನ ಸಂಪರ್ಕವನ್ನು ಅಷ್ಟಾಗಿ ಪಡೆದಿರಲಿಲ್ಲ. ಈ ಕಾರಣದಿಂದಾಗಿ ಅಪರೂಪದ ಹಾಗೂ ವಿಭಿನ್ನ ಸಾಂಸ್ಕೃತಿಕ ಘಟಕವಾಗಿಯೇ ಉಳಿದುಕೊಳ್ಳಲು ಸಾಧ್ಯವಾಯಿತು. ಆದರೆ ಬ್ರಿಟಿಷರು ಮತ್ತು ಅವರ ಸಾಮ್ರಾಜ್ಯಶಾಹಿ ಆಡಳಿತ ವ್ಯವಸ್ಥೆ, ಭಾರತವನ್ನು ಆಡಳಿತಾತ್ಮಕ ಹಾಗೂ ಸಾಂಸ್ಕೃತಿಕ ಘಟಕವಾಗಿ ಒಗ್ಗೂಡಿಸಿತು. ಇದರಿಂದ ಭಾರತೀಯರಲ್ಲಿ ಒಗ್ಗಟ್ಟು ಮೂಡಿ, ಸಮಾನ ಶತ್ರುವಿನ ವಿರುದ್ಧ ಸಂಘಟಿತ ಹೋರಾಟಕ್ಕೆ ವೇದಿಕೆ ಸಜ್ಜಾಯಿತು.

ಸಮಗ್ರ ಭಾರತದ ಸಂಘಟಿತ ಪ್ರಯತ್ನವಾಗಿ 1857ರ ಮೊದಲ ಸ್ವಾತಂತ್ರ್ಯ ಸಂಗ್ರಾಮ ರೂಪುಗೊಂಡಿತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಇಡೀ ದೇಶದ ಜನರನ್ನು ಸಂಘಟಿಸಿ ಒಗ್ಗೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು. ಮತ್ತು ದೇಶಪ್ರೇಮದ ಪ್ರಜ್ಞೆಯನ್ನು ದೇಶದ ಜನರಲ್ಲಿ ಬಡಿದೆಬ್ಬಿಸಿತು. ಇಡೀ ಭಾರತೀಯ ಜನತೆ ಸಮಾನ ಆರ್ಥಿಕ ಹಾಗೂ ರಾಜಕೀಯ ವೇದಿಕೆ ರೂಪಿಸಿಕೊಂಡಿತು. ಮಹಾತ್ಮಗಾಂಧೀಜಿಯವರ ಬರುವಿಕೆ ಇಡೀ ದೇಶಕ್ಕೆ ಸಾಮೂಹಿಕ ನಾಯಕತ್ವವನ್ನು ನೀಡಿತು. ಇಡೀ ದೇಶದ ಒತ್ತಾಸೆಯ ಫಲವಾಗಿ 1947ರಲ್ಲಿ ದೇಶ ಸ್ವತಂತ್ರಗೊಂಡಿತು.

ಸ್ವಾತಂತ್ರ್ಯ ಎನ್ನುವುದು ರಾಷ್ಟ್ರೀಯ ಭಾವೈಕ್ಯದ ಒಂದು ಮೊದಲ ಹೆಜ್ಜೆಯೇ ವಿನಃ ಇದೇ ಕೊನೆಯ ಹೆಜ್ಜೆಯಲ್ಲ. ಭಾರತದ ಸಂವಿಧಾನ ಒಂದು ಪ್ರಬಲ ಕೇಂದ್ರವನ್ನು ಸ್ಥಾಪಿಸಿದ್ದಲ್ಲದೇ, ಎಲ್ಲನಾಗರಿಕರಿಗೆ ಏಕೈಕ ನಾಗರಿಕ ಸ್ಥಾನಮಾನವನ್ನು ಕಲ್ಪಿಸಿದೆ. ದೇಶ ವಿಕಸನಗೊಳ್ಳಲು ಹಲವು ಅನುಕೂಲತೆಗಳನ್ನು ಮತ್ತು ಸೌಲಭ್ಯಗಳನ್ನು ನಮ್ಮ ಸಂವಿಧಾನ ಕಲ್ಪಿಸಿಕೊಟ್ಟಿದೆ. ಇದರ ಜತೆಗೆ ಅಲ್ಪಸಂಖ್ಯಾತರು ತಮ್ಮ ಭಾಷೆ ಹಾಗೂ ಸಂಸ್ಕೃತಿಯನ್ನು ರಕ್ಷಿಸಿಕೊಳ್ಳಲು ಎಲ್ಲಸುರಕ್ಷಾ ಸೌಲಭ್ಯವನ್ನೂ ಸಂವಿಧಾನ ಕಲ್ಪಿಸಿಕೊಟ್ಟಿದೆ. ಆದ್ದರಿಂದ ನಮ್ಮ ಸಂವಿಧಾನದ ಮೂಲತತ್ವ ಹಾಗೂ ಆಶಯವೇ ವಿವಿಧತೆಯಲ್ಲಿ ಏಕತೆ ಸಾಧಿಸುವುದು. ದೇಶದಲ್ಲಿ 500ಕ್ಕೂ ಹೆಚ್ಚು ರಾಜಮನೆತನಗಳ ಆಳ್ವಿಕೆಯಲ್ಲಿದ್ದ ಸಣ್ಣ ಪುಟ್ಟ ರಾಜ್ಯಗಳು ಸಮಗ್ರ ಭಾರತವಾಗಿ ರೂಪುಗೊಂಡಿತು. ಇದಕ್ಕೆ ದೇಶದ ಉಕ್ಕಿನ ಮನುಷ್ಯ ಎನಿಸಿಕೊಂಡ ಸರ್ದಾರ್ ವಲ್ಲಭಭಾಯಿ ಪಟೇಲರ ಕರ್ತೃತ್ವ ಶಕ್ತಿ ಕಾರಣವಾಯಿತು.'



www.shikarat.com

ಕಾಗದಗಳಲ್ಲಿ ಮತ್ತು ದಾಖಲೆಗಳಲ್ಲಷ್ಟೇ ಉಳಿದ ಸಹಕಾರ ಒಕ್ಕೂಟ ವ್ಯವಸ್ಥೆಯ ಅನ್ವಯಿಕ ಅಂಶಗಳು ಮತ್ತು ಸಾಂಸ್ಕೃತಿಕ ಭಾವೈಕ್ಯ ಸಾಧನೆ ನಿರೀಕ್ಷಿತ ಮಟ್ಟದಲ್ಲಿ ಆಗಲಿಲ್ಲ ಎಂದೇ ಹೇಳಬೇಕು. ಕಾಂಗ್ರೆಸ್ ಪಕ್ಷದ ರಾಜಕೀಯ ಪ್ರಾಬಲ್ಯ ಹಾಗೂ ಹಿಂದೂಸಂಸ್ಕೃತಿ ಇತರ ಸಂಸ್ಕೃತಿಗಳ ಮೇಲೆ ಸವಾರಿ ಮಾಡಿದ್ದು, ದಕ್ಷಿಣ ರಾಜ್ಯಗಳ ಅಭಿವೃದ್ಧಿಯನ್ನು ನಿರ್ಲಕ್ಷಿಸಿದ್ದು, ದೇಶದ ಸಾಂಸ್ಕೃತಿಕ ಭಾವೈಕ್ಯ ಸಾಧಿಸುವ ಹಾದಿಗೆ ತಡೆಯಾಗಿ ಪರಿಣಮಿಸಿತು, ಇದು ಪ್ರಾದೇಶಿಕತೆ ಮನೋಭಾವ ದಟ್ಟವಾಗಲು ಕಾರಣವಾಯಿತು. ಉದಾಹರಣೆಗೆ ಉತ್ತರ ಭಾರತದ ಬ್ರಾಹ್ಮಣ ಸಂಸ್ಕೃತಿ ವಿರುದ್ಧದ ಆತ್ಮಗೌರವ ಚಳವಳಿ ಹಾಗೂ ಸಮತಾವಾದ ಇದಕ್ಕೆ ಉತ್ತಮ ಉದಾಹರಣೆ.

ಎಲ್ಲ ಜಾತಿ ಹಾಗೂ ಸಂಸ್ಕೃತಿಗಳ ಜನರನ್ನು ಒಗ್ಗೂಡಿಸಿ ರಾಷ್ಟ್ರದ ಮುಖ್ಯವಾಹಿನಿಗೆ ಕರೆತರುವ ಗಂಭೀರ ಪ್ರಯತ್ನಗಳು ನಡೆದವು. ಆರ್ಥಿಕ ಯೋಜನೆ ಎಂಬ ಹೊಸ ಸಾಧನ ದೇಶದ ಎಲ್ಲ ಆರ್ಥಿಕ ಸಂಪತ್ತಿನ ಸಮಾನ ಹಂಚಿಕೆಗೆ ಅಗತ್ಯವಾದ ಎಲ್ಲ ಕ್ರಮಗಳನ್ನು ಪ್ರಾಮಾಣಿಕವಾಗಿ ಕೈಗೊಂಡಿತು. ಜನರ ಒತ್ತಾಸೆಗಳಿಗೆ ಅನುಗುಣವಾಗಿ ಹಾಗೂ ಭಾಷೆಗಳಿಗೆ ಅನುಗುಣವಾಗಿ ರಾಜ್ಯಗಳನ್ನು 1956ರಲ್ಲಿ ಪುನರ್ ವಿಂಗಡಿಸಲಾಯಿತು. ಮಂಡಲ ಆಯೋಗದ ವರದಿಯ ಶಿಫಾರಸ್ಸಿನ ಆಧಾರದಲ್ಲಿ ಮೀಸಲಾತಿ ನೀತಿಯನ್ನು ಪುನರ್ ವಿಮರ್ಶಿಸಲಾಯಿತು. ಸಾರ್ವಜನಿಕ ಜೀವನದಲ್ಲಿ ಎಲ್ಲ ದುರ್ಬಲ ವರ್ಗದವರಿಗೂ ಮೀಸಲಾತಿ ಸೌಲಭ್ಯ ಜಾರಿಗೊಳಿಸಲಾಯಿತು. ಆ ಮೂಲಕ ಮೂರು ಹಂತದ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ರೂಪಿಸಿಅಧಿಕಾರದ ವಿಕೇಂದ್ರೀಕರಣ ಮಾಡಲಾಯಿತು. ಜತೆಗೆ ತಳಹಂತದಿಂದಲೇ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಲಾಯಿತು. ಆದರೆ ಇಂಥ ಪ್ರಾಮಾಣಿಕ ಪ್ರಯತ್ನಗಳು, ಕಳಪೆ ಅನುಷ್ಠಾನ ಹಾಗೂ ಪ್ರಭಾವಿ ಜಾತಿಗಳು ಮತ್ತು ರಾಜಕಾರಣಿಗಳ ಅಪವಿತ್ರ ಮೈತ್ರಿಯಿಂದಾಗಿ ನಿರೀಕ್ಷಿತ ಫಲ ನೀಡಿಲ್ಲ.

ದೇಶದ ಎಲ್ಲ ಜನರು ಸಮಗ್ರ ಭಾರತದ ಅವಿಭಾಜ್ಯ ಅಂಗ ಎಂಬ ಭಾವನೆಯನ್ನು ಮೂಡಿಸುವ ಹಾಗೂ ಬಲಗೊಳಿಸುವ ಸಾಕಷ್ಟು ಅಂಶಗಳು ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿವೆ. ವಿಸ್ತೃತ ಸಂಪನ್ಮೂಲ ಮತ್ತು ವೈವಿಧ್ಯಮಯ ಹವಾಗುಣದಿಂದಾಗಿ, ಪ್ರತಿ ರಾಜ್ಯಗಳೂ ಪರಸ್ಪರರ ಬೇಡಿಕೆಗಳನ್ನು ಈಡೇರಿಸುವಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿವೆ. ಇದು ಸ್ವತಂತ್ರ ಆರ್ಥಿಕತೆಯ ಸಮಗ್ರತೆಗೆ ಪೂರಕವಾಗಿ ಕೆಲಸ ಮಾಡುತ್ತದೆ.

ಭಾರತದ ಸಂವಿಧಾನವು ಎಲ್ಲರಿಗೂ ಸಮಾನ ರಾಜಕೀಯ ಹಕ್ಕನ್ನು ನೀಡಿದೆ ಮತ್ತು ನೀತಿ ನಿರೂಪಣೆಯಲ್ಲಿ ಎಲ್ಲರೂ ಸಮಾನ ಅವಕಾಶವನ್ನು ಪಡೆಯಲು ಅಗತ್ಯ ಅಂಶಗಳನ್ನು ರೂಢಿಸಿಕೊಂಡಿದೆ. ಸಮಗ್ರ ಭಾರತದ ಸೇವೆಗಳಾದ ನಾಗರಿಕ ಸೇವೆ, ರಾಷ್ಟ್ರೀಯ ಪಕ್ಷಗಳು, ಸಮಾನ ಪರಂಪರೆ ಮತ್ತು ಭೌಗೋಳಿಕ ಅಂಶಗಳು ನಮ್ಮತನವನ್ನು ಜನರಲ್ಲಿ ಬೆಳೆಸಲು ಮತ್ತು ಸಮಗ್ರ ಭಾರತದ ಅಖಂಡತೆಗೆ ಪೂರಕವಾಗಿವೆ. ಆದ್ದರಿಂದ ಪ್ರತಿಯೊಬ್ಬರೂ ಮೊದಲು ಭಾರತೀಯ; ನಂತರ ಪ್ರಾದೇಶಿಕತೆ ಎಂಬ ಮನೋಭಾವ ರೂಢಿಸಿಕೊಳ್ಳುವುದು ಸಾಧ್ಯವಾಗಿದೆ.

ಅದಾಗ್ಯೂ ನಾವು ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ಎಲ್ಲಿಯವರೆಗೆ ನಾವು ಆರ್ಥಿಕ ಸಮಾನತೆ ಅಥವಾ ಆರ್ಥಿಕ ನ್ಯಾಯ ಕಲ್ಪಿಸುವುದಿಲ್ಲವೋ ಅಲ್ಲಿಯವರೆಗೆ ದೇಶದ ಸಮಗ್ರತೆಗೆ ಮತ್ತು ಏಕತೆಗೆ ಅಪಾಯದ ಸಾಧ್ಯತೆ ಇದ್ದೇ ಇದೆ. ಪ್ರಾದೇಶಿಕವಾಗಿ ಕೆಲವೆಡೆ ಅಭಿವೃದ್ಧಿಯ ಕೊರತೆ ಹಾಗೂ ಕೆಲ ಸಮುದಾಯಗಳ ಕಡಿಮೆ ಆದಾಯದ ಮಟ್ಟದ ಹಿನ್ನೆಲೆಯಲ್ಲಿ ಏಕತೆಯ ಬದಲು ಪ್ರತ್ಯೇಕತೆಯ ವಾದ ಪ್ರಬಲವಾಗುತ್ತಿದೆ. ಜನರ ಬಡತನ ಮತ್ತು ಹಸಿವಿನ ಹಿನ್ನೆಲೆಯಲ್ಲಿ ಜನ ಹೇಗೆ ಬದಲಾಗುತ್ತಾರೆ ಎನ್ನುವುದಕ್ಕೆ ಜಮ್ಮು ಕಾಶ್ಮೀರ ಹಾಗೂ ಈಶಾನ್ಯ ರಾಜ್ಯಗಳು ಉತ್ತಮ ಉದಾಹರಣೆಗಳಾಗಿವೆ. ಪ್ರತಿಯೊಬ್ಬ ನಾಗರಿಕರಿಗೂ ಲಾಭದಾಯಕ ಉದ್ಯೋಗಾವಕಾಶ ಕಲ್ಪಿಸಿಕೊಡುವುದು ಮತ್ತು ಆಧುನೀಕತೆಯನ್ನು ಬೆಳೆಸುವ ಮೂಲಕ ಜನರು ಎರಡನೇ ದರ್ಜೆ ನಾಗರಿಕರು ಎಂಬ ಕೀಳರಿಮೆಯಿಂದ ಹೊರಬರಲು ಅನುಕೂಲಕರ ವಾತಾವರಣ ಕಲ್ಪಿಸಬೇಕಾದ್ದು ನಮ್ಮ ಸರ್ಕಾರ ಹಾಗೂ ನಾಗರಿಕ ಸಮಾಜದ ಕರ್ತವ್ಯ. ಆಗ ಮಾತ್ರ ಅವರು ಮುಖ್ಯವಾಹಿನಿಗೆ ಬಂದು ರಾಷ್ಟ್ರೀಯವಾದವನ್ನು ಪ್ರತಿಪಾದಿಸುವಂತಾಗುತ್ತದೆ. ಮೂಲಭೂತವಾದಿಗಳು, ಸಮತಾವಾದಿಗಳು, ಸಂಕುಚಿತ ಧಾರ್ಮಿಕವಾದ ಮತ್ತು ಜಾತೀಯತೆ ಇಡೀ ನಮ್ಮ ರಾಷ್ಟ್ರೀಯ ಭಾವೈಕ್ಯಕ್ಕೆ ಅಪಾಯ ತಂದೊಡ್ಡುತ್ತಿವೆ. ಅಭಿವೃದ್ಧಿಯ ಫಲಗಳು ಎಲ್ಲರಿಗೆ ಸಮಾನವಾಗಿ ವಿತರಣೆಯಾದಾಗ ಮಾತ್ರ ಇಂಥ ಭಾವನೆ ಬೆಳೆಯುವುದನ್ನು ತಡೆಯಬಹುದಾಗಿದೆ.

ಒಂದು ಹಂತದವರೆಗೂ ಪ್ರಾದೇಶಿಕತೆಯು ದೇಶದ ಏಕತೆ ಮತ್ತು ಸಮಗ್ರತೆಗೆ ಧಕ್ಕೆಯಾಗದು. ಪ್ರಾದೇಶಿಕತೆಗೆ ವಿಸ್ತೃತ ಅರ್ಥ ನೀಡಿ ಇದನ್ನು ರಾಷ್ಟ್ರೀಯತೆಯಾಗಿ ಪರಿವರ್ತಿಸಲು ಅವಕಾಶವಿದ್ದು, ಇದರಿಂದ ಪವಾಡಸದೃಶ ಫಲಿತಾಂಶ ನಿರೀಕ್ಷಿಸಬಹುದು. ಉದಾಹರಣೆಗೆ ಪ್ರಗತಿಪರವಾಗಿ ಮುನ್ನಡೆಯುತ್ತಿರುವ ದಕ್ಷಿಣ ರಾಜ್ಯಗಳು ದೇಶದ ಆದಾಯಕ್ಕೆ ಗಣನೀಯ ಕೊಡುಗೆ ನೀಡುತ್ತಿವೆ. ಒಂದು ಭಾಗದ ಅಭಿವೃದ್ಧಿ ದೇಶದ ಇನ್ನೊಂದು ಭಾಗದ ಅಭಿವೃದ್ಧಿಗೆ ತಡೆಯಾಗಬಾರದು. ಇದು ಮತ್ತೊಂದು ರಾಜ್ಯದಲ್ಲೂ ಧನಾತ್ಮಕ ಬದಲಾವಣೆಗೆ ಕಾರಣವಾಗಬೇಕು. ಅಂತೆಯೇ ಬಹುಸಂಖ್ಯಾತರ ಸಂಸ್ಕೃತಿ ವ್ಯವಸ್ಥೆ ಅಲ್ಪಸಂಖ್ಯಾತರ ಸಾಂಸ್ಕೃತಿಕ ವ್ಯವಸ್ಥೆಯನ್ನು ಬಲಿತೆಗೆದುಕೊಳ್ಳಬಾರದು. ಭಾರತ ಜಾತ್ಯತೀತ ಮೌಲ್ಯವನ್ನು ರೂಢಿಸಿಕೊಂಡದ್ದೇ ಈ ಕಾರಣಕ್ಕಾಗಿ. ಭಾರತದಲ್ಲಿ ಮನೆ ಮಾಡಿರುವ ವೈವಿಧ್ಯಮಯ ಹಾಗೂ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಬೆಳೆಯಲು ಅನುಕೂಲ ಮಾಡಿಕೊಡುವುದೇ ಇದರ ಮುಖ್ಯ ಉದ್ದೇಶ. ಇದರ ಮೂಲಕ ರಾಷ್ಟ್ರೀಯ ಭಾವೈಕ್ಯ ಅಥವಾ ಏಕತೆ ಬೆಳೆಸಲು ಪೂರಕ ವಾತಾವರಣವನ್ನು ಕಲ್ಪಿಸಲಾಗಿದೆ. ಇದನ್ನು ಹೆಚ್ಚು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವುದಷ್ಟೇ ಮುಖ್ಯ.

ರಾಷ್ಟ್ರೀಯ ಭಾವೈಕ್ಯದ ಅಂಶಗಳು ಮತ್ತು ಏಕತೆಯ ಭಾವನೆಗಳು ಸಾಮಾನ್ಯ ಪರಿಸ್ಥಿತಿಯಲ್ಲಿ ಅಷ್ಟೊಂದು ತೀವ್ರವಾಗಿ ಕಂಡುಬರದು. ಆದರೆ ದೇಶಕ್ಕೆ ಅಪಾಯ ಎದುರಾದಾಗ ಇದು ಖಂಡಿತವಾಗಿಯೂ ಉಗ್ರವಾಗಿ ಬೆಳಕಿಗೆ ಬರುತ್ತದೆ. ಯುದ್ಧಗಳು ಯಾವಾಗಲೂ ನಮ್ಮ ದೇಶವನ್ನು ಒಗ್ಗೂಡಿಸಿವೆ. ಯಾವ ಆಂತರಿಕ ಜಗಳಗಳಿದ್ದರೂ, ದೇಶದ ವಿಚಾರ ಬಂದಾಗ ಅದು ಗೌಣವಾಗಿದೆ. ದೇಶದ ಸಮಗ್ರತೆ ಹಾಗೂ ಏಕತೆಯನ್ನು ಕಾಪಾಡಲು ಇನ್ನೊಂದು ಪ್ರಮುಖ ಕಾರಣವಾಗಿರುವುದು ಕ್ರಿಕೆಟ್ ಕ್ರೀಡೆ. ರಾಷ್ಟ್ರೀಯತೆಯ ಯಾವುದೇ ವಿಚಾರ ಬಂದಾಗ ದೇಶ ತನ್ನ ಇತಿಹಾಸದುದ್ದಕ್ಕೂ ಒಗ್ಗಟ್ಟು ಪ್ರದರ್ಶಿಸಿದೆ. ಇದು ಇಡೀ ದೇಶದ ಭಾವೈಕ್ಯತೆಯ ಪ್ರತೀಕ,

ಈ ನಿಟ್ಟಿನಲ್ಲಿ ನಡೆಯುತ್ತಿರುವ ಪ್ರಯತ್ನಗಳು ನಮ್ಮನ್ನು ಇನ್ನಷ್ಟು ಬಲಗೊಳಿಸಲು ಸಹಕಾರಿಯಾಗುತ್ತವೆ. ಸಂಪನ್ಮೂಲಗಳ ಸಮಾನ ಹಂಚಿಕೆಯ ಜತೆಗೆ, ಸಮೂಹ ಶಿಕ್ಷಣದ ಪರಿಣಾಮ ತಳಹಂತದವರೆಗೂ ಇಳಿಯುವಂತೆ ನೋಡಿಕೊಳ್ಳಬೇಕಾದ್ದು ಅಗತ್ಯ. ಇದರಿಂದ ಸಮಾಜದ ವಿವಿಧ ವರ್ಗಗಳ ನಡುವೆ ಪರಸ್ಪರ ತಿಳಿವಳಿಕೆ ಹೆಚ್ಚಲು ಮತ್ತು ರಾಷ್ಟ್ರೀಯತೆ ಬೆಳೆಯಲು ಸಹಾಯಕವಾಗುತ್ತದೆ. ಪ್ರಮುಖವಾದ ಕೋಮುವಾದ



Universal Coaching Centre

www.shikarat.com

ಎನಿಸಿದ ಹಿಂದುತ್ವದಂಥ ಶಕ್ತಿಗಳು ಸಮಾಜದ ಮೇಲೆ ಸರಿಪಡಿಸಲಾಗದ ಪರಿಣಾಮ ಬೀರುವ ಮುನ್ನ ಅದಕ್ಕೆ ಕಡಿವಾಣ ಹಾಕುವುದು ಎಲ್ಲರ ಜವಾಬ್ದಾರಿ. ಸಹಕಾರಿ ಒಕ್ಕೂಟ ವ್ಯವಸ್ಥೆಯಲ್ಲಿ ಇಂಥ ಜಾತಿ, ಧರ್ಮದ ಎಲ್ಲೆಯನ್ನು ಮೀರುವ ದೃಷ್ಟಿಯಿಂದ ಮತ್ತು ಜಾತಿ ಶೋಷಣೆ, ಅಸಮಾನತೆ ತಡೆಯುವ ದೃಷ್ಟಿಯಿಂದ ಪ್ರಯತ್ನಗಳು ನಡೆಯಬೇಕಿವೆ. ದೇಶದ ಧ್ವಜ ಕಾಯ್ದೆಗೆ ಇತ್ತೀಚೆಗೆ ತಂದ ತಿದ್ದುಪಡಿಯಿಂದಾಗಿ, ಜನರು ಮುಕ್ತವಾಗಿ ಯಾವಾಗಲೂ ಧ್ವಜಾರೋಹಣ ನೆರವೇರಿಸಲು ಅವಕಾಶ ನೀಡಿರುವುದು ಈ ನಿಟ್ಟಿನಲ್ಲಿ ಸರಿಯಾದ ಹೆಜ್ಜೆ.

ರಾಷ್ಟ್ರೀಯ ಭಾವೈಕ್ಯ ಎನ್ನುವುದು ಒಂದು ಹೆಜ್ಜೆಯ ಪ್ರಕ್ರಿಯೆಯಲ್ಲ. ಅದನ್ನು ಕೇವಲ ಒಂದು ಹೊಡೆತದಲ್ಲಿ ಸಾಧಿಸಲಾಗದು. ಈ ನಿಟ್ಟಿನಲ್ಲಿ ನಿರಂತರ ಪ್ರಯತ್ನಗಳು ನಡೆಯಬೇಕು. ಇದು ಒಂದು ಸಂಕುಚಿತ ದೃಷ್ಟಿಕೋನವೂ ಅಲ್ಲ. ಇದು ಒಂದು ನಿರ್ದಿಷ್ಟ ಸಮುದಾಯದ ಅಥವಾ ನಿರ್ದಿಷ್ಟ ಜನತೆಯ ದೇಶದ ಅಭಿವೃದ್ಧಿಯಲ್ಲ. ಸಮಗ್ರ ಭಾರತೀಯರ ಅಭಿವೃದ್ಧಿಯ ಪರಿಕಲ್ಪನೆ ಇದರಲ್ಲಿ ಒಳಗೊಂಡಿದೆ. ಆದ್ದರಿಂದ ಇದು ಬಹುಮುಖಿ ಪರಿಕಲ್ಪನೆ. ಅದನ್ನು ಹಾಗೆಯೇ ಪರಿಗಣಿಸಬೇಕಾದ ಅಗತ್ಯವಿದೆ. ಭಾರತದ ವೈಶಿಷ್ಟ್ಯ ಅಡಗಿರುವುದೇ ವಿವಿಧತೆಯಲ್ಲಿ ಏಕತೆ ಎಂಬ ಪರಿಕಲ್ಪನೆಯಲ್ಲಿ. ಇದು ಇಡೀ ಭಾರತೀಯರನ್ನು ಒಂದೇ ಅಂಶದಲ್ಲಿ ಒಗ್ಗೂಡಿಸುವ ಐಕ್ಯಮಂತ್ರ. ಇದು ನಿರ್ದಿಷ್ಟ ಪ್ರಾದೇಶಿಕ ಸಂಸ್ಕೃತಿಯ ಬದಲಾಗಿ ರಾಷ್ಟ್ರೀಯ ಸಂಸ್ಕೃತಿ ಹಾಗೂ ದೃಷ್ಟಿಕೋನವನ್ನು ಒಳಗೊಂಡಿದೆ. ಈ ಪ್ರಕ್ರಿಯೆಯನ್ನು ಮತ್ತಷ್ಟು ಬಲಗೊಳಿಸುವ ಪ್ರಯತ್ನ ನಡೆಯಬೇಕು. ಈ ಪ್ರಕ್ರಿಯೆ ಹಲವು ವರ್ಷಗಳ ಹಿಂದೆಯೇ ಆರಂಭವಾಗಿದ್ದು, ಇದೀಗ ಮತ್ತಷ್ಟು ಬಲಗೊಳ್ಳುತ್ತಿದೆ.

## 22. ನ್ಯಾಯಾಂಗದ ಹೊಣೆಗಾರಿಕೆ ಮತ್ತು ಕ್ರಿಯಾಶೀಲತೆ ಯುಗದಲ್ಲಿ ನಿರ್ಬಂಧದ ಅಗತ್ಯ

ಭಾರತದ ನ್ಯಾಯಾಂಗದಿಂದ ಕ್ಷಣ ಕ್ಷಣಕ್ಕೂ ಹೊಸ ಹೊಸ ತೀರ್ಪುಗಳು ಬರುವ ಯುಗದಲ್ಲಿ ಇದೀಗ ನಾವಿದ್ದೇವೆ. ಈ ತೀರ್ಪುಗಳು ಸಮಗ್ರ ಕ್ಷೇತ್ರಗಳಿಗೆ ಸಂಬಂಧಿಸಿದವುಗಳಾಗಿದ್ದು, ಪರಿಸರ, ಭ್ರಷ್ಟಾಚಾರ, ಚರಂಡಿಗಳ ಸ್ವಚ್ಛತೆ, ಆಹಾರ ಭದ್ರತೆ, ವಿಮಾನ ನಿಲ್ದಾಣಗಳ ನಿರ್ವಹಣೆ, ಶಿಕ್ಷಣ ಇತ್ಯಾದಿ. ಸಾಮಾನ್ಯವಾಗಿ ನಾವಿಂದು ನ್ಯಾಯಾಂಗದ ಕ್ರಿಯಾಶೀಲತೆಯ ಯುಗದಲ್ಲಿದ್ದೇವೆ ಎಂಬ ಮಾತು ಕೇಳಿಬರುತ್ತದೆ. ಅಂದರೆ ನ್ಯಾಯಾಂಗ ವ್ಯವಸ್ಥೆ ವೈಯಕ್ತಿಕ ವಿಮೋಚನೆಯ ಅಂಶವನ್ನಷ್ಟೇ ಪರಿಗಣಿಸದೇ, ಸಾಮಾಜಿಕ ಪ್ರಗತಿಗೆ ಪೂರಕವಾದ ಅಂಶಗಳ ಬಗ್ಗೆಯೂ ಹೆಚ್ಚಿನ ಗಮನ ಹರಿಸಿರುವುದು ತಿಳಿದುಬರುತ್ತದೆ. ಕೆಲವರು ನ್ಯಾಯವ್ಯವಸ್ಥೆಯ ಬಗ್ಗೆ ಅಪಾರ ಮೆಚ್ಚುಗೆ ವ್ಯಕ್ತಪಡಿಸಿದರೆ, ಮತ್ತೆ ಕೆಲವರು ಖಂಡಿಸುತ್ತಾರೆ. ಇವೆಲ್ಲದರ ಮಧ್ಯೆ ದೇಶದ ಸರ್ವೋಚ್ಚ ನ್ಯಾಯಮೂರ್ತಿಗಳೇ, ನ್ಯಾಯಾಂಗಕ್ಕೂ ಹೊಣೆಗಾರಿಕೆಯ ಅಗತ್ಯವಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದರ ಜತೆಗೆ ನ್ಯಾಯಾಂಗ ಹೆಚ್ಚು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು ಮತ್ತು ಪಾರದರ್ಶಕವಾಗಿರಬೇಕು ಎಂಬ ಪ್ರತಿಪಾದನೆಯನ್ನೂ ಅವರು ಮಾಡಿದ್ದಾರೆ. ದೇಶದಲ್ಲಿ ವ್ಯಾಪಕವಾಗಿರುವ ಭ್ರಷ್ಟಾಚಾರ ಹಾಗೂ ನ್ಯಾಯಾಧೀಶರ ನಡವಳಿಕೆಗಳ ಹಿನ್ನೆಲೆಯಲ್ಲಿ ಈ ಅಂಶವನ್ನು ಅವರು ಪ್ರಸ್ತಾಪಿಸಿದ್ದಾರೆ.

ಭಾರತದ ನಿವೃತ್ತ ಮುಖ್ಯ ನ್ಯಾಯಮೂರ್ತಿ ವೈ.ಕೆ.ಸಬರವಾಲ್ ಅವರ ಹೇಳಿಕೆ ನಿಜಕ್ಕೂ ದೇಶದ ನ್ಯಾಯಾಂಗ ವ್ಯವಸ್ಥೆಗೆ ಕನ್ನಡಿ ಹಿಡಿಯುವಂತಿದೆ. "ನ್ಯಾಯಾಂಗದಲ್ಲಿ ಭ್ರಷ್ಟಾಚಾರ ಅಥವಾ ಲಂಚ ಶೂನ್ಯಮಟ್ಟದಲ್ಲಿರಬೇಕು. ಅಧೀನ ನ್ಯಾಯಾಲಯಗಳಲ್ಲಿ ವ್ಯಾಪಕವಾಗಿ ಭ್ರಷ್ಟಾಚಾರ ತಾಂಡವವಾಡುತ್ತಿದ್ದು, ಜನತೆಗೆ ನ್ಯಾಯಾಂಗ ವ್ಯವಸ್ಥೆಯ ಬಗ್ಗೆ ಇರುವ ನಂಬಿಕೆಯನ್ನು ಛಿದ್ರಗೊಳಿಸುತ್ತಿವೆ". ಈ ಮೂಲಕ ಅವರು, ನ್ಯಾಯಾಂಗದ ಪಾರದರ್ಶಕತೆಯನ್ನು, ಹೊಣೆಗಾರಿಕೆಯನ್ನು ಮತ್ತು ಜವಾಬ್ದಾರಿಯನ್ನು ಪ್ರತಿಪಾದಿಸಿದ್ದಾರೆ.

ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಸ್.ಪಿ.ಭರೂಚಾ ಕೂಡಾ ಇಂಥದ್ದೇ ಅಭಿಪ್ರಾಯವನ್ನು ಭಿನ್ನವಾಗಿ ವ್ಯಕ್ತಪಡಿಸಿದ್ದಾರೆ. "ಡೆನ್ಮಾರ್ಕ್ ರಾಷ್ಟ್ರದಲ್ಲಿ ಏನೋ ಕೊಳೆತಂತಿದೆ" ಎಂದು ಸೂಕ್ಷ್ಮವಾಗಿ ತಲೆಗೆ ಹೊಡೆಯುವಂತೆ ಹೇಳಿದ್ದಾರೆ. ಅವರು ಹೇಳುವ ಪ್ರಕಾರ, ಉನ್ನತ ನ್ಯಾಯಾಧೀಶರ ಮಟ್ಟದಲ್ಲಿ ಶೇಕಡ 20ರಷ್ಟು ಮಂದಿಯ ಸಮಗ್ರತೆಯನ್ನು ಸಂಶಯದ ದೃಷ್ಟಿಯಿಂದ ನೋಡಬೇಕಾಗುತ್ತದೆ. ಉನ್ನತ ಮಟ್ಟದ ನ್ಯಾಯಾಧೀಶರ ಬಗ್ಗೆಯೂ ಹಲವು ವಿಶ್ವಾಸಾರ್ಹ ದೂರುಗಳಿವೆ. ಹಲವು ಪ್ರಕರಣಗಳಲ್ಲಿ ಜಯವೂ ಇಲ್ಲ; ಸೋಲೂ ಇಲ್ಲ ಎಂಬ ಬಗೆಯ ತೀರ್ಪುಗಳ ಬಗ್ಗೆ ಜನ ಮಾತನಾಡಿಕೊಳ್ಳುತ್ತಿದ್ದಾರೆ. ಆದರೆ ದೇಶದ ಸರ್ವೋಚ್ಚ ನ್ಯಾಯಾಲಯದ ವಿಚಾರದಲ್ಲಿ ನ್ಯಾಯಮೂರ್ತಿಗಳ ಸಮಗ್ರತೆಯನ್ನು ಪ್ರಶ್ನಿಸಲಾಗದು. ಭಾರತದ ಸುಪ್ರೀಂಕೋರ್ಟ್ ಹೇಳಿದಂತೆ, "ಭಾರತದ ನ್ಯಾಯವ್ಯವಸ್ಥೆ ನಿಂತಿರುವುದೇ ಜನತೆಯ ವಿಶ್ವಾಸದ ಮೇಲೆ. ಆದ್ದರಿಂದ ಸಮಾಜ ಸಹಜವಾಗಿಯೇ ನ್ಯಾಯಾಧೀಶರು

ಉನ್ನತ ಮಟ್ಟದ ಸಮಗ್ರತೆ ಹೊಂದಿರಬೇಕು, ಪ್ರಾಮಾಣಿಕತೆ, ನೈತಿಕ ಮೌಲ್ಯ, ನೀತಿಸಂಹಿತೆಯ ದೃಢತೆ ಮತ್ತು ಒತ್ತಡಗಳಿಂದ ಮುಕ್ತವಾಗಿ ಹಾಗೂ ಭ್ರಷ್ಟಾಚಾರದಿಂದ ಮುಕ್ತವಾಗಿರಬೇಕುಎಂದು ಬಯಸುತ್ತದೆ"

ನೂರು ವರ್ಷಗಳ ಹಿಂದೆ ಫ್ರಾನ್ಸಿಸ್ ಬಕೋನ್ ನ್ಯಾಯಾಂಗ ವ್ಯವಸ್ಥೆ ಬಗ್ಗೆ ಬರೆದ ಲೇಖನವೊಂದರಲ್ಲಿ, "ನ್ಯಾಯಸ್ಥಾನ ಯಾವಾಗಲೂ ಪವಿತ್ರಸ್ಥಾನ. ಆದ್ದರಿಂದ ಕೇವಲ ನ್ಯಾಯಾಧೀಶರ ಪೀಠ ಮಾತ್ರವಲ್ಲದೇ, ಬುಡ ಹಾಗೂ ಇಂಚಿಂಚು ಕೂಡಾ ಹಗರಣ ಮತ್ತು ಭ್ರಷ್ಟಾಚಾರದಿಂದ ಮುಕ್ತವಾಗಿರಬೇಕು. ಈಗ ಈ ಪರಿಸ್ಥಿತಿ ಹದಗೆಡುತ್ತಿದ್ದು, ವ್ಯಾಪಕ ಭ್ರಷ್ಟಾಚಾರ ನ್ಯಾಯಾಂಗ ವ್ಯವಸ್ಥೆಯಲ್ಲೂ ತಾಂಡವವಾಡುತ್ತಿರುವ ಹಿನ್ನೆಲೆಯಲ್ಲಿ ನ್ಯಾಯಾಧೀಶರ (ಹೊಣೆಗಾರಿಕೆ) ಮಸೂದೆ ಜಾರಿಗೆ ಬರಲಿದೆ. ಈ ಮಸೂದೆ ಕಾಯ್ದೆಯಾಗಿ ಪರಿವರ್ತನೆಯಾದರೆ, ನ್ಯಾಯಾಧೀಶರ ಮೇಲಿನ ಹಿಡಿತ ಮತ್ತಷ್ಟು ಸಡಿಲವಾಗಲಿದೆ. ಈ ಕಾಯ್ದೆಯ ಮೂಲಕ ಅವರ ಪದಚ್ಯುತಿ ಮತ್ತಷ್ಟು ಸಂಕೀರ್ಣವಾಗಲಿದೆ ಮಾತ್ರವಲ್ಲ ಅಸಾಧ್ಯ ಎನ್ನುವ ಸ್ಥಿತಿ ನಿರ್ಮಾಣವಾಗಲಿದೆ. ಇದು ವಿ.ರಾಮಸ್ವಾಮಿ ಪ್ರಕರಣದಲ್ಲಿ ಖಚಿತವಾಗಿದೆ"

ನ್ಯಾಯಾಂಗ ತಜ್ಞರು ಮತ್ತು ಕಾನೂನು ತಜ್ಞರು ಸಾಮಾನ್ಯವಾಗಿ ಅಭಿಪ್ರಾಯಪಡುವಂತೆ, ನ್ಯಾಯಾಧೀಶರಲ್ಲಿ ಜನಪ್ರಿಯತೆಯ ಹುಚ್ಚು ಮತ್ತು ಭ್ರಷ್ಟಾಚಾರ ಬೆಳೆಯಲು ಮುಖ್ಯ ಕಾರಣವೆಂದರೆ, ನ್ಯಾಯಾಂಗದ ಕ್ರಿಯಾಶೀಲತೆ. ನ್ಯಾಯಾಂಗ ತನ್ನ ಅಧಿಕಾರದ ವ್ಯಾಪ್ತಿಯನ್ನು ಮೀರಿ ಹೆಜ್ಜೆ ಹಾಕುತ್ತಿದೆ ಎಂಬ ಆರೋಪಗಳೂ ಇವೆ. ಅಂದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸಕಾಂಗ ಹಾಗೂ ಕಾರ್ಯಾಂಗಕ್ಕೆ ಮೀಸಲಾದ ವಿಷಯಗಳಲ್ಲಿ ಗಡಿಯನ್ನು ಉಲ್ಲಂಘಿಸುತ್ತಿವೆ ಎನ್ನಲಾಗುತ್ತಿದೆ. ನ್ಯಾಯಾಂಗದ ಕ್ರಿಯಾಶೀಲತೆಯನ್ನು ಇಂದು ಋಣಾತ್ಮಕ ಅಂಶವಾಗಿ


www.shikarat.com

ಪರಿಗಣಿಸಲಾಗುತ್ತಿದ್ದು, ವಾಸ್ತವವಾಗಿ ಇದು ಸರಿಯಲ್ಲ. ಇದು ಕಾನೂನಿನ ವಿವೇಚನಾಹೀನತೆಯ ವಿಶ್ಲೇಷಣೆಯನ್ನೂ ಒಳಗೊಳ್ಳುತ್ತದೆ. ಹಾಲಿ ಇರುವ ಕಾನೂನುಗಳನ್ನು ಸದ್ಯದ ಪರಿಸ್ಥಿತಿಗೆ ತಕ್ಕಂತೆ ವಿಶ್ಲೇಷಿಸುವ ಮೂಲಕ ಕಂದಕವನ್ನು ನಿವಾರಿಸುವುದು ನ್ಯಾಯಾಂಗ ಕ್ರಿಯಾಶೀಲತೆಯ ನಿಜವಾದ ಅರ್ಥ. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ, ನ್ಯಾಯಾಂಗ ಕ್ರಿಯಾಶೀಲತೆ ಎಂದರೆ ಕಾನೂನಿನ ಕಾರಣವನ್ನು ಸಮರ್ಥಿಸುವುದು. ಇದು ನ್ಯಾಯಾಂಗ ವಿಮರ್ಶೆಯ ಅವಿಭಾಜ್ಯ ಅಂಗ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ದೇಶದಲ್ಲಿ ಮುಖ್ಯವಾಗಿ ಕಾರ್ಯಾಂಗ, ಶಾಸಕಾಂಗ ಹಾಗೂ ನ್ಯಾಯಾಂಗ ಕಾರ್ಯನಿರ್ವಹಿಸುತ್ತವೆ. ಪ್ರತಿಯೊಂದು ಅಂಗಕ್ಕೂ ಅದಕ್ಕೇ ನಿಗದಿಪಡಿಸಿದ ಪಾತ್ರಗಳಿರುತ್ತವೆ. ಕಾರ್ಯಾಂಗಕ್ಕೆ ನೀಡಿದ ಅಧಿಕಾರದ ವ್ಯಾಪ್ತಿಯನ್ನು ಮೀರಿ ಅದು ವರ್ತಿಸಿದಾಗ, ನ್ಯಾಯಾಧೀಶರು ಮಧ್ಯಪ್ರವೇಶಿಸಿ ಅದನ್ನು ಸರಿದಾರಿಯಲ್ಲಿ ಮುನ್ನಡೆಯುವಂತೆ ಸೂಚಿಸಬಹುದಾಗಿದೆ. ಅಂತೆಯೇ ಸಂವಿಧಾನಾತ್ಮಕ ಅಥವಾ ಕಾನೂನಾತ್ಮಕ ಬದ್ಧತೆಗಳನ್ನು ನಿರ್ವಹಿಸಲು ಶಾಸಕಾಂಗ ವಿಫಲವಾದ ಸಂದರ್ಭದಲ್ಲೂ ನ್ಯಾಯಾಲಯ ಮಧ್ಯಪ್ರವೇಶಿಸಬಹುದಾಗಿದೆ. ಇದರ ಜತೆಗೆ ತತ್ವಗಳಿಗಾಗಿ ನೀತಿನಿಯಮಗಳನ್ನು ಬಲಿಕೊಡಲಾಗದು ಎನ್ನುವುದೂ ಅಷ್ಟೇ ಸತ್ಯ. ಬಳಕೆಯ ನಿಯಮಾವಳಿಗಳು, ಸಾಮಾಜಿಕ– ಆರ್ಥಿಕ ಕ್ರಿಯೆಗಳು ಮತ್ತು ವಿವೇಚನಾಶೀಲ ಅನುಷ್ಠಾನದಂಥ ಅಂಶಗಳನ್ನು ಸರ್ಕಾರ ನಿರ್ವಹಿಸಬೇಕಾಗುತ್ತದೆ. ಆದರೆ ಆಡಳಿತದ ದುರುಪಯೋಗ, ನ್ಯಾಯಸಮ್ಮತವಲ್ಲದ ವಿಧಿವಿಧಾನಗಳನ್ನು ಅನುಸರಿಸುವುದು, ಸಂವಿಧಾನಬಾಹಿರ ಕಾರ್ಯಚಟುವಟಿಕೆಗಳು ಮುಂತಾದ ಅಂಶಗಳನ್ನು ನ್ಯಾಯಾಂಗ ಖಂಡಿತವಾಗಿಯೂ ತಡೆಯಬಹುದಾಗಿದೆ. ಈ ಹಿನ್ನೆಲೆಯಲ್ಲಿ ನ್ಯಾಯಾಂಗ ಕ್ರಿಯಾಶೀಲತೆ ಅನಿವಾರ್ಯವಾಗಿಬಿಟ್ಟಿದೆ. ಶಾಸನಸಭೆಗಳಲ್ಲಿ ತಾತ್ಕಾಲಿಕ ರಾಜಕೀಯ ಬಹುಮತದ ತಂತ್ರಗಾರಿಕೆಯನ್ನು ತಡೆಯಲು ಇದು ಅಗತ್ಯ.

ನ್ಯಾಯಾಂಗ ಕ್ರಿಯಾಶೀಲತೆಯನ್ನು ಉತ್ತೇಜಿಸುವಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ಪ್ರಮುಖ ಪಾತ್ರ ವಹಿಸುತ್ತವೆ. ಕೆಲವೊಂದು ಪ್ರಕರಣಗಳಲ್ಲಿ ನ್ಯಾಯಾಲಯ ಕಾರ್ಯಾಂಗದ ಕೆಲಸವ್ಯಾಪ್ತಿಯನ್ನು ಉಲ್ಲಂಘಿಸಿ, ಸೂಚನೆಗಳನ್ನು ನೀಡುತ್ತದೆ. ಕೆಲವೊಮ್ಮೆ ಕಾನೂನುಗಳ ದುರುಪಯೋಗವೂ ಶಾಸಕಾಂಗದಿಂದ ನಡೆಯಬಹುದು. ಆದರೆ ಇಂಥ ಕಾನೂನುಗಳನ್ನು ರೂಪಿಸುವುದು ಶಾಸಕಾಂಗದ ಹೊಣೆ. ಅದು ನ್ಯಾಯಾಲಯದ ಹೊಣೆಯಲ್ಲ. ಅಂದರೆ ಇಲ್ಲಿ ನ್ಯಾಯಾಂಗ ಕೆಲವೊಮ್ಮೆ ಶಾಸಕಾಂಗದ ಕಾರ್ಯವನ್ನೂ ಮಾಡುತ್ತದೆ. ಕೆಲ ಪ್ರಕರಣಗಳಲ್ಲಿ ನ್ಯಾಯಾಂಗದ ಕ್ರಿಯಾಶೀಲತೆ ಇಡೀ ವ್ಯವಸ್ಥೆಯನ್ನೇ ತೊಂದರೆಗೆ ಈಡುಮಾಡಬಹುದು.

ಅದರಲ್ಲೂ ಮುಖ್ಯವಾಗಿ ಶಾಸಕಾಂಗ ಹಾಗೂ ಕಾರ್ಯಾಂಗದ ಕಾರ್ಯಕ್ಷೇತ್ರವನ್ನು ನ್ಯಾಯಾಂಗ ಉಲ್ಲಂಘಿಸಿದ ಸಂದರ್ಭದಲ್ಲಿ ಇಂಥ ಪರಿಸ್ಥಿತಿ ಉದ್ಭವಿಸುತ್ತದೆ. ಕೆಲವೊಂದು ಪ್ರಕರಣಗಳಲ್ಲಿ ನ್ಯಾಯಾಲಯದ ಹಸ್ತಕ್ಷೇಪ ಅಚ್ಚರಿ ಹುಟ್ಟಿಸುತ್ತದೆ. ಆದರೆ ನಾವು ಅಸಹಜ ಪರಿಸ್ಥಿತಿಯನ್ನು ಎದುರಿಸುತ್ತಿದ್ದು, ನ್ಯಾಯಾಂಗವಷ್ಟೇ ಸಂವಿಧಾನಾತ್ಮಕ ಮೌಲ್ಯಗಳನ್ನು ರಕ್ಷಿಸಲು ಸಾಧ್ಯ ಎಂಬ ಭಾವನೆ ಜನತೆಯಲ್ಲಿ ದಟ್ಟವಾಗಿದೆ. ಜತೆಗೆ ಸಂವಿಧಾನವನ್ನು ವಿಶ್ಲೇಷಿಸುವ ಅಧಿಕಾರ ಅದಕ್ಕೆ ಮಾತ್ರ ಇದೆ. ಶಾಸಕಾಂಗ ಈ ನಿಟ್ಟಿನಲ್ಲಿ ಕಳಕಳಿ ಹೊಂದಿಲ್ಲದಿರುವುದು ಕೂಡಾ ನ್ಯಾಯಾಂಗದ ಕ್ರಿಯಾಶೀಲತೆಗೆ ಕಾರಣವಾಗುತ್ತದೆ.

ಕೆಲ ಜವಾಬ್ದಾರಿಗಳಿಂದ ಶಾಸಕಾಂಗ ಹಾಗೂ ಕಾರ್ಯಾಂಗ ನುಣುಚಿಕೊಂಡಾಗ, ಜನತೆಯ ಹಕ್ಕುಗಳ ರಕ್ಷಣೆಗಾಗಿ ನ್ಯಾಯಾಂಗ ತನ್ನ ವ್ಯಾಪ್ತಿಮೀರಿ ವರ್ತಿಸುವುದು ಅನಿವಾರ್ಯವಾಗುತ್ತದೆ. ಇದಕ್ಕೆ ಹೊಸ ಹಾಗೂ ವಿನೂತನ ಮಾರ್ಗಗಳನ್ನೂ ನ್ಯಾಯಾಲಯ ಅನುಸರಿಸುತ್ತಿದೆ. ಅದು ಪರಿಸರ ಮಾಲಿನ್ಯದ ವಿಚಾರ ಇರಬಹುದು; ಎಲ್‌ಪಿಜಿ ಹಂಚಿಕೆ ಹಗರಣ, ಹವಾಲಾ ಹಗರಣ ಹೀಗೆ ಪ್ರಮುಖ ಹಂತಗಳಲ್ಲಿ ನ್ಯಾಯಾಲಯ ಸಂವಿಧಾನಾತ್ಮಕ ಹಕ್ಕುಗಳನ್ನು ಎತ್ತಿಹಿಡಿದ ನಿದರ್ಶನ ನಮ್ಮ ಮುಂದಿದೆ. ಇತರ ಎರಡು ಅಂಗಗಳು ತಮ್ಮ ಪಾತ್ರವನ್ನು ಸಮರ್ಪಕವಾಗಿ ನಿರ್ವಹಿಸಲು ವಿಫಲವಾಗಿರುವುದು ಮತ್ತು ನಿರಾಕರಿಸುತ್ತಿರುವ ಹಿನ್ನೆಲೆಯಲ್ಲಿ, ನ್ಯಾಯಾಂಗದ ಪಾತ್ರದಲ್ಲೂ ಕೊಂಚ ಮಟ್ಟಿನ ಬದಲಾವಣೆ ಅನಿವಾರ್ಯವಾಗಿದೆ.

ಈ ಹಿನ್ನೆಲೆಯಲ್ಲಿ ಖ್ಯಾತ ನ್ಯಾಯವಾದಿ ನಾನಿ ಫಾಲ್ಕಿವಾಲಾ ಹೇಳಿದಂತೆ, "ನಮ್ಮ ನ್ಯಾಯವ್ಯವಸ್ಥೆಯಲ್ಲಿ ಗುಣಮಟ್ಟ ಕುಸಿದಿದೆ ನಿಜ; ಭ್ರಷ್ಟಾಚಾರ ಇಣುಕಿರುವುದೂ ಅಷ್ಟೇ ನಿಜ. ಆದರೆ ದೇಶದ ವ್ಯವಸ್ಥೆಯನ್ನು ಮತ್ತು ಆಡಳಿತವನ್ನು ಸಮರ್ಪಕ ಮಾರ್ಗದಲ್ಲಿ ಕೊಂಡೊಯ್ಯಬೇಕಾದರೆ ನ್ಯಾಯಾಲಯದಿಂದಷ್ಟೇ ಸಾಧ್ಯ. ಇದು ಪ್ರಜಾಪ್ರಭುತ್ವದ ಅನಿವಾರ್ಯತೆಯೂ ಆಗಿದ.ಎ ಇದು ಅಂಥ ಸ್ವಾಗತಾರ್ಹ ಬೆಳವಣಿಗೆಯೇನೂ ಅಲ್ಲ; ಆದರೆ ಸದ್ಯದ ಪರಿಸ್ಥಿತಿಯಲ್ಲಿ ಇದಕ್ಕೆ ಪರ್ಯಾಯ ಆಯ್ಕೆ ಇಲ್ಲ. ಕಳೆದುಕೊಂಡ ಪ್ರಜಾಪ್ರಭುತ್ವದ ಹಕ್ಕುಗಳನ್ನು ಮರಳಿ ಪಡೆಯಲು ಜನತೆಗೆ ಏಕೈಕ ಆಶಾಕಿರಣವೆಂದರೆ ನ್ಯಾಯಾಲಯಗಳು"

ಆದರೆ ನ್ಯಾಯಾಂಗದ ಕ್ರಿಯಾಶೀಲತೆ ಜನಪ್ರಿಯತೆಯ ಗೀಳಾಗಬಾರದು. ಅಥವಾ ಇದು ನ್ಯಾಯಾಂಗದ ಸರ್ವಾಧಿಕಾರತ್ವವಾಗಬಾರದು. ಹಾಗಾಗಾದ ಅದು ಭ್ರಷ್ಟಾಚಾರಕ್ಕೆ ಎಡೆಮಾಡಿಕೊಡುತ್ತದೆ. ನ್ಯಾಯಾಂಗ ವ್ಯವಸ್ಥೆಯಲ್ಲಿನ ಅಧಿಕಾರಿಗಳು ಸ್ವಯಂ ಶಿಸ್ತು ರೂಢಿಸಿಕೊಂಡು ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು. ಜತೆಗೆ ನ್ಯಾಯಾಧೀಶರು ಸರ್ಕಾರ ನೀತಿನಿಯಮಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವುದು ನಿಲ್ಲಬೇಕು. ನ್ಯಾಯಾಂಗ ಕ್ರಿಯಾಶೀಲತೆ ಎನ್ನುವುದು ಗುರಿನಿರ್ದೇಶಿಸದ ಕ್ಷಿಪಣಿಯಲ್ಲ. ಇದನ್ನು ಸಮರ್ಥವಾಗಿ ನಿಯಂತ್ರಿಸಬೇಕು ಮತ್ತು ಸರಿದಾರಿಯಲ್ಲಿ ಕೊಂಡೊಯ್ಯಬೇಕು. ನ್ಯಾಯಾಲಯಗಳು ಈಗಾಗಲೇ ನಿಗದಿಪಡಿಸಿದ ಚೌಕಟ್ಟಿನಲ್ಲಿ ಮತ್ತು ಸಂವಿಧಾನಾತ್ಮಕವಾಗಿ ಕಾರ್ಯ ನಿರ್ವಹಿಸಬೇಕು. ಯಾವುದೇ ನಿರ್ಧಾರಗಳು ನ್ಯಾಯತತ್ವಕ್ಕೆ ಅನುಗುಣವಾಗಿರಬೇಕು ಮತ್ತು ಸಂವಿಧಾನಾತ್ಮಕ ಮೌಲ್ಯಗಳನ್ನು ಎತ್ತಿಹಿಡಿಯುವಂತಿರಬೇಕು.

ನ್ಯಾಯಾಲಯಗಳು ಇತರ ಅಂಗಗಳ ಕಾರ್ಯಕ್ಷೇತ್ರವನ್ನು ಉಲ್ಲಂಘಿಸದಂತೆ ಎಚ್ಚರಿಕೆಯ ಹೆಜ್ಜೆ ಇಡಬೇಕು. ಏಕೆಂದರೆ ನ್ಯಾಯಾಂಗಕ್ಕೆ ಸಂವಿಧಾನಾತ್ಮಕ ಮೌಲ್ಯಗಳನ್ನು ರಕ್ಷಿಸುವ ದೊಡ್ಡ ಹೊಣೆ ಇದೆ. ಈ ದೇಶದ ಜನತೆ ನ್ಯಾಯಾಲಯಗಳ ಬಗ್ಗೆ ಅಪಾರ ವಿಶ್ವಾಸ ಮತ್ತು ನಂಬಿಕೆಯನ್ನು ಹೊಂದಿದ್ದಾರೆ. ಇವುಗಳ ಕಾವಲುಗಾರರಾಗಿ ನ್ಯಾಯಾಧೀಶರು ಕೆಲಸ ಮಾಡಬೇಕು. ಈ ನಂಬಿಕೆಯನ್ನು ಕಳೆದುಕೊಂಡರೆ, ನ್ಯಾಯಾಂಗ ವ್ಯವಸ್ಥೆಯ ಪತನಕ್ಕೆ ಕಾರಣವಾಗುತ್ತದೆ ಮತ್ತು ಅದು ಅಕ್ಷಮ್ಯ ಅಪರಾಧವಾಗುತ್ತದೆ.

ನ್ಯಾಯಾಂಗದ ಕ್ರಿಯಾಶೀಲತೆ ಮತ್ತು ನ್ಯಾಯಾಂಗದ ನಿರ್ಬಂಧ ಎರಡೂ ಒಂದೇ ನಾಣ್ಯದ ಎರಡು ಮುಖಗಳು. ನ್ಯಾಯಾಲಯದ ಕಾರ್ಯಕಲಾಪಗಳಲ್ಲಿ ನ್ಯಾಯಾಂಗದ ಹೊಣೆಗಾರಿಕೆಯೂ ಅಷ್ಟೇ ಮುಖ್ಯವಾಗುತ್ತದೆ. ಇದು ಸಂವಿಧಾನಾತ್ಮಕ ಬದ್ಧತೆಯೂ ಹೌದು. ನ್ಯಾಯಾಂಗ



www.shikarat.com

ಕ್ರಿಯಾಶೀಲತೆಯು ನ್ಯಾಯಾಂಗದ ಸಾಹಸವಾಗಿ ಬದಲಾಗಬಾರದು. ಈ ಹಿನ್ನೆಲೆಯಲ್ಲಿ ನ್ಯಾಯಾಲಯಗಳು ಹೆಚ್ಚು ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು ಮತ್ತು ಹೆಚ್ಚು ಜವಾಬ್ದಾರಿಯುತವಾಗಿರಬೇಕು. ನ್ಯಾಯಾಂಗ ಕ್ರಿಯಾಶೀಲತೆ ಮಾರ್ಗನಿರ್ದೇಶನವಿಲ್ಲದ ಕ್ಷಿಪಣಿಯಲ್ಲ; ಅದು ವಿಫಲವಾದರೆ, ಇಡೀ ಅರಾಜಕತೆಯೇ ಸೃಷ್ಟಿಯಾಗುತ್ತದೆ ಎನ್ನುವುದನ್ನು ಮನಸ್ಸಿನಲ್ಲಿಟ್ಟುಕೊಂಡು ಕಾರ್ಯ ನಿರ್ವಹಿಸಬೇಕು.

ನ್ಯಾಯಾಲಯ ನಿಗದಿತ ಉದ್ದೇಶಗಳಿಗಷ್ಟೇ ತನ್ನ ಸೀಟಿ ಊದಬೇಕು. ನ್ಯಾಯಾಲಗಳನ್ನು ಸರ್ಕಾರ ನಡೆಸಲು ಸಾಧ್ಯವಿಲ್ಲ ಅಥವಾ ಕಾರ್ಯಾಂಗದ ಎಲ್ಲ ಕೆಲಸಗಳನ್ನು ನಿರ್ವಹಿಸಲಾಗದು ಎನ್ನುವುದು ಅಷ್ಟೇ ಸತ್ಯ. ವೈಯಕ್ತಿಕ ಹಕ್ಕುಗಳನ್ನು ರಕ್ಷಿಸುವ ಸಲುವಾಗಿ ಸಂವಿಧಾನಾತ್ಮಕ ಮೌಲ್ಯಗಳನ್ನು ಎತ್ತಿಹಿಡಿಯುವುದು ಮತ್ತು ಸಮರ್ಪಕ ಸುರಕ್ಷಾ ಕ್ರಮಗಳನ್ನು ಸೂಚಿಸುವುದಷ್ಟೇ ನ್ಯಾಯಾಂಗದ ಕೆಲಸ. ಆದರೆ ಸಂವಿಧಾನದ ಇತಿಮಿತಿಯ ಚೌಕಟ್ಟಿನಲ್ಲೇ ನ್ಯಾಯಾಂಗ ಕಾರ್ಯನಿರ್ವಹಿಸಬೇಕಾಗುತ್ತದೆ. ಅಂದರೆ ನ್ಯಾಯಾಧೀಶರು ತಮ್ಮ ಕರ್ತವ್ಯಗಳನ್ನು ನಿಭಾಯಿಸುವಲ್ಲಿ ಹೆಚ್ಚು ಶಿಸ್ತು ಹಾಗೂ ಹೊಣೆಗಾರಿಕೆ ಪ್ರದರ್ಶಿಸುವುದು ಅಗತ್ಯ. ನ್ಯಾಯಾಂಗದ ಕಾರ್ಯವೈಖರಿಯಿಂದ ನ್ಯಾಯವ್ಯವಸ್ಥೆ ಮಲಿನವಾಗದಂತೆ ನೋಡಿಕೊಳ್ಳಬೇಕಾದ್ದು ಮತ್ತು ಸಾರ್ವಜನಿಕ ವಿಶ್ವಾಸಕ್ಕೆ ಧಕ್ಕೆ ಬಾರದಂತೆ ನ್ಯಾಯಾಂಗವನ್ನು ಸಂರಕ್ಷಿಸಬೇಕಾದ ಹೊಣೆ ನ್ಯಾಯಾಧೀಶರ ಮೇಲಿದೆ.

ಯಾವುದೇ ರಾಜಕೀಯ ಅಥವಾ ಸಾಮಾಜಿಕ ಸಿದ್ಧಾಂತಗಳ ವಿಚಾರದಲ್ಲಿ ಸಂವಿಧಾನಾತ್ಮಕ ಗುರಿಗಳನ್ನು ಮೀರುವುದು ನ್ಯಾಯಾಂಗ ಕ್ರಿಯಾಶೀಲತೆಯಲ್ಲ. ಅದು ಸಂವಿಧಾನದ ಅಂಶಗಳನ್ನು ಅಗೌರವದಿಂದ ಕಾಣುವುದಾಗುತ್ತದೆ. ಯಾವುದೇ ನ್ಯಾಯಾಲಯದ ಕಾರ್ಯ ರಾಜಕೀಯ ಅನುಮಾನ, ನೈತಿಕವಾಗಿ ಸಮರ್ಥನೀಯವಲ್ಲದಿದ್ದಾಗ ಮತ್ತು ಸಂವಿಧಾನಾತ್ಮಕವಲ್ಲದಿದ್ದಾಗ ಅದನ್ನು ನಿಯಂತ್ರಿಸುವುದು ಅನಿವಾರ್ಯ. ಆಧುನೀಕತೆ ಮತ್ತು ಸ್ವಯಂ ನಿಯಂತ್ರಣದ ಅಂಶಗಳನ್ನು ಒಳಗೊಂಡ ನ್ಯಾಯಾಂಗ ಕ್ರಿಯಾಶೀಲತೆ ಜನರಲ್ಲಿ ವಿಶ್ವಾಸವನ್ನು ಹೆಚಿಸಬೇಕು ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯ ದಕ್ಷತೆಗೆ ಪೂರಕವಾಗಿರಬೇಕು. ಅಂದರೆ ಕಾರ್ಯಾಂಗ ಮತ್ತು ಶಾಸಕಾಂಗಗಳು ಸಕ್ರಿಯವಾಗಿ ಮತ್ತು ಪ್ರಾಮಾಣಿಕವಾಗಿ ತಮ್ಮ ಕೆಲಸ ನಿರ್ವಹಿಸಲು ಪೂರಕವಾದ ಕ್ರಿಯಾಶೀಲತೆ ಅಗತ್ಯ. ಸಂವಿಧಾನದಲ್ಲಿ ಸ್ಪಷ್ಟವಾಗಿ ನಿರ್ದೇಶಿಸಿದಂತೆ, ನ್ಯಾಯಾಂಗ ಇದರ ಮೇಲೆ ನಿಗಾ ವಹಿಸುವ ಕಾರ್ಯವನ್ನಷ್ಟೇ ಮಾಡಬೇಕು.

## 23. ರಾಜ್ಯದಲ್ಲಿ ಸಾವಯವ ಕೃಷಿಯ ಪ್ರಸ್ತುತ ಪರಿಸ್ಥಿತಿ ಮತ್ತು ಮಾರ್ಗೋಪಾಯಗಳು

ಕರ್ನಾಟಕವು ತನ್ನ ಹತ್ತು ಕೃಷಿ ವಲಯಗಳಲ್ಲಿ ವಿವಿಧ ಬಗೆಯ ಮಣ್ಣು ಮತ್ತು ಹವಾಮಾನಗಳನ್ನು ಹೊಂದಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ಸಮುದ್ರ ತೀರ ಪ್ರದೇಶ, ಪಶ್ಚಿಮ ಘಟ್ಟಗಳು ಮತ್ತು ಮೈದಾನ ಪ್ರದೇಶಗಳಿದ್ದು ವಿವಿಧ ಬಗೆಯ ಬೆಳೆಗಳನ್ನು ಬೆಳೆಯಲು ಅನುಕೂಲಕರವಾಗಿದೆ. ರಾಜ್ಯದ ವಾರ್ಷಿಕ ಸರಾಸರಿ ಮಳೆ 1130 ಮಿ.ಮೀ. ಇದ್ದು ಹಿತಕರ ತಾಪಮಾನವು ವರ್ಷಾದ್ಯಂತ ವಿವಿಧ ಬೆಳೆಗಳನ್ನು ಬೆಳೆಯಲು ಉತ್ತಮ ಪರಿಸ್ಥಿತಿಗಳನ್ನು ಒದಗಿಸಿದೆ. ರಾಜ್ಯವು ತೋಟಗಾರಿಕೆ ಬೆಳೆಗಳಲ್ಲಿ ಹಾಗೂ ಪಶುಸಂಗೋಪನಾ ಕ್ಷೇತ್ರಗಳಲ್ಲಿಯ ಸಾಧನೆಯಿಂದಾಗಿ ಉತ್ಕೃಷ್ಟ ಸ್ಥಾನ ಗಳಿಸಿದೆ. ಹೀಗಾಗಿ ಕರ್ನಾಟಕ ರಾಜ್ಯವನ್ನು ಅನೇಕ ವೇಳೆ ವಿವಿಧ ಬೆಳೆಗಳ ಬೀಡು ಎಂದು ಕರೆಯಲಾಗಿದೆ. ಜೊತೆಗೆ ರಾಜ್ಯದಲ್ಲಿನ ಅನೇಕ ರೈತರು ಸಾವಯವ ಕೃಷಿಯಲ್ಲಿ ಮೊದಲಿಗರಾಗಿದ್ದು ತಮ್ಮ ಸ್ಥಳೀಯ, ಸ್ವಂತಿಕೆಯ ತಿಳುವಳಿಕೆ ಆಧಾರಿದಂದಲೇ ವಿವಿಧ ಬೇಸಾಯ ಪದ್ಧತಿಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಅವರು ಸಾವಯವ ನಿರುಪಯುಕ್ತ ವಸ್ತುಗಳನ್ನು ಬೇಸಾಯಕ್ಕೆ ಬಳಸಿಕೊಳ್ಳುವಲ್ಲಿ ತಮ್ಮದೇ ಆದ ವಿಧಾನಗಳನ್ನು ಬೆಳೆಸಿಕೊಂಡಿದ್ದು ಪೀಡೆ ಹಾಗೂ ರೋಗಗಳ ಹತೋಟಿಗಾಗಿ ಸಮಗ್ರ ಪೀಡೆ ಹತೋಟಿ ತಂತ್ರಗಳನ್ನು ರೂಪಿಸಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ ಸದ್ದಿಲ್ಲದೆ ಜರುಗುತ್ತಿರುವ ಈ ಬೆಳವಣಿಗೆಯು ರೈತರು ಸಾವಯವ ಕೃಷಿ ಉತ್ಪನ್ನಗಳಿಗೆ ನಿರ್ದಿಷ್ಟ ಮಾರುಕಟ್ಟೆ ದೊರೆಯುವುದೆಂದು ನಂಬಿರುವುದು ಕಾರಣವಲ್ಲ. ತಮ್ಮ ಆರ್ಥಿಕ ಪರಿಸ್ಥಿತಿಗಳ ಸುಧಾರಣೆಯ ಜೊತೆಗೆ ಹೊರಗಿನಿಂದ ಪೋಷಕಾಂಶ ಪರಿಕರಗಳನ್ನು ಮಣ್ಣಿಗೆ ಹಾಕುವುದರಲ್ಲಿ ಮಿತವ್ಯಯ, ಮಣ್ಣಿನ ಫಲವತ್ತತೆಯ ಸುಧಾರಣೆ, ಮಣ್ಣು ವಿನಾಶದ ತಡೆ, ಜೈವಿಕ ಪೀಡೆ ಹತೋಟಿ ಮತ್ತು ಭೂ ಸಂರಕ್ಷಣೆ ಸಾಧ್ಯವೆಂಬ ಮೂಲ ಉದ್ದೇಶದಿಂದಾಗಿ ರಾಜ್ಯದ ರೈತರು ಸಾವಯುವ ಕೃಷಿಗೆ ಮಾರು ಹೋಗಿದ್ದಾರೆ.

ಸಾವಯವ ಕೃಷಿಯಲ್ಲಿ ನಿರತರಾದ ಕ್ರಿಯಾಶೀಲ ರೈತ ಸಂಘಗಳು ಅಸ್ತಿತ್ವದಲ್ಲಿದ್ದು ಅವುಗಳನ್ನು ಪರಿಪೋಷಿಸುವ / ಉತ್ತೇಜಿಸುವ ಸರ್ಕಾರೇತರ ಸಂಸ್ಥೆ (NGO)ಗಳೂ ಇವೆಯೆಂದು ತಿಳಿಸುವುದು ಈ ಸಂದರ್ಭದಲ್ಲಿ ಯುಕ್ತವಾಗಿರುತ್ತದೆ. ರಾಜ್ಯದಲ್ಲಿ ಸಾವಯವ ಕೃಷಿ ಆಧಾರಿತ ಆಹಾರ ಪದಾರ್ಥಗಳ ಬಳಕೆ ಕುರಿತು ಶ್ರೀಮಂತ ವರ್ಗದವರಲ್ಲಿ ಮತ್ತು ನಾಗರಿಕ ಸಮಾಜದಲ್ಲಿ ಅರಿವು ಸಹ ಸತತವಾಗಿ ಹೆಚ್ಚುತ್ತಿದೆ.

ಇವೆಲ್ಲಕ್ಕಿಂತ ಹೆಚ್ಚಾಗಿ, ಭಾರತೀಯ ಆಂತರಿಕ ಮಾರುಕಟ್ಟೆ ಸಾಕಷ್ಟು ವಿಶಾಲವಾಗಿದ್ದು, ದೇಶದಲ್ಲಿ ಸಾವಯವ ಉತ್ಪನ್ನಗಳ ಮಾರುಕಟ್ಟೆಗೆ ವಿಫುಲ ಅವಕಾಶಗಳಿವೆ.

ಅಮೆರಿಕ ಸಂಯುಕ್ತ ಸಂಸ್ಥಾನ, ಜಪಾನ್ ಮತ್ತು ಯುರೋಪಿಯನ್ ಒಕ್ಕೂಟಗಳಂಥ ಪ್ರದೇಶಗಳಿಗೆ ಪ್ರಮಾಣೀಕೃತ ಸಾವಯವ ಉತ್ಪನ್ನಗಳನ್ನು ರಫ್ತು ಮಾಡಲು ಸಹ ಹೆಚ್ಚಿನ ಅವಕಾಶಗಳಿರುತ್ತವೆ. ಕೆಲವು ರೈತರು ಸಾವಯವ ಕೃಷಿ ಮಾಡುತ್ತಿದ್ದರೂ ಕೂಡ ಅವರಿಗೆ ಪ್ರಮಾಣೀಕರಣದ ಬಗ್ಗೆ ತಿಳುವಳಿಕೆ ಕಡಿಮೆಯಿರುತ್ತದೆ. ಇವರು ಇನ್ನೂ ಪ್ರಮಾಣೀಕರಣದ ಪ್ರಾಮುಖ್ಯತೆಯನ್ನು ಅರಿಯಬೇಕಾಗಿರುತ್ತದೆ.

ರಫ್ತಿಗಾಗಿ ಸಾವಯವ ಉತ್ಪನ್ನಗಳ ಪ್ರಮಾಣೀಕರಣದ ಪ್ರಾಮುಖ್ಯತೆಯನ್ನು ಪರಿಗಣಿಸಿ ಭಾರತ ಸರ್ಕಾರವು ಅಂತರರಾಷ್ಟ್ರೀಯ ಮಾನಕಗಳ ನಿಟ್ಟಿನಲ್ಲಿ ಇಂಟರ್ ನ್ಯಾಷನಲ್ ಫೆಡರೇಶನ್ ಆಫ್ ಆರ್ಗ್ಯಾನಿಕ್ ಅಗ್ರಿಕಲ್ಚರ್ ಮೂವ್‌ಮೆಂಟ್ಸ್‌ಗೆ ಸಮಾನಾಂತರವಾದ ಮಾನದಂಡಗಳನ್ನು (ನ್ಯಾಷನಲ್ ಸ್ಟ್ಯಾಂಡರ್ಡ್ಸ್ ಆಫ್ ಆರ್ಗ್ಯಾನಿಕ್ ಪ್ರೊಡಕ್ಷನ್) ಹೊರತಂದಿದೆ. ಪ್ರಮಾಣೀಕರಣಕ್ಕಾಗಿ ಈಗಾಗಲೇ ಸರ್ಕಾರವು ಅನೇಕ ಸಂಘ ಸಂಸ್ಥೆಗಳನ್ನು ಗುರುತಿಸಿದೆ.

### ವಿವಿಧ ಇಲಾಖಾ ಯೋಜನೆಗಳ ಸಂಯೋಜನೆಯಿಂದ ಸಮಗ್ರ ರೀತಿಯಲ್ಲಿ ಸಾವಯವ ಕೃಷಿಯ ಉತ್ತೇಜನ

ಪ್ರಸ್ತುತ ರಾಜ್ಯ ಸರ್ಕಾರದ ಅಭಿವೃದ್ಧಿ ಇಲಾಖೆಗಳು ಪ್ರತ್ಯೇಕವಾಗಿ ಒಂದಲ್ಲ ಒಂದು ರೀತಿಯಲ್ಲಿ ಸಾವಯವ ಕೃಷಿ ಬೆಳವಣಿಗೆ ಹಾಗೂ ಪರಿಸರ ಸಂರಕ್ಷಣ ಚಟುವಟಿಕೆಗಳಲ್ಲಿ ಕಾರ್ಯನಿರತವಾಗಿವೆ. ಈ ಎಲ್ಲಾ ಇಲಾಖೆಗಳ ಸಂಬಂಧಿತ ಯೋಜನೆಗಳನ್ನು ಒಂದೆಡೆ ತಂದು


www.shikarat.com

ರಾಜ್ಯದಲ್ಲಿ ಸಾವಯವ ಕೃಷಿಯನ್ನು ಸಂಯೋಜಿತವಾಗಿ ಅಭಿವೃದ್ಧಿಪಡಿಸುವುದು ತುಂಬಾ ಅಗತ್ಯವಾಗಿದೆ. ಈ ಮುಂದೆ ತಿಳಿಸಲಾಗಿರುವ ರಾಜ್ಯ/ಭಾರತ ಸರ್ಕಾರದ ಇಲಾಖೆಗಳು / ಅಧೀನ ಸಂಸ್ಥೆಗಳು ಮತ್ತು ಕೃಷಿ ವಿಶ್ವ ವಿದ್ಯಾನಿಲಯಗಳು, ರಾಜ್ಯದಲ್ಲಿ ಸಾವಯವ ಕೃಷಿ ಕಾರ್ಯಕ್ರಮಗಳನ್ನು ಉತ್ತೇಜಿಸಿ, ಆಚರಣೆಗೆ ತರುವಲ್ಲಿ ವಿವಿಧ ಇಲಾಖೆಗಳು ಏಕ ಗವಾಕ್ಷಿಯಡಿಯಲ್ಲಿ ಕಾರ್ಯ ನಿರ್ವಹಿಸಬೇಕು. ರಾಜ್ಯದ ಹಣಕಾಸು ಹಂಚಿಕೆಯನ್ನು 'ಸಾವಯುವ ಕೃಷಿ' ಲೆಕ್ಕ ಶೀರ್ಷಿಕೆಯಲ್ಲಿ ಕ್ರೋಢೀಕರಿಸಲಾಗುವುದು ಹಾಗೂ ರಾಜ್ಯಮಟ್ಟದ ಅಧಿಕಾರಯುಕ್ತ ಸಮಿತಿಯ ಈ ನಿಧಿಯನ್ನು ವಿವಿಧ ಂಯೋಜನೆಗಳು ಮತ್ತು ಸಂಸ್ಥೆಗಳಿಗೆ ಹಂಚಿಕೆ ಮಾಡಲು ಅಧಿಕಾರ ಪಡೆದಿರುತ್ತದೆ.

- ಕೃಷಿ ಇಲಾಖೆ
- ತೋಟಗಾರಿಕೆ ಇಲಾಖೆ
- ಜಲಾಯನ ಅಭಿವೃದ್ಧಿ ಇಲಾಖೆ
- ಪಶುಸಂಗೋಪನಾ ಇಲಾಖೆ
- ರೇಷ್ಮೆ ಇಲಾಖೆ
- ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ
- ಮೀನುಗಾರಿಕೆ ಇಲಾಖೆ
- ಶಿಕ್ಷಣ ಇಲಾಖೆ
- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
- ಸಹಕಾರ ಇಲಾಖೆ
- ಕೃಷಿ ಮಾರುಕಟ್ಟೆ ಇಲಾಖೆ
- ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
- ವಿಶ್ವವಿದ್ಯಾನಿಲಯ, ಬೆಂಗಳೂರು/ಧಾರವಾಡ
- ಮಾಲಿನ್ಯ ನಿಯಂತ್ರಣ ಮಂಡಳಿ
- ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ
- ಕರ್ನಾಟಕ ಸರ್ಕಾರದ ಸಂಸ್ಥೆಗಳು : ಕಪೆಕ್, ಹಾಪ್‌ಕಾಮ್ಸ್, ಕೆ.ಎಂ.ಎಫ್., ಕೆ.ಎಸ್.ಎಸ್.ಆರ್.ಡಿ.ಐ.
- ಭಾರತ ಸರ್ಕಾರದ ಸಂಸ್ಥೆಗಳು : ಅಪೇಡಾ, ಪಿ.ಡಿ.ಬಿ.ಸಿ., ಆರ್.ಬಿ.ಡಿ.ಸಿ. ಸಿ.ಐ.ಪಿ.ಎಂ.ಸಿ., ಐ.ಐ.ಹೆಚ್.ಆರ್., ಸಿ.ಎಫ್.ಟಿ.ಆರ್.ಐ., ಕೆ.ವಿ.ಐ.ಸಿ.

ರಾಜ್ಯದಲ್ಲಿ ಸಾವಯವ ಕೃಷಿ ಕಾರ್ಯಕ್ರಮಗಳನ್ನು ಕೃಷಿ ಕಾರ್ಯಕ್ರಮಗಳನ್ನು ಕಾರ್ಯಾಚರಣೆಗೆ ತಂದು ಅಭಿವೃದ್ಧಿಪಡಿಸಲು ಕೃಷಿ ಇಲಾಖೆಯಲ್ಲಿ ಒಬ್ಬ ಹೆಚ್ಚುವರಿ ಕೃಷಿ ನಿರ್ದೇಶಕರನ್ನು ಸಂಪೂರ್ಣ ಹೊಣೆಗಾರರನ್ನಾಗಿ ನೇಮಿಸಲಾಗುತ್ತದೆ.

**ಸಾವಯವ ಕೃಷಿ ಅಭಿವೃದ್ಧಿಗಾಗಿ ರಾಜ್ಯಮಟ್ಟದ ಅಧಿಕಾರಯುಕ್ತ(ಎಂಪವರ್ಡ್) ಸಮಿತಿ**

ಸಾವಯವ ಕೃಷಿ ಕಾರ್ಯನೀತಿಯನ್ನು ಮೇಲ್ವಿಚಾರಣೆ ಮಾಡಿ ಆಚರಣೆಗೆ ತರಲು ಹಾಗೂ ಸಾವಯವ ಕೃಷಿಗಾಗಿ ಕಾದಿರಿಸಿದ ಆಯವ್ಯಯ ಹಂಚಿಕೆಯ ನಿರ್ವಹಣೆಯನ್ನು ಒಳಗೊಂಡಂತೆ ಸಾವಯುವ ಕೃಷಿಗೆ ಸಂಬಂಧಪಟ್ಟ ವಿವಿಧ ಇಲಾಖೆಗಳು ಮತ್ತು ಸಂಸ್ಥೆಗಳ ನಡುವೆ ಸಮನ್ವಯ/ಹೊಂದಾಣಿಕೆ ತರಲು ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಅಯುಕ್ತರ ಅಧ್ಯಕ್ಷತೆಯಲ್ಲಿ ಒಂದು ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿಯನ್ನು ರಚಿಸಲು ಉದ್ದೇಶಿಸಲಾಗಿದೆ.

ಈ ಸಮಿತಿಯ ಕಾರ್ಯಭಾರಗಳು ಮತ್ತು ಹೊಣೆಗಾರಿಕೆಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ. ಈ ಸಮಿತಿಯ ಸಾವಯವ ಕೃಷಿಗೆ ಸಂಬಂಧಿಸಿದ ವಿವಿಧ ಪ್ರಸ್ತಾವನೆಗಳನ್ನು ಪರಾಮರ್ಶಿಸಿ ಅನುಮೋದಿಸಲು ಸಾವಯವ ಕಾರ್ಯ ನಿರ್ವಹಣಾ ಸಮಿತಿ (ವರ್ಕಿಂಗ್ ಕಮಿಟಿ ಆನ್ ಅರ್ಗ್ಯಾನಿಕ್ ಫಾರ್ಮಿಂಗ್) ಸಲಹೆಯನ್ನು ಪಡೆಯುತ್ತದೆ.

**ಸಾವಯವ ಕೃಷಿ ಕಾರ್ಯ ನಿರ್ವಹಣಾ ಸಮಿತಿ**

ಈ ಸಮಿತಿಗೆ ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಅಧ್ಯಕ್ಷರಾಗಿರುತ್ತಾರೆ. ಈ ಸಮಿತಿಯ ಕಾರ್ಯಭಾರವನ್ನು ಮತ್ತು ಹೊಣೆಗಾರಿಕೆಗಳನ್ನು ಅನುಬಂಧ – II ರಲ್ಲಿ ಕೊಡಲಾಗಿದೆ. ಈ ಸಮಿತಿಯು ರಾಜ್ಯಮಟ್ಟದ ಅಧಿಕಾರಯುಕ್ತ ಸಮಿತಿಗೆ ತಾಂತ್ರಿಕ ಮಾರ್ಗದರ್ಶನಗಳ ರಚನೆ, ಯೋಜನೆಗಳ ಅನುಮೋದನೆ, ಕಾರ್ಯಕ್ರಮಗಳ ಉಸ್ತುವಾರಿ ಇತ್ಯಾದಿ ವಿಚಾರಗಳಲ್ಲಿ ಸಲಹೆ ನೀಡುವ ಕಾರ್ಯನಿರ್ವಹಿಸುತ್ತದೆ.

**ಸ್ಥಳ ನಿಶ್ಚಿತ ಸಮಿತಿಗಳು (ಸೈಟ್ ಸ್ಪೆಸಿಫಿಕ್ ಕಮಿಟಿ)**

ರಾಜ್ಯದಲ್ಲಿ ಸಾವಯುವ ಕೃಷಿ ಸಂಬಂಧಿಸಿದ ವಿವಿಧ ಕಾರ್ಯಕ್ರಮಗಳ ಕಾರ್ಯಾಚರಣೆಯ ವೇಳೆಯಲ್ಲಿ ರಾಜ್ಯಮಟ್ಟದ ಅಧಿಕಾರಯುಕ್ತ ಸಮಿತಿಯ ಪೂರ್ವಾನುಮೋದನೆ ಪಡೆದ ರೈತ ಸಂಘಗಳು/ರೈತರ ಕ್ಲಬ್‌ಗಳು/ರೈತರ ಸಹಕಾರ ಸಂಘಗಳು/ರೈತರ ಕಂಪನಿಗಳು / ಸ್ವಸಹಾಯ ಸಂಘಗಳು/ಸರ್ಕಾರೇತರ ಸಂಘ ಸಂಸ್ಥೆಗಳು ಕಾರ್ಯಯೋಜನೆಗಳ ಮತ್ತು ಅವುಗಳ ಕಾರ್ಯಾಚರಣೆಗಾಗಿ ಸ್ಥಳ ನಿಶ್ಚಿತ ಸಮಿತಿಯನ್ನು ರಚಿಸಬಹುದು. ರಾಜ್ಯಮಟ್ಟದ ಸಮಿತಿಯು ಈ ಸ್ಥಳ ನಿಶ್ಚಿತ ಸಮಿತಿಗಳ ರಚನೆಯನ್ನು ನಿರ್ಧರಿಸುತ್ತದೆ. ಸ್ಥಳ ನಿಶ್ಚಿತ ಸಮಿತಿಯು ಸ್ಥಳ ನಿಶ್ಚಿತ


www.shikarat.com

ಕಾರ್ಯಕ್ರಮಗಳನ್ನು ಕುರಿತು ಸಾವಯವ ಕೃಷಿ ಕಾರ್ಯನಿರ್ವಹಣಾ ಸಮಿತಿಗೆ ಶಿಫಾರಸ್ಸು ಮಾಡುತ್ತದೆ. ಅವುಗಳನ್ನು ಕಾರ್ಯನಿರ್ವಹಣಾ ಸಮಿತಿಯು ಪರಿಶೀಲಿಸಿ ರಾಜ್ಯಮಟ್ಟದ ಅಧಿಕಾರಯುಕ್ತ ಸಮಿತಿಗೆ ಶಿಫಾರಸ್ಸು ಮಾಡುತ್ತದೆ.

**ಸಾವಯುವ ಕೃಷಿ ಉತ್ತೇಜನದಲ್ಲಿ ಕೃಷಿಕ ಸಮಾಜದ ಪಾತ್ರ**

ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿರುವ ಕೃಷಿಕ ಸಮಾಜಗಳು ಸಾವಯವ ಕೃಷಿ ಕಾರ್ಯನೀತಿಯನ್ನು ವಾಸ್ತವಗೊಳಿಸಲು ಹಾಗೂ ಕಾರ್ಯಾಚರಣೆಗೆ ತರುವುದರಲ್ಲಿ ಮುಂದಾಳತ್ವ ವಹಿಸುತ್ತವೆ.

**ಸ್ವ-ಸಹಾಯ ಗುಂಪುಗಳು(ಎಸ್.ಎಚ್.ಜಿ)**

ಸರ್ಕಾರವು ವಿಶೇಷವಾಗಿ ಒಳ್ಳೆಯ ಗುಣಮಟ್ಟದ ಕಾಂಪೋಸ್ಟ್/ಎರೆಹುಳು ಗೊಬ್ಬರ, ಸಾವಯವ ಬಿತ್ತನೆ/ನಾಟಿ, ಪರಿಕರಗಳು ಮತ್ತು ಸಸ್ಯ ಸಂರಕ್ಷಣ ವಸ್ತುಗಳನ್ನು ಉತ್ಪಾದಿಸುವುದಕ್ಕಾಗಿ ಸ್ವ-ಸಹಾಯ ಗುಂಪುಗಳ ರಚನೆಗೆ ಪ್ರೋತ್ಸಾಹಿಸುತ್ತದೆ. ಈ ಗುಂಪುಗಳು ಸಾವಯವ ಉತ್ಪನ್ನ/ಉತ್ಪಾದನೆಗಳ ಸಂಸ್ಕರಣೆ/ಮೌಲ್ಯ ವರ್ಧನೆ ಮತ್ತು ಮಾರಾಟ ಕಾರ್ಯಗಳನ್ನು ವಹಿಸಿಕೊಳ್ಳಲು ಸರ್ಕಾರ ಪ್ರೋತ್ಸಾಹ ನೀಡುತ್ತದೆ. ಅಲ್ಲದೆ, ಈ ಗುಂಪುಗಳಿಗೆ ಸ್ಥಳೀಯ/ಸಾಂಪ್ರದಾಯಿಕ ತಳಿಗಳ ಸಮುದಾಯಿಕ ಬಿತ್ತನೆ ಬೀಜ ಬ್ಯಾಂಕ್‌ಗಳನ್ನು ನಿರ್ವಹಿಸಲು ಸಹ ಪ್ರೋತ್ಸಾಹ ನೀಡಲಾಗುತ್ತದೆ.

**ರೈತರ ಸಹಕಾರ ಸಂಘಗಳು**

ಸರ್ಕಾರವು ವಿಶೇಷವಾಗಿ ರಾಜ್ಯದಲ್ಲಿ ಸಾವಯವ ಕೃಷಿ ಕಾರ್ಯಕ್ರಮಗಳ ಉತ್ತೇಜನಕ್ಕಾಗಿ ರೈತರ ಸಹಕಾರ ಸಂಘಗಳ ರಚನೆಗೆ ಪ್ರೋತ್ಸಾಹ ನೀಡುತ್ತದೆ. ರೈತ ಸಹಕಾರ ಸಂಸ್ಥೆಗಳಿಗೆ ಸಣ್ಣ ಮತ್ತು ಅತಿ ಸಣ್ಣ ರೈತರು ಸದಸ್ಯರಾಗುವುದಕ್ಕೆ ಒತ್ತು ನೀಡಲಾಗುತ್ತದೆ. ಈ ಸಹಕಾರ ಸಂಸ್ಥೆಗಳು ರೈತರಿಂದ, ರೈತರಿಗಾಗಿ, ರೈತ ವ್ಯವಹಾರ ವೇದಿಕೆಯಾಗಿ ಕಾರ್ಯ ನಿರ್ವಹಿಸುತ್ತವೆ. ಈ ಸಾವಯವ ಕೃಷಿಕ ಸಹಕಾರ ಸಂಸ್ಥೆಗಳಿಗೆ ಮೌಲ್ಯವರ್ಧನೆ, ಪ್ಯಾಕ್ ಮಾಡುವಿಕೆ, ಹೆಸರು ಚೀಟಿ ಅಂಟಿಸುವಿಕೆ, ಪ್ರಮಾಣೀಕರಣ ಮತ್ತು ಸಾವಯವ ಉತ್ಪನ್ನಗಳ ಮಾರಾಟಕ್ಕೆ ಸರ್ಕಾರವು ನೆರವು ನೀಡುತ್ತದೆ.

**ರೈತರ ಕಂಪನಿಗಳ ರಚನೆ (ಫಾರ್ಮರ್ಸ್ ಕಂಪನಿ)**

ರಾಜ್ಯ ಸರ್ಕಾರವು ಉತ್ಪಾದಕರಿಂದ, ಉತ್ಪಾದಕರಿಗಾಗಿ, ಉತ್ಪಾದಕರ ವ್ಯವಹಾರ ವೇದಿಕೆಯಾಗಿ ಕಾರ್ಯ ನಿರ್ವಹಿಸಲು ರೈತರ ಕಂಪನಿಗಳ ರಚನೆಗೆ ಅನುವು ಮಾಡಿಕೊಡುತ್ತದೆ. (ಈ ಸಂದರ್ಭದಲ್ಲಿ ಉತ್ಪಾದಕರೆಂದರೆ ರೈತರೇ ಆಗಿರುತ್ತಾರೆ). ಇದು ಡಿಸೆಂಬರ್ 2002ರ ಕಂಪೆನಿಗಳ ಕಾಯಿದೆಗಳ IX ಎ ತಿದ್ದುಪಡಿಯ ಮೇರೆಗೆ ಕಾರ್ಪೊರೇಟ್‌ನಂತೆ (Corporate Structure) ಕಾರ್ಯ ನಿರ್ವಹಿಸುತ್ತದೆ. ಸಣ್ಣ ಮತ್ತು ಅತಿ ಸಣ್ಣ ರೈತರ ರಕ್ಷಣೆಗಾಗಿ ಈ ರೈತರ ಕಂಪನಿಯ ಎಲ್ಲಾ ಸದಸ್ಯರಿಗೆ ತಲಾ ಒಂದೊಂದು ಮತದಾನದ ಹಕ್ಕಿರುತ್ತದೆ. ಈ ಕಂಪನಿಗಳಿಗೆ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗಾಗಿ ಸೌಲಭ್ಯಗಳು, ಪ್ಯಾಕಿಂಗ್ ಮತ್ತು ಹೆಸರು ಚೀಟಿ ಅಂಟಿಸುವ ಸೌಲಭ್ಯಗಳು, ಆಂತರಿಕ ನಿಯಂತ್ರಣ ವ್ಯವಸ್ಥೆಗಳು ಹಾಗೂ ರಾಷ್ಟ್ರೀಯ ಮಾರಾಟಕ್ಕೆ ಸಂಪರ್ಕ ಹೊಂದಲು ಆರ್ಥಿಕ ನೆರವು ನೀಡಲಾಗುತ್ತದೆ. ಕಂಪನಿಯ ಪ್ರತಿ ಸದಸ್ಯರ ಲಾಭಾಂಶವು ಅವರು ಪೂರೈಸುವ ಉತ್ಪನ್ನಗಳ ಪ್ರಮಾಣಕ್ಕೆ ಹಾಗೂ ಕಂಪನಿಯ ಅನುಮೋದಿತ ನಿಯಮಾವಳಿಗಳಿಗೆ ಅನುಗುಣವಾಗಿರುತ್ತದೆ. ಅನುಕೂಲತೆಯ ದೃಷ್ಟಿಯಿಂದ, ಪ್ರಾರಂಭಿಕವಾಗಿ ಕೆಲವು ರೈತರುಗಳು ಒಟ್ಟುಗೂಡಿ ತಮ್ಮಲ್ಲಿಯೇ ಸ್ವ-ಸಹಾಯ ಗುಂಪು ಅಥವಾ ಸಂಘ/ಸಂಸ್ಥೆಯನ್ನು ರಚಿಸಿಕೊಂಡು ಮುಂದೆ ತಿದ್ದುಪಡಿಯಲ್ಲಿರುವ ಅವಕಾಶದಂತೆ ರೈತರ ಕಂಪನಿಯಾಗಿ ಪರಿವರ್ತನೆ ಮಾಡಿಕೊಳ್ಳಬಹುದಾಗಿದೆ.

**ಪ್ರದೇಶ / ಸರಕು ಮತು ಬೆಳೆಗಳ ಆಯ್ಕೆ**

ಪ್ರಚಲಿತ ಬೆಳೆ ಸಾಗುವಳಿ ಪದ್ಧತಿಯಿಂದ ಸಾವಯವ ಕೃಷಿಗೆ ಬದಲಾವಣೆ ಮಾಡುವುದನ್ನು ಕಾಲಾನುಗತಿಯಲ್ಲಿ ಪ್ರಯತ್ನಿಸಲಾಗುತ್ತದೆ. ಇದರಿಂದ ರಾಜ್ಯ ಸರ್ಕಾರದಲ್ಲಿಯ ಲಭ್ಯ ಸಂಪನ್ಮೂಲಗಳನ್ನು ಸಾವಯವ ಕೃಷಿ ಅಭಿವೃದ್ಧಿಗೆ ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದಾಗಿರುತ್ತದೆ. ಈ ದಿಸೆಯಲ್ಲಿ ಪ್ರಾರಂಭಿಕವಾಗಿ ರಾಜ್ಯದ ಕೆಲವು ಪ್ರದೇಶಗಳನ್ನು ಆಯ್ಕೆ ಮಾಡಲು ಪ್ರಸ್ತಾಪಿಸಲಾಗಿದೆ. ಇದಲ್ಲದೆ, ಪ್ರತಿ ಹೋಬಳಿಯಲ್ಲಿ ಕಡೆಯ ಪಕ್ಷ 200-500 ಎಕರೆಗಳುಳ್ಳ ಒಂದು ಹಳ್ಳಿಯನ್ನು ಹಂತ ಹಂತವಾಗಿ ಸಾವಯವ ಕೃಷಿ ಗ್ರಾಮವಾಗಿ ಪರಿವರ್ತಿಸಲಾಗುತ್ತದೆ. ಸಾವಯವ ಕೃಷಿ ಪರಿವರ್ತನೆಗೆ ಪ್ರದೇಶ/ಹಳ್ಳಿಯನ್ನು ಆಯ್ಕೆ ಮಾಡಿಕೊಳ್ಳುವಾಗ ಈ ಮುಂದಿನ ಅಂಶಗಳನ್ನು ಗಮನಿಸಲಾಗುತ್ತದೆ.

- ರಸಗೊಬ್ಬರಗಳು ಮತ್ತು ಕೀಟನಾಶಕಗಳ ಕನಿಷ್ಠ ಬಳಕೆ
- ಬೆಳೆ ಪದ್ಧತಿಗಳು ಮತ್ತು ನಮೂನೆಗಳ ಪ್ರಚಲಿತ ಬೆಳೆ ವೈವಿಧ್ಯತೆ
- ಆ ಪ್ರದೇಶದ ಸಾವಯವ ಕೃಷಿ ಪರಿಕರ ಸಂಪನ್ಮೂಲದ ಸಾಮರ್ಥ್ಯ
- ಕೃಷಿ, ತೋಟಗಾರಿಕೆ, ರೇಷ್ಮೆ ವ್ಯವಸಾಯ, ಪಶುಸಂಗೋಪನೆ, ಹಂದಿ ಸಾಕಣೆ, ಜೇನು ಸಾಕಣೆ ಇತ್ಯಾದಿಗಳನ್ನೊಳಗೊಂಡ ಪ್ರಚಲಿತ ಬೇಸಾಯ ಪದ್ಧತಿಗಳು.
- ವಿವದೋದ್ದೇಶ ವೃಕ್ಷಗಳ ಸಾಂದ್ರತೆ
- ಪ್ರಸ್ತುತ ರೈತರು ಅನುಸರಿಸುತ್ತಿರುವ ಸಾವಯವ ಕೃಷಿಪದ್ಧತಿಗಳ ಹಂತ
- ರೈತ ಗುಂಪುಗಳು/ಸ್ವಸಹಾಯ ಗುಂಪುಗಳು/ಸರ್ಕಾರೇತರ ಸಂಸ್ಥೆಗಳ ಇರುವಿಕೆ
- ಆ ಪ್ರದೇಶದಲ್ಲಿ ಸಾವಯವ ಉತ್ಪನ್ನಗಳ ರಫ್ತಿಗಿರುವ ಸಾಮರ್ಥ್ಯ.


www.shikarat.com

- ಮೂಲಭೂತ ಸೌಕರ್ಯಗಳು ಮತ್ತು ಸಾಗಾಣಿಕೆ ಲಭ್ಯತೆ
- ಸಾವಯವ ಕೃಷಿ ಪದ್ಧತಿಯಲ್ಲಿ ಉತ್ಪಾದನೆ ಕೈಗೊಳ್ಳಲು ವಾಣಿಜ್ಯ/ಔದ್ಯಮಿಕ /ಔಷಧೀಯ/ಸುಗಂಧ/ಆಹಾರ ಮತ್ತು ವ್ಯಾಪಾರಿ ಪ್ರಾಮುಖ್ಯತೆಯುಳ ಬೆಳೆಗಳನ್ನು ಗುರುತಿಸಲಾಗುತ್ತದೆ.
- ರೈತರ ಕಂಪನಿಗೆ ವಂತಿಗೆ ನೀಡುವ ಮೂಲಕ ಪಾಲುದಾರರಾಗಲು ಅಲ್ಲಿಯ ರೈತರ ಒಪ್ಪಿಗೆ.

ಈ ವಿಧಾನದಿಂದ ಸ್ವಲ್ಪಮಟ್ಟಿನ ಅನುಭವ ಗಳಿಸಿದ ಮೇಲೆ ಪಡೆಯಲಾದ ಸಾಮರ್ಥ್ಯ ಮತ್ತು ಲಭ್ಯ ಸಂಪನ್ಮೂಲಗಳ ಆಧಾರದ ಮೇಲೆ ಈ ಕಾರ್ಯಕ್ರಮವನ್ನು ಇತರ ಕ್ಷೇತ್ರಗಳಿಗೂ ಸಹ ವಿಸ್ತರಿಸಲಾಗುತ್ತದೆ.

ಅಲ್ಲದೆ, ಆರ್ಥಿಕ ಮೌಲ್ಯದ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಉತ್ತಮ ಗುಣಮಟ್ಟದ ಕೃಷಿ ಪರಿಕರಗಳ ಕೊರತೆ ಹಾಗೂ ತೊಂದರೆಗಳಿಗಿರುವ ಮಳೆಯಾಶ್ರಿತ ಹಾಗೂ ಬರಪೀಡಿತ ಪ್ರದೇಶಗಳಿಗೆ ವಿಶೇಷ ಒತ್ತು ನೀಡಲಾಗಿದೆ. ಅಂಥ ಕ್ಷೇತ್ರಗಳನ್ನು ಗುರುತಿಸಿ, ಅಲ್ಲಿಗೆ ಸೂಕ್ತವೆನಿಸಿದ ಕೃಷಿ ಕಾರ್ಯಕ್ರಮಗಳನ್ನು ಜಾರಿಗೆ ತರಲು ಅಗತ್ಯ ನೆರವಿನ ಕಾರ್ಯಾಚರಣಾ ವಿಧಾನಗಳನ್ನೊಳಗೊಂಡ ಸಮಗ್ರ ಸಾವಯವ ಕೃಷಿ ವಿಧಾನವನ್ನು ರೂಪಿಸಲಾಗುತ್ತದೆ.

**ಸಾವಯವ ಸಂಪನ್ಮೂಲಗಳ (ಬಯೋಮಾಸ್) ಉತ್ಪಾದನೆ**

ಸಾವಯವ ಕೃಷಿಗೆ ಅಳವಡಿಸಿದ ಕ್ಷೇತ್ರ /ಜಮೀನಿನಲ್ಲಿಯೇ ಸಾವಯವ ಸಂಪನ್ಮೂಲಗಳ ಉತ್ಪಾದನೆ ಕೈಗೊಳ್ಳುವುದು ಅತ್ಯವಶ್ಯಕ. ಪ್ರತಿ ಎರಡು ಎಕರೆಗೆ ಒಂದು ಹಸು ಅಗತ್ಯ. ಕಾಂಪೋಸ್ಟ್ ಉತ್ಪಾದನೆ ಕೈಗೊಳ್ಳಲು ಬೇಕಾದ ಸಗಣಿ ಮತ್ತು ಗಂಜಲ ಪೂರೈಸಲು ಸಾಕಾಗುತ್ತದೆ. ಇದು ಸಣ್ಣ/ಅತಿ ಸಣ್ಣ ರೈತರು ವಾಣಿಜ್ಯ ಮಟ್ಟದಲ್ಲಿ ಆದಾಯ ಗಳಿಸುವ ಚಟುವಟಿಕೆಯೂ ಸಹ ಆಗಿರುವುದರಿಂದ, ಇದಕ್ಕೆ ಪ್ರೋತ್ಸಾಹಿಸಿ ನೆರವು ನೀಡಲಾಗುತ್ತದೆ. ಇದನ್ನು ಸಾಧಿಸಲು ವಿಸ್ತರಣಾ ಕಾರ್ಯಕರ್ತರು ಒಣ ಎಲೆಗಳು, ಕಸ-ಕಡ್ಡಿ ಮತ್ತು ಬೆಳೆ ಸುಡುವುದು ನಿಲ್ಲುವಂತೆ ನೋಡಿಕೊಳ್ಳಬೇಕು. ರೈತರ ಜಮೀನಿನಲ್ಲಿಯ ತ್ಯಾಜ್ಯ ಪದಾರ್ಥಗಳು, ಎಲೆ-ಕಸ ಮತ್ತು ಕಳಿಯಬಲ್ಲ ಪದಾರ್ಥಗಳಿಂದ ಕಾಂಪೋಸ್ಟ್ ತಯಾರಿಸಿಕೊಳ್ಳಲು ರೈತರಿಗೆ ಅನುಕೂಲ ಕಲ್ಪಿಸಲಾಗುವುದು. ಒಂದು ವೇಳೆ ರೈತರಿಗೆ ತಾವಾಗಿಯೇ ಕಾಂಪೋಸ್ಟ್ ಮತ್ತು ಸಾವಯವ ವಾಣಿಜ್ಯ ಪದಾರ್ಥಗಳನ್ನು ತಯಾರಿಸಿಕೊಳ್ಳಲು ಸಾಧ್ಯವಿಲ್ಲದಿದ್ದಲ್ಲಿ ರಯತರ ಸಂಘಗಳು/ರೈತರ ಕ್ಲಬ್‌ಗಳು/ರೈತರ ಸಹಕಾರ ಸಂಘಗಳು/ರೈತರ ಕಂಪನಿಗಳು/ಸ್ವ-ಸಹಾಯ ಗುಂಪುಗಳು/ಸರ್ಕಾರೇತರ ಸಂಸ್ಥೆಗಳು ಕಾಂಪೋಸ್ಟ್ ಉತ್ಪಾದಿಸಿ ಸದಸ್ಯರಿಗೆ ನ್ಯಾಯೋಚಿತ ಬೆಲೆಗೆ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗುವುದು.

**ಜೈವಿಕ ವೈವಿಧ್ಯತೆ**

ಸಾವಯವ ಕೃಷಿ ಯಶಸ್ವಿಯಾಗಲು ಸ್ಥಳೀಯ ಪ್ರದೇಶಗಳ ಸಸ್ಯ ಪ್ರಭೇದಗಳ ಜೀವ ವೈವಿಧ್ಯತೆಯನ್ನು ನೆಲೆಗೊಳಿಸುವುದು ಮುಖ್ಯವಾದ ವಿಚಾರವಾಗಿರುತ್ತದೆ. ವಾಸ್ತವವಾಗಿ ಮೇವು/ದಿಮ್ಮಿ/ಇಂಧನ ಮತ್ತು ಜೈವಿಕ ರಾಶಿಗಳ ಉತ್ಪಾದನೆಗಾಗಿ ವೃಕ್ಷ ಬೆಳೆ ಪ್ರಭೇದಗಳ ಸಂಯೋಜನೆಯೂ ಆಗಬೇಕು. ಇದು ಪಕ್ಷಿಗಳ ಮತ್ತು ಉಪಯುಕ್ತ ಕೀಟಗಳ ವಾಸಸ್ಥಾನವಾಗಿರುವುದಲ್ಲದೆ ದೀರ್ಘ ಕಾಲಾವಧಿಯಲ್ಲಿ ಈಗ ಪರಿಗಣನೆಯಲ್ಲಿರುವ ಸುಸ್ಥಿರ ಕೃಷಿ ಪದ್ಧತಿಗೆ ಸಾಧನವಾಗುತ್ತದೆ. ಈ ದಿಸೆಯಲ್ಲಿ ಸೂಕ್ತವಾದ ಸಸ್ಯ/ವೃಕ್ಷ ಪ್ರಭೇದಗಳ ಸಂಯೋಜನೆಯನ್ನು ಗುರುತಿಸಿ, ಸಮಗ್ರ ಸಾವಯವ ಕೃಷಿ ವಿಧಾನವನ್ನು ರೂಪಿಸಲಾಗುತ್ತದೆ. ಅಂದರೆ ರೈತರ ಜಮೀನಿನಲ್ಲಿಯೂ ಕೃಷಿ – ತೋಟಗಾರಿಕೆ – ಅರಣ್ಯ – ಹುಲ್ಲುಗಾವಲು – ಮೇವು ಕೃಷಿ ಪದ್ಧತಿಗಳನ್ನು ಪ್ರೋತ್ಸಾಹಿಸಲಾಗುತ್ತದೆ.

**ಮಿಶ್ರ ಬೇಸಾಯ**

ಮಿಶ್ರ ಬೇಸಾಯವು ಪ್ರಾಕೃತಿಕ ವಿಪತ್ತುಗಳ ವಿರುದ್ಧದ ವಿಮೆ ಹಾಗೂ ಸಾವಯವ ಕೃಷಿಗೆ ಪೂರ್ವಭಾವಿ ಅಗತ್ಯತೆಯಗಿದೆ. ಬೆಳೆ ಉತ್ಪಾದನೆಗೆ ಪೋಷಕಾಂಶಗಳನ್ನು ಮತ್ತೆ ಮತ್ತೆ ಪುನರಾವರ್ತನಗೊಳಿಸುವುದು ಅತಿಮುಖ್ಯವಾಗಿದ್ದು ಇದಕ್ಕಾಗಿ ಜಾನುವಾರು ಸಾಕಣೆ ಮಾಡುವುದು ಅವಶ್ಯಕ ಹಾಗೂ ಅದು ಮಿಶ್ರ ಬೇಸಾಯದಲ್ಲಿ ಕಡ್ಡಾಯವೆನಿಸುತ್ತದೆ. ವಾಸ್ತವವಾಗಿ, ಹಸು, ಎಮ್ಮೆ, ಹಂದಿ ಮತ್ತು ಕೋಳಿ ಇತ್ಯಾದಿಗಳಿರುವಂತಹ ಜಾನುವಾರು ಸಾಕಣೆ ಕ್ಷೇತ್ರದಲ್ಲಿ ಬೇಸಾಯ ಉಪ ಉತ್ಪನ್ನಗಳ ಪುನರಾವರ್ತನೆಗೆ ಹಾಗೂ ಅಧಿಕ ಮೌಲ್ಯವರ್ಧನೆಗೆ ಕಾರಣವಾಗಿರುತ್ತದೆ. ಈ ವಿಧಾನದಿಂದ ಮಾತ್ರವೇ ರೈತ ಇಡೀ ವರ್ಷ ಪೂರ್ತಿ ಕಾರ್ಯಶೀಲನಾಗಿರುತ್ತಾನೆ. ಎಲ್ಲಕ್ಕೂ ಹೆಚ್ಚಾಗಿ, ಮಿಶ್ರ ಬೇಸಾಯ ಸ್ವ-ಸುಸ್ಥಿರ ಪದ್ಧತಿಯಾಗಿದ್ದು ಇದರಲ್ಲಿ ಸಾವಯವ ಬೇಸಾಯಕ್ಕೆ ಅಗತ್ಯವಾದ ಸಾವಯವ ಗೊಬ್ಬರಗಳನ್ನು ಕ್ಷೇತ್ರದಲ್ಲಿಯೇ ಉತ್ಪಾದಿಸುವ ಪದ್ಧತಿಯಾಗಿರುತ್ತದೆ.

ಪ್ರಾಣಿ – ಪ್ರೇಮಿ ಸಂಘಗಳವರನ್ನು ರೈತರು ಸಹಯೋಗಗೊಳಿಸಿಕೊಂಡು, ಅವರಿಂದ ಸಾವಯವ ಗೊಬ್ಬರ ಪಡೆದು ಅವರಿಗೆ ಮೇವು ಒದಗಿಸುವಂತೆ 'ಕೊಟ್ಟು ತೆಗೆದುಕೊಳ್ಳುವ' ಪೂರೈಕೆ ಸಂಪರ್ಕವನ್ನು ಕಲ್ಪಿಸಿ ಕೊಡಬಹುದಾಗಿದೆ. ಇದರೊಂದಿಗೆ ಅಧಿಕ ಮೌಲ್ಯದ ಸಾವಯವ ಗೊಬ್ಬರದ ಉತ್ಪಾದನೆಗಾಗಿ ಹೈನುಗಾರಿಕೆಯನ್ನು ಚೇತನಗೊಳಿಸಲು ಉದ್ದೇಶಿಸಲಾಗಿದೆ. ಪ್ರಾಣಿಗಳ ಕಸಾಯಿಖಾನೆಗಳಿಂದ ಸಾವಯವ ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಿ ಸೂಕ್ತ ರೀತಿಯಲ್ಲಿ ಸಂಸ್ಕರಿಸಿ, ಸಾವಯವ ವಿಧಾನದಲ್ಲಿ ಸಮೃದ್ಧ ಗೊಬ್ಬರ ತಯಾರಿಸಿ, ಬೇಸಾಯಕ್ಕೆ ಉಪಯೋಗಿಸಬಹುದಾಗಿದೆ. ಇದಕ್ಕೆ ಧನ ಸಹಾಯವನ್ನು ನೀಡಲಾಗುತ್ತದೆ.

**ಮಳೆ ನೀರು ಸಂಗ್ರಹಣೆ ಸೇರಿದಂತೆ ಮಣ್ಣು ಮತ್ತು ನೀರಿನ ಸಂರಕ್ಷಣೆ**

ಸಾವಯವ ಬೇಸಾಯದಲ್ಲಿ ಮಣ್ಣಿನ ಆರೋಗ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ಸಾವಯವ ಬೇಸಾಯಕ್ಕೆ ಮೂಲ ಅಗತ್ಯತೆ – ಜೀವಂತ ಮಣ್ಣು. ಬೆಳೆ ಉತ್ಪಾದನೆಯಲ್ಲಿ ನೀರು ಅತಿ ಅಗತ್ಯ ಘಟಕಾಂಶವಾಗಿದ್ದು, ಮಣ್ಣಿನಲ್ಲಿನ ತೇವಾಂಶ ಸಂರಕ್ಷಣೆಗೆ ಹೆಚ್ಚಿನ ಒತ್ತು ನೀಡಬೇಕಾಗುತ್ತದೆ. ಸರ್ಕಾರವು ಚಾಲ್ತಿಯಲ್ಲಿರುವ ಜಲಾನಯನ ಕಾರ್ಯಕ್ರಮಗಳ ಮೂಲಕ ಮಣ್ಣು ಮತ್ತು ನೀರು ಸಂರಕ್ಷಣೆಗಾಗಿ ಕೆಳಗಿನ ಕಾರ್ಯಗಳಿಗೆ ಧನ ಸಹಾಯ ನೀಡುತ್ತದೆ.


www.shikarat.com

- ಕೃಷಿ ಹೊಂಡ/ಬಸಿ ತೊಟ್ಟಿಗಳನ್ನು ನಿರ್ಮಿಸುವಿಕೆ
- ಕಂದಕಗಳು, ಚರಂಡಿಗಳು ಮತ್ತು ಬದುಗಳು ಇತ್ಯಾದಿಗಳ ರಚನೆ
- ಹಿಡುಗುಣಿಗಳು (ಸಿಲ್ಟ್ ಟ್ರ್ಯಾಪ್)
- ಮಳೆ ನೀರು ಸಂಗ್ರಹಣೆ ತೊಟ್ಟಿಗಳು
- ಬಾವಿ ಮತ್ತು ಕೊಳವೆ ಬಾವಿ ಪುನಶ್ಚೇತನಗಳ ವಿನ್ಯಾಸಗಳು
- ಮಾಳಿಗೆ ನೀರು ಸಂಗ್ರಹಣಾ ತೊಟ್ಟಿಗಳು

ಮಳೆ ನೀರು ಸಂಗ್ರಹಣೆ ಬಾವಿಗಳ ಪುನಶ್ಚೇತನ ಮತ್ತು ಮರ ನೆಡುವ ಕಾರ್ಯಗಳಿಗೆ ಸೂಕ್ತವಾದ, ಶಾಸನಬದ್ಧ ಕ್ರಮಗಳನ್ನು ಅನುಸರಿಸಿ ಅಂತರ್‌ಜಲ ಮಟ್ಟದ ಸುಧಾರಣೆ ಹಾಗೂ ಮೇಲ್ಮೈ ಮಣ್ಣು ಸಂರಕ್ಷಣೆಯನ್ನು ಕೈಗೊಳ್ಳಲಾಗುವುದು.

**ಮಣ್ಣಿನ ಸುಧಾರಣೆ, ಮಣ್ಣಿನ ಫಲವತ್ತತೆ ವೃದ್ಧಿಸುವುದು ಹಾಗೂ ಜೈವಿಕ ವೈವಿಧ್ಯತೆ ನಿರ್ಮಿಸುವುದು**

ಜಮೀನುಗಳಲ್ಲಿ ಮಣ್ಣಿನ ಫಲವತ್ತತೆ ಮತ್ತು ಜೈವಿಕ ವೈವಿಧ್ಯತೆಗಳನ್ನು ಪ್ರಗತಿಗೊಳಿಸುವ ಕೆಳಕಾಣಿಸಿದ ಕಾರ್ಯಕ್ರಮಗಳಿಗೆ ಸರ್ಕಾರವು ಧನ ಸಹಾಯ ನೀಡುತ್ತದೆ.

- ಭೂ ಸುಧಾರಣಾ ಕಾರ್ಯಕ್ರಮಗಳು
- ಹಸಿರೆಲೆ ಗೊಬ್ಬರ ಉತ್ಪಾದನೆ, ಅಂತರ ಬೆಳೆ/ಬಹು ಬೆಳೆ / ಬಹು ಅಂತಸ್ತಿನ ಬೆಳೆ ಬೆಳೆಯುವಿಕೆ
- ಬೆಳೆ ಪರಿವರ್ತನೆ ಅನುಸರಣೆ
- ಜಮೀನುಗಳಲ್ಲಿ ಕಾಂಪೋಸ್ಟ್ ಗೊಬ್ಬರ/ಎರೆಹುಳು ಗೊಬ್ಬರ ತಯಾರಿಕೆ
- ಜೀವಂತ ಬದು ನಿರ್ಮಾಣ
- ಸೌದೆ, ಮೇವು, ಮರ ಮುಟ್ಟು ಹಾಗೂ ಹಸಿರೆಲೆ ಗೊಬ್ಬರಕ್ಕೆ ಸೂಕ್ತವಾದ ಜಾತಿ ಮರಗಳನ್ನು ಒದಗಿಸಲು ಹಾಲಿ ಚಾಲ್ತಿಯಲ್ಲಿರುವ ಯೋಜನೆಗಳಿಂದ ಮತ್ತು ಅಗತ್ಯವಿದ್ದಲ್ಲಿ ಹೊಸ ಯೋಜನೆಗಳಿಂದ ನೆರವು ನೀಡಲಾಗುತ್ತದೆ.
- ಮರಗಿಡಗಳ ತೋಪುಗಳನ್ನು ಶಾಶ್ವತವಾಗಿ ಸ್ಥಾಪಿಸುವುದು (ಗುಂಡು ತೋಪು, ನಾಡು ತೋಪು, ದೇವರ ಕಾಡು ಇತ್ಯಾದಿಗಳು)

**ಸಾವಯವ ಕೃಷಿ ಪರಿಕರಗಳಿಗೆ ಬೆಂಬಲ**

ಸಾವಯವ ಬೇಸಾಯಕ್ಕೆ ಅತಿ ಅಗತ್ಯ ಕೃಷಿ ಪರಿಕರಗಳನ್ನು ರೈತ ಸಂಘಗಳು/ರೈತರ ಕೂಟಗಳು /ರೈತರ ಸಹಕಾರಿ ಸಂಘಗಳು/ರೈತರ ಕಂಪನಿಗಳು/ಸ್ವಹಾಯ ಗುಂಪುಗಳು/ಸರ್ಕಾರೇತರ ಸಂಸ್ಥೆಗಳಿಂದ ರೈತರಿಗೆ ಸೂಕ್ತ ಬೆಲೆಗೆ ಸಿಗುವಂತೆ ಮಾಡುವುದು ಮುಖ್ಯವಾಗಿದ್ದು, ಈ ಕಾರ್ಯಕ್ರಮದಡಿಯಲ್ಲಿ ಕೆಳಗಿನ ಕೃಷಿ ಪರಿಕರಗಳನ್ನು ಪೂರೈಸಬಹುದಾಗಿದೆ.

- ಸಾವಯವ ಬೀಜ/ಸಸಿ ಮತ್ತು ಇತರ ಬಿತ್ತನೆ ವಸ್ತುಗಳು
- ಪೋಷಕಾಂಶ ನಿರ್ವಹಣಾ ಸಾಧನಗಳು
- ಕೀಟ/ರೋಗ ನಿರ್ವಹಣಾ ಸಾಧನಗಳು

ಸಾವಯವ ಸಸ್ಯ ಸಂರಕ್ಷಣಾ ವಸ್ತುಗಳ ಉತ್ಪಾದನೆಯನ್ನು ಕೈಗೊಳ್ಳುವ ರೈತ ಸಂಘಗಳು/ರೈತರ ಕೂಟಗಳು /ರೈತರ ಸಹಕಾರಿ ಸಂಘಗಳು / ರೈತರ ಕಂಪನಿಗಳು / ಸ್ವ – ಸಹಾಯ ಗುಂಪುಗಳು / ಸರ್ಕಾರೇತರ ಸಂಸ್ಥೆಗಳಿಗೆ ಸರ್ಕಾರ ಪ್ರೋತ್ಸಾಹ ನೀಡುತ್ತದೆ. ಈ ಸಂಸ್ಥೆಗಳಿಗೆ ಸರ್ಕಾರವು ಅಗತ್ಯ ವಸ್ತುಗಳ ಖರೀದಿಗೆ ಅಥವಾ ಉತ್ಪಾದನೆಗೆ ಧನ ಸಹಾಯ ನೀಡುತ್ತದೆ. ಇದರೊಂದಿಗೆ ಈ ಸಂಸ್ಥೆಗಳು ಇತರೆ ಧನ ಸಹಾಯ ಸಂಸ್ಥೆಗಳಿಂದ ಬ್ಯಾಂಕುಗಳ ಪ್ರಾಯೋಜನ ಪ್ರಸ್ತಾವನೆ ಆಧಾರದ ಮೇಲೆ ಅಗತ್ಯ ಧನ ಸಹಾಯ ಪಡೆಯಬಹುದಾಗಿದೆ.

ಕೃಷಿ ಪರಿಕರ ತಯಾರಿಕೆ ಸಂಸ್ಥೆಗಳಿಂದ ತಯಾರಾಗುವ ಪರಿಕರಗಳ ಗುಣಮಟ್ಟ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಸಾವಯವ ಕೃಷಿ ಪರಿಕರಗಳನ್ನು ಸಹ ಪ್ರಸ್ತುತ ಇರುವ ಬೀಜ ಕಾಯ್ದೆ 1965, ರಸಗೊಬ್ಬರ ನಿಯಂತ್ರಣ ಆದೇಶ 1985 ಮತ್ತು ಕೀಟನಾಶಕ ಕಾಯಿದೆ 1968 ಇವುಗಳ ವ್ಯಾಪ್ತಿಯಲ್ಲಿ ಬರುವಂತೆ ಕ್ರಮ ಕೈಗೊಳ್ಳುವಂತೆ ಭಾರತ ಸರ್ಕಾರವನ್ನು ಒತ್ತಾಯಿಸಲಾಗುವುದು.

ಸಾವಯವ ಬೇಸಾಯಕ್ಕೆ ಅಗತ್ಯ ವಸ್ತುಗಳನ್ನು ಉತ್ಪಾದಿಸುವ ಔದ್ಯೋಗಿಕ ಸಂಸ್ಥೆಗಳು ಶೇಕಡ 5ರಷ್ಟು ಅಧಿಕ ಧನ ಸಹಾಯಕ್ಕೆ ಅರ್ಹವಾಗಿರುತ್ತವೆ ಹಾಗೂ ಇದು ಈಗಾಗಲೇ ಕೈಗಾರಿಕಾ ನೀತಿ 2001–2006ರ ಅನ್ವಯ ದೊರಕುತ್ತಿರುವ ಧನಸಹಾಯಕ್ಕಿಂತ ಹೆಚ್ಚುವರಿಯದಾಗಿರುತ್ತದೆ.

**ಮೌಲ್ಯವರ್ಧನೆ, ಕ್ಷೇತ್ರದಲ್ಲಿಯೇ ಸಂಸ್ಕರಣೆ ಮತ್ತು ದಾಸ್ತಾನುಗೊಳಿಸುವ ಕಾರ್ಯಗಳಿಗೆ ನೆರವು**

ಸಾವಯವ ಬೇಸಾಯ ಮಾಡುವ ರೈತರು ತಮ್ಮ ಉತ್ಪಾದನೆಗಳನ್ನು ಮೌಲ್ಯವರ್ಧನಗೊಳಿಸುವ ರೈತ ಸಂಘಗಳು/ರೈತರ ಕ್ಲಬ್‌ಗಳು/ರೈತರ ಸಹಕಾರಿ ಸಂಘಗಳು/ರೈತರ ಕಂಪನಿಗಳು/ ಸ್ವ–ಸಹಾಯ ಗುಂಪುಗಳು/ಸರ್ಕಾರೇತರ ಸಂಸ್ಥೆಗಳೊಂದಿಗೆ ಪಾಲುದಾರರಾಗಿರುತ್ತಾರೆ. ಇದಕ್ಕೆ ಕ್ಷೇತ್ರ ಮಟ್ಟದಲ್ಲಿ ನಡೆಸುವ ಪ್ರಾಥಮಿಕ ವರ್ಗೀಕರಣ ಕಡ್ಡಾಯವಾಗಿರುತ್ತದೆ. ಈ ಎಲ್ಲಾ ರೈತ ಸಂಸ್ಥೆಗಳು ಕೈಗೊಳ್ಳುವ ಎಲ್ಲಾ ಬಗೆಯ ಸಂಸ್ಕರಣಾ ಚಟುವಟಿಕೆಗಳಿಗೆ ನೆರವು ನೀಡಲಾಗುತ್ತದೆ. ಇದಕ್ಕೆ ಅಗತ್ಯವಾದ ಯಾವುದೇ ಬಗೆಯ ಯಂತ್ರೋಪಕರಣಗಳು, ಪ್ಯಾಕಿಂಗ್ ಸಾಮಗ್ರಿ ಮತ್ತು ಪರಿಸರ ಸ್ನೇಹಿ ವಸ್ತುಗಳನ್ನು ಖರೀದಿಸಲು ರಿಯಾಯಿತಿ ನೀಡಲಾಗುತ್ತದೆ. ಭಾರತ ಸರ್ಕಾರದ ಆಹಾರ ಸಂಸ್ಕರಣಾ ಸಚಿವಾಲಯದಿಂದ ಸಿಗುವ


www.shikarat.com

ಧನಸಹಾಯದೊಂದಿಗೆ ರಾಜ್ಯ ಸರ್ಕಾರವೂ ಕೂಡ ರೈತ ಗುಂಪಿನವರು ಕೈಗೊಳ್ಳುವ ಕ್ಷೇತ್ರ ಮಟ್ಟದ ಸಂಸ್ಕರಣಾ ಚಟುವಟಿಕೆಗಳಿಗೆ ಸೂಕ್ತ ರೀತಿಯ ಉತ್ತೇಜನಗಳು ಮತ್ತು ರಿಯಾಯಿತಿಗಳನ್ನು ಒದಗಿಸುತ್ತದೆ.

ಇದರೊಂದಿಗೆ ಕೃಷಿ ಉತ್ಪನ್ನ ಮಂಡಳಿ (ಎ.ಪಿ.ಎಂ.ಸಿ.) ಪ್ರಾಂಗಣಗಳಲ್ಲಿ ಈಗಾಗಲೇ ಇಉವ ಮೂಲಭೂತ ಸೌಕರ್ಯಗೊಂದಿಗೆ ಶೀತಲ ದಾಸ್ತಾನು ಸೌಲಭ್ಯಗಳನ್ನು ವಿಸ್ತರಿಸಿ ಸಾವಯವ ವಿಧಾನದಲ್ಲಿ ಬೆಳೆದ ಉತ್ಪನ್ನಗಳಿಗೆ ಪ್ರತ್ಯೇಕ ದಾಸ್ತಾನು ಸ್ಥಳವನ್ನು ಸೃಜಿಸಲಾಗುವುದು.

**ಸಾವಯವ ಉತ್ಪನ್ನ ಸಂಸ್ಕರಣಾ ಉದ್ಯಮಕ್ಕೆ ನೆರವು**

ಸಾವಯವ ಉತ್ಪನ್ನ ಸಂಸ್ಕರಣಾ ಘಟಕಗಳನ್ನು ಬೆಂಬಲಿಸಲು ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಗೊಳಿಸಲಾಗುವುದು. ಗುಡಿ ಕೈಗಾರಿಕೆಗಳಿಗೆ ಅನ್ವಯವಾಗುವಂತಹ ತೆರಿಗೆ ವಿನಾಯಿತಿಗಳನ್ನು ಇವುಗಳಿಗೂ ಸಹ ವಿಸ್ತರಿಸಲಾಗುವುದು.

ಸಾವಯವ ಉತ್ಪನ್ನ ಸಂಸ್ಕರಣಾ ಉದ್ಯಮವನ್ನು ಕಾರ್ಮಿಕ ಕಾಯ್ದೆಯಡಿ ಅರೆಕಾಲಿಕ ಉದ್ಯಮ ಎಂದು ಘೋಷಿಸಲಾಗುವುದು. ಈ ಘಟಕಗಳಿಗೆ, ವಿದ್ಯುತ್ ಬಳಕೆ ದರದಲ್ಲಿ 30 ದಿನಗಳಿಗೊಮ್ಮೆ ಸೀಮಿತವಾಗುವಂತೆ ಕನಿಷ್ಠ ಡಿಮ್ಯಾಂಡ್ ಶುಲ್ಕ ಕಟ್ಟುವುದರಿಂದ ವಿನಾಯಿತಿಗೊಳಿಸಲಾಗುವುದು. ವಿದ್ಯುತ್ ಪೂರೈಕೆ ಸಂಸ್ಥೆಯು ಇವರಿಗೆ ಸಾಮಾನ್ಯ ದರಗಳ ಬದಲು ವಿನಾಯಿತಿ ದರದಲ್ಲಿ ವಿದ್ಯುತ್ತನ್ನು ಪೂರೈಸಬೇಕು. ಇದು ಪ್ರಾರಂಭದ ಮೂರು ವರ್ಷಗಳಿಗೆ ಅನ್ವಯವಾಗುತ್ತದೆ. ಇದೇ ರೀತಿ ಸಾವಯವ ಸಂಸ್ಕರಣಾ ಉದ್ಯಮಗಳು ವಿದ್ಯುತ್ ತೆರಿಗೆ ಪಾವತಿಯಲ್ಲಿಯೂ ಸಹ ವಿನಾಯಿತಿ ಪಡೆಯುತ್ತವೆ.

ರೈತರಿಂದ ನೇರವಾಗಿ ಒಪ್ಪಂದ ಪದ್ಧತಿ ಮೇರೆಗೆ ಕೃಷಿ ಉತ್ಪನ್ನಗಳನ್ನು ಖರೀದಿಸುವ ಎಲ್ಲಾ ಸಾವಯವ ಸಂಸ್ಕರಣಾ ಘಟಕಗಳು ಸಹ ಕೃಷಿ ಉತ್ಪನ್ನ ಮಾರಾಟ ಮಂಡಳಿ ಕಾಯಿದೆಯನ್ವಯ ವಿಧಿಸಲಾಗುವ ಮಾರಾಟ ತೆರಿಗೆ/ಸೆಸ್‌ನ ವಿನಾಯಿತಿ ಪಡೆಯುತ್ತವೆ.

ಸಾವಯವ ಉತ್ಪನ್ನಗಳನ್ನು ಬಳಸುವ ಎಲ್ಲಾ ಸಂಸ್ಕರಣಾ ಘಟಕಗಳೂ ಸಹ ಕೈಗಾರಿಕಾ ನೀತಿ 2001–2006ರ ಅನ್ವಯ ನಿಗದಿಪಡಿಸಿದ ಒಟ್ಟು ಧನ ಸಹಾಯದ ಜೊತೆಯಲ್ಲಿ ಶೇಕಡ 5 ಹೆಚ್ಚಿನ ನೆರವಿಗೆ ಅರ್ಹವಾಗುತ್ತವೆ.

ಸಾವಯವ, ಸಂಸ್ಕರಣಾ, ಉದ್ದಿಮೆಗಳಿಗೆ ಹೆಚ್.ಎ.ಸಿ.ಸಿ.ಪಿ. ಮತ್ತು ಇತರ ಸಂರಕ್ಷಣಾ ನಿಯಮಗಳು, ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಅಂಗೀಕೃತ ಸಂಸ್ಥೆಗಳಿಂದ ಪ್ರಮಾಣ ಪಡೆಯುವ ಅಗತ್ಯ ವೆಚ್ಚಗಳನ್ನು ಭರಿಸಲು ಹಾಗೂ ಹೊಸ ಕೈಗಾರಿಕಾ ನೀತಿಯಡಿಯಲ್ಲಿ ಐ.ಎಸ್.ಓ ಮತ್ತು ಇತರ ಅಂತರರಾಷ್ಟ್ರೀಯ ಪ್ರಮಾಣವನ್ನು ಪಡೆಯಲು ಉತ್ತೇಜಕಗಳನ್ನು ವಿಸ್ತರಿಸಲಾಗುವುದು.

**ಪುನರ್ ನವೀಕರಿಸುವ ಶಕ್ತಿಮೂಲಗಳ ಸ್ಥಾಪನೆ**

ಸಾವಯವ ಕೃಷಿ ಅಳವಡಿಸಿದ ಜಮೀನುಗಳಲ್ಲಿ ಜೈವಿಕ – ಅನಿಲ ಸ್ಥಾವರಗಳು, ಸೌರಶಕ್ತಿ ಘಟಕಗಳು ಮತ್ತು ಗಾಳಿ ಘಟಕಗಳನ್ನು ಸ್ಥಾಪನೆ ಮಾಡಲು ನೆರವು ನೀಡಲಾಗುವುದು. ಇದರಿಂದ ವಿದ್ಯುತ್ ಮತ್ತು ಪೆಟ್ರೋಲಿಯಂನಂತಹ ಬಾಹ್ಯ ಮೂಲ ಶಕ್ತಿಗಳ ಮೇಲಿನ ಅವಲಂಬನೆ ಕಡಿಮೆಯಾಗುತ್ತದೆ. ಇದರೊಂದಿಗೆ, ಪ್ರತಿ ಜೈವಿಕ ಅನಿಲ ಸ್ಥಾವರದೊಂದಿಗೆ ಒಂದು ಎರೆಹುಳು ಕಾಂಪೋಸ್ಟ್ ಘಟಕ ಸ್ಥಾಪನೆಯನ್ನು ಸಹ ಕಡ್ಡಾಯಗೊಳಿಸಲಾಗುವುದು.

**ಪರಿವರ್ತನೆ ಹಾಗೂ ಪ್ರಮಾಣೀಕರಣಕ್ಕಾಗಿ ನೆರವು**

ಸಾವಯವ ಕ್ಷೇತ್ರವೆಂದು ಅಧಿಕೃತ ಸಂಸ್ಥೆಗಳಿಂದ ಪ್ರಮಾಣೀಕರಣವನ್ನು ಪಡೆಯುವುದು ಸಾವಯವ ಕೃಷಿಯ ಮುಖ್ಯ ಅಂಶವಾಗಿರುತ್ತದೆ. ಪ್ರಮಾಣ ಪತ್ರವನ್ನು ಪಡೆಯಲು ಸಾವಯವ ಕ್ಷೇತ್ರದಲ್ಲಿ ನಡೆಸಲಾದ ಎಲ್ಲಾ ಚಟುವಟಿಕೆಗಳ ವ್ಯವಸ್ಥಿತವಾದ ದಾಖಲೆಗಳನ್ನು ಕಾಪಾಡುವುದು ಅತ್ಯಾವಶ್ಯಕ. ಸರ್ಕಾರವು ಇದಕ್ಕಾಗಿ ಸೇವಾ ಕಾರ್ಯಕರ್ತರನ್ನು ಒದಗಿಸುತ್ತದೆ. ಪ್ರಾರಂಭದ ಮೂರು ವರ್ಷಗಳವರೆಗೆ ಸರ್ಕಾರವು ಪ್ರಮಾಣೀಕರಣ ಶುಲ್ಕವನ್ನು ಭಾಗಶಃ ಭರಿಸುತ್ತದೆ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಗುಂಪು ಪ್ರಮಾಣೀಕರಣ ಪಡೆಯಲು ಪ್ರೋತ್ಸಾಹ ನೀಡಲಾಗುವುದು.

ಪ್ರಮಾಣೀಕರಣಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಇರುವ ಎನ್.ಎಸ್.ಓ.ಪಿ., ಐ.ಎಫ್.ಓ.ಎ.ಎಂ. ಮಾನದಂಡಗಳನ್ನು ಅನುಸರಿಸಲಾಘುವುದಲ್ಲದೆ ಸಂಸ್ಥೆಗಳಿಗೆ ಪ್ರಮಾಣೀಕರಣ ನೀಡುವ ಮಾನ್ಯತೆ ನೀಡಲಾಗುವುದು. ಸಾವಯವ ಕ್ಷೇತ್ರಗಳ ಪ್ರಮಾಣೀಕರಣ ಕಾರ್ಯಕ್ಕಾಗಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ತನಿಖಾ ಮತ್ತು ಪ್ರಮಾಣೀಕರಣ ಮತ್ತು ತರಬೇತಿ ಪಡೆದ ಪರಿವೀಕ್ಷಕರನ್ನು ಗುರುತಿಸಲಾಗುವುದು. ಪರಿವೀಕ್ಷಕರ ತರಬೇತಿಗಾಗಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಸ್ಥಳೀಯ ಪ್ರಮಾಣೀಕರಿಸುವ ಸಂಸ್ಥೆಗಳ ಸ್ಥಾಪನೆಗೆ ಧನಸಹಾಯವನ್ನು ನೀಡಲಾಗುವುದು.

**ಸಾವಯವ ಉತ್ಪನ್ನಗಳ ಮಾರಾಟ**

ಪ್ರಸ್ತುತ ಇರುವ ಮಾರಾಟ ಸಂಸ್ಥೆಗಳಾದ ಸಫಲ್ /ಎ.ಪಿ.ಎಂ.ಸಿ./ಹಾಪ್‌ಕಾಮ್ಸ್ /ಎನ್.ಸಿ.ಎಸ್/ಕಪೆಕ್/ಕೆ.ವಿ.ಐ.ಬಿ.ಗಳು ಸಾವಯವ ಉತ್ಪನ್ನಗಳ ಮಾರಾಟಕ್ಕಾಗಿ ಪ್ರತ್ಯೇಕ ಮಾರಾಟ ಕೇಂದ್ರಗಳನ್ನು ಕಲ್ಪಿಸುವಂತೆ ಕ್ರಮ ಕೈಗೊಳ್ಳಲಾಗುವುದು. ಅಗತ್ಯವಿರುವಷ್ಟು ಸಂಗ್ರಹಣಾ ಸೌಕರ್ಯವನ್ನು ಪ್ರತ್ಯೇಕವಾಗಿ, ಸಾವಯವ ಉತ್ಪನ್ನಗಳಿಗಾಗಿಯೇ ಕಲ್ಪಿಸುವುದರಿಂದ ಇತರ ಸಾಂಪ್ರದಾಯಿಕ ಉತ್ಪನ್ನಗಳ ಮಿಶ್ರಗೊಳ್ಳುವಿಕೆಯಿಂದ ತಪ್ಪಿಸಬಹುದಾಗಿರುತ್ತದೆ. ಇದರೊಂದಿಗೆ, ರೈತ ಸಂಘಗಳು/ರೈತರ ಕ್ಲಬ್‌ಗಳು/ರೈತರ ಸಹಕಾರಿ ಸಂಸ್ಥೆಗಳು/ರೈತರ ಕಂಪನಿಗಳು/ಸ್ವ–ಸಹಾಯ ಗುಂಪುಗಳು/ಸರ್ಕಾರೇತರ ಸಂಸ್ಥೆಗಳು ನೇರವಾಗಿ ಸಾವಯವ ಉತ್ಪನ್ನಗಳ ಮಾರಾಟ ಮಾಡುವಿಕೆಯನ್ನು ಬೆಂಬಲಿಸಲಾಗುವುದು. ಉತ್ಪನ್ನ ಸ್ಥಳದಿಂದ ಗ್ರಾಹಕರ ಸ್ಥಳಕ್ಕೆ ಉತ್ಪನ್ನಗಳನ್ನು ಸಾಗಣೆ ಮಾಡುವ ವೆಚ್ಚಕ್ಕೆ ವಿನಾಯಿತಿ ಕಲ್ಪಿಸಲಾಗುವುದು.

ಅರಣ್ಯದ ಕಿರು ಉತ್ಪನ್ನಗಳನ್ನೂ ಸಹ (ಉದಾ – ಜೇನು ತುಪ್ಪ, ಸೀಗೆಕಾಯಿ, ಗಿಡಮೂಲಿಕೆ ಇತ್ಯಾದಿ) ಈ ಕೇಂದ್ರಗಳಿಂದ ಮಾರಾಟ ಮಾಡಲಾಗುತ್ತದೆ. ಅರಣ್ಯ ಪ್ರದೇಶದಲ್ಲಿ ವಾಸಿಸುವ ಬುಡಕಟ್ಟಿನ ಸ್ವ–ಸಹಾಯ ಸಂಸ್ಥೆಯವರಿಗೆ ನೆರವಾಗುವ ದೃಷ್ಟಿಯಿಂದ ಅರಣ್ಯ ಇಲಾಖೆಯವರು ಅರಣ್ಯ ಪ್ರದೇಶಗಳಲ್ಲಿ ಪ್ರಮಾಣೀಕರಣ ಕಾರ್ಯಕ್ಕೆ ನೆರವಾಗುವರು.


www.shikarat.com

ನಗರ ಪ್ರದೇಶಗಳಲ್ಲಿ ಸರ್ಕಾರದ ವತಿಯಿಂದ ಕಾಲಕಾಲಕ್ಕೆ ಸಾವಯವ ಉತ್ಪನ್ನಗಳ ಮೇಳ / ಪ್ರದರ್ಶನಗಳನ್ನು ವ್ಯವಸ್ಥೆಗೊಳಿಸಲಾಗುವುದು. ಸಾವಯವ ಉತ್ಪನ್ನ ಬೆಳೆಗಾರರೊಂದಿಗೆ ಗ್ರಾಹಕರ ಸಂಪರ್ಕವನ್ನು ವಾರದ ಸಂತೆಗಳಲ್ಲಿ ವ್ಯವಸ್ಥೆಗೊಳಿಸಲಾಗುತ್ತದೆ.

ಖಾದಿ ಮತ್ತು ಗ್ರಾಮೀಣ ಉದ್ಯಮಗಳ ಆಯೋಗದ ಧ್ಯೇಯೋದ್ದೇಶಗಳು ಸಾವಯವ ಕೃಷಿ ಧ್ಯೇಯೋದ್ದೇಶಗಳಿಗೆ ಹೊಂದಾಣಿಕೆ ಆಗುತ್ತವೆ. ಕೆ.ವಿ.ಐ.ಸಿ.ಯಲ್ಲಿ ಪ್ರಸ್ತುತ ಇರುವ ಯೋಜನೆಗಳನ್ನು ಸಾವಯವ ರೈತರು ಮತ್ತು ಸಂಸ್ಕರಣಾಕಾರರಿಗೆ ಉಪಯುಕ್ತವಾಗುವಂತೆ ಪರಿವರ್ತಿಸಿಕೊಳ್ಳಲಾಗುವುದು. ಕೆ.ವಿ.ಐ.ಬಿ./ಕೆ.ವಿ.ಐ.ಸಿ. ಮಾರಾಟ ಕೇಂದ್ರಗಳನ್ನು ಸಾವಯವ ಉತ್ಪನ್ನ ಮಾರಾಟಕ್ಕೆ ಉಪಯೋಗಿಸಿಕೊಳ್ಳಲಾವುದು. ಸರ್ಕಾರವು ವಿಶೇಷವಾಗಿ ಸಾವಯವ ಉತ್ಪನ್ನಗಳ ಮಾರಾಟಕ್ಕಾಗಿಯೇ ಜಿಲ್ಲಾ ಕೇಂದ್ರದಲ್ಲಿ ಕನಿಷ್ಠ ಒಂದು ಹಾಗೂ ನಗರದಲ್ಲಿ ಎರಡು ಮಾರಾಟ ಕೇಂದ್ರಗಳ ಆರಂಭಕ್ಕೆ ಸೌಲಭ್ಯ ಕಲ್ಪಿಸುತ್ತದೆ. ಈ ಮಾರಾಟ ಕೇಂದ್ರಗಳನ್ನು ರೈತ ಸಂಘಗಳು /ರೈತರ ಕ್ಲಬ್‌ಗಳು/ರೈತರ ಸಹಕಾರಿ ಸಂಸ್ಥೆಗಳು/ ರೈತರ ಕಂಪನಿಗಳು / ಸ್ವ – ಸಹಾಯ ಗುಂಪುಗಳು/ಸರ್ಕಾರೇತರ ಸಂಸ್ಥೆಗಳವರು ನಡೆಸಬಹುದಾಗಿದೆ. ರೈತನಲ್ಲಿ/ರೈತರ ಗುಂಪುಗಳಲ್ಲಿ /ರೈತರ ಸಂಘಗಳಲ್ಲಿನ ಸಾವಯವ ಕೃಷಿ ಉತ್ಪನ್ನಗಳ ಲಭ್ಯತೆಯ ಬಗ್ಗೆ ಮಾಹಿತಿಯನ್ನು ಇಂಟರ್‌ನೆಟ್ ಮುಖಾಂತರ ಒದಗಿಸಲಾಗುವುದು.

**ಸಾಲ ಸೌಲಭ್ಯಗಳು**

ಸಾವಯವ ಬೇಸಾಯಕ್ಕೆ ಕಡಿಮೆ ದರದಲ್ಲಿ ಸಾಲ ನೆರವು ಒದಗಿಸುವುದು ಅತಿ ಮುಖ್ಯವಾದುದು. ನಬಾರ್ಡ್, ರಾಷ್ಟ್ರೀಕೃತ ಬ್ಯಾಂಕ್‌ಗಳು, ಪ್ರಾಂತೀಯ ಗ್ರಾಮೀಣ ಬ್ಯಾಂಕ್‌ಗಳು ಮತ್ತು ಸಹಕಾರಿ ಸಂಸ್ಥೆಗಳವರನ್ನು ವಿಶೇಷ ಸಾಲ ಸೌಲಭ್ಯ ರೂಪಿಸಿ, ರೈತ ಸಂಸ್ಥೆ/ರೈತರ ಸಂಘಗಳು/ರೈತರ ಕ್ಲಬ್‌ಗಳು/ರೈತರ ಕ್ಲಬ್‌ಗಳು/ರೈತರ ಸಹಕಾರಿ ಸಂಸ್ಥೆಗಳು/ರೈತರ ಕಂಪನಿಗಳು/ಸ್ವ-ಸಹಾಯ ಗುಂಪುಗಳು/ಸರ್ಕಾರೇತರ ಸಂಸ್ಥೆಗಳು, ಸಂಸ್ಕರಣಾ ಉದ್ಯಮಗಳು, ಮಾರಾಟಗಾರರು ಮತ್ತು ರಫ್ತುದಾರರು ಹಾಗೂ ಪರಿಕರ ಉತ್ಪಾದನಾ ಉದ್ಯಮಗಳಿಗೆ ಸಾಲ ಒದಗಿಸುವಂತೆ ಒತ್ತಾಯಿಸಲಾಗುವುದು.

ಮಿಶ್ರ ಬೇಸಾಯ, ಕೃಷಿ ಉಪ ಕಸುಬುಗಳು ಹಾಗೂ ಸಂಬಂಧಿಸಿದ ಎಲ್ಲಾ ಕಾರ್ಯಗಳು ಮತ್ತು ಬೆಳೆ ಉತ್ಪಾದನೆಗಾಗಿ ಸಾವಯವ ರೈತನಿಗೆ / ರೈತರ ಸಂಘಗಳಿಗೆ / ರೈತರ ಕ್ಲಬ್‌ಗಳಿಗೆ/ ರೈತರ ಸಹಕಾರಿ ಸಂಸ್ಥಗಳು/ರೈತರ ಕಂಪನಿಗಳು/ಸ್ವ–ಸಹಾಯ ಗುಂಪುಗಳಿಗೆ /ಸರ್ಕಾರೇತರ ಸಂಸ್ಥಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಾಲದ ದರವನ್ನು ವಿನಾಯಿತಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

**ರಫ್ತಿಗೆ ಉತ್ತೇಜನ**

ವೈವಿಧ್ಯಮಯವಾದ ಕೃಷಿ ಹವಾಮಾನ ಪರಿಸ್ಥಿತಿ ಹಾಗೂ ಸಾಂಪ್ರದಾಯಿಕ ಕೃಷಿ ಪದ್ಧತಿಗಳು ರೂಢಿಯಲ್ಲಿರುವುದರಿಂದ ನಮ್ಮ ರಾಜ್ಯವು ವಿವಿಧ ಬಗೆಯ ಸಾವಯವ ಉತ್ಪನ್ನಗಳನ್ನು ಉತ್ಪಾದಿಸುವ ಹಾಗೂ ಅವುಗಳನ್ನು ಲಾಭದಾಯಕವಾಗಿ ರಫ್ತು ಮಾಡುವ ಪ್ರಮುಖ ಉತ್ಪಾದನಾ ರಾಜ್ಯವಾಗಬಹುದಾಗಿದೆ. ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಸಾವಯವ ಕೃಷಿ ಉತ್ಪನ್ನಗಳಿಗೆ ಇರುವ ಸಾಮರ್ಥ್ಯ/ಬೇಡಿಕಗೆ ಸಂಬಂಧಿಸಿದ ಮಾಹಿತಿಯನ್ನು ಸರ್ಕಾರದ ವತಿಯಿಂದ ಒದಗಿಸಲಾಗುತ್ತದೆ.

ರಫ್ತು ಮಾಡುವ ಉದ್ದೇಶಕ್ಕೆ ಅಂತರ್‌ರಾಷ್ಟ್ರೀಯ ಪ್ರಮಾಣೀಕರಣಕ್ಕೆ ಅನುಗುಣವಾಗಿ ಸಂಸ್ಕರಣೆ, ಪ್ಯಾಕಿಂಗ್ ಮತ್ತು ಸಂಗ್ರಹಣೆಗಳಿಗಾಗಿ ನೆರವು ಒದಗಿಸಲಾಗುವುದು. ರೈತರ ಸಂಘಗಳು/ರೈತರ ಕ್ಲಬ್‌ಗಳು/ ರೈತರ ಸಹಕಾರಿ ಸಂಸ್ಥೆಗಳಿಗೆ ಸಾಗಾಣಿಕೆಗಾಗಿ ಆರ್ಥಿಕ ನೆರವು ಒದಗಿಸಲಾಗುತ್ತದೆ. ರಫ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ಬೆಳೆಗಾರರ ಮತ್ತು ವಿವಿಧ ದೇಶಗಳ ಕೊಳ್ಳುವವರ ಸಮ್ಮೇಳನಕ್ಕೆ ಅನುಕೂಲ ಮಾಡುವುದು.

ರಾಸಾಯನಿಕ ಉಳಿಕೆ ರಹಿತ ಉತ್ಪನ್ನಗಳನ್ನು ದೃಢೀಕರಿಸಲು ಸರ್ಕಾರವು ಸಸ್ಯ ಕೀಟನಾಶಕಗಳ ಉಳಿಕೆ ವಿಶ್ಲೇಷಣೆಯ ಪ್ರಯೋಗಾಲಯಗಳನ್ನು ಸ್ಥಾಪಿಸಲು ನೆರವು ನೀಡುವುದು ಹಾಗೂ ಪರಿಕರಗಳ ಗುಣಮಟ್ಟ ಮತ್ತು ಭದ್ರತೆಗಳನ್ನು ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಮಾನಕಗಳಿಗನುಗುಣವಾಗಿ ಇರುವಂತೆ ನೋಡಿಕೊಳ್ಳಲಾಗುವುದು.

**ಸಂಶೋಧನೆ ಮತ್ತು ಅಭಿವೃದ್ಧಿ**

ರಾಜ್ಯದ ಎರಡು ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ, ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಹಾಗೂ ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳ ಕ್ಷೇತ್ರಗಳಲ್ಲಿ ಸಾವಯವ ಕೃಷಿ ಬಗ್ಗೆ ಪರಿಪೂರ್ಣ ಸಂಶೋಧನೆ ಕೈಗೊಳ್ಳಲು ಕ್ರಮಕೈಗೊಳ್ಳಲಾಗುತ್ತದೆ. ಸಂಶೋಧನೆಯೊಂದಿಗೆ ವಿವಿಧ ಕೃಷಿ ವಲಯಗಳಿಗೆ ಸೂಕ್ತವಾದ ಬೇಸಾಯ ಕ್ರಮಗಳನ್ನು ರೂಪಿಸಲು ಸೂಚಿಸಲಾಗುತ್ತದೆ.

ಸಾವಯವ ಕೃಷಿಗೆ ಸಂಬಂಧಿಸಿದಂತೆ ಸಂಶೋಧನೆ ಕೈಗೊಳ್ಳುವ ರೈತರ ಸಂಘ/ರೈತರ ಒಕ್ಕೂಟ/ರೈತರ ಸಹಕಾರ ಸಂಘ/ರೈತರ ಕಂಪನಿ/ಸ್ವ–ಸಹಾಯ ಗುಂಪು ಮತ್ತು ಸರ್ಕಾರೇತರ ಸಂಸ್ಥೆಗಳನ್ನು ಗುರುತಿಸಿ ಅವುಗಳಿಗೆ ನೆರವು ನೀಡಲಾಗುತ್ತದೆ. ಇದಲ್ಲದೆ ಕೃಷಿ ವಿಶ್ವವಿದ್ಯಾನಿಲಯಗಳು ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಸೂಕ್ತ ಸಂಶೋಧನೆ ಮತ್ತು ಪಠ್ಯಕ್ರಮಗಳನ್ನು ರೂಪಿಸಲು ಸೂಕ್ತ ಕ್ರಮ ಕೈಗೊಳ್ಳುತ್ತವೆ.

- ಸಾವಯವ ಕೃಷಿ ಬಗ್ಗೆ ಪದವಿ ತರಗತಿಯನ್ನು ಪ್ರಾರಂಭಿಸುವುದು.
- ಸ್ನಾತಕ ಮತ್ತು ಸ್ನಾತಕೋತ್ತರ ಹಂತದಲ್ಲಿನ ಪಠ್ಯಕ್ರಮಗಳಲ್ಲಿ ಸಾವಯವ ಕೃಷಿ ಪಠ್ಯಗಳ ಸೇರ್ಪಡೆ
- ಸಾವಯವ ಕೃಷಿಗೆ ಸೂಕ್ತವಾಗಿರುವ ಸ್ಥಳೀಯ ಮತ್ತು ಸಾಂಪ್ರದಾಯಿಕ ತಳಿಗಳನ್ನು ಗುರುತಿಸಲಾಗುವುದು ಮತ್ತು ಅವುಗಳ ಅಭಿವೃದ್ಧಿ, ಸಂರಕ್ಷಣೆಗೆ ವಿಶೇಷ ಒತ್ತು ನೀಡುವುದು.
- ಸಾಂಪ್ರದಾಯಿಕ ತಳಿಗಳನ್ನು ಅವುಗಳ ಹೊಂದಾಣಿಕೆಗೆ, ಸಾಮರ್ಥ್ಯಕ್ಕೆ ಕೀಟ/ರೋಗ ಮತ್ತು ಬರ ನಿರೋಧಕತೆಗೆ ಮೌಲ್ಯಮಾಪನ ಮಾಡಲಾಗುವುದಲ್ಲದೆ ಸಾವಯವ ಕೃಷಿಕರು ಅನುಸರಿಸುತ್ತಿರುವ ಪದ್ಧತಿ/ತಾಂತ್ರಿಕತೆಗಳನ್ನು ದೃಢೀಕರಿಸುವುದು.


www.shikarat.com

- ವಿವಿಧ ಬೆಳೆ ಪರಿಸರ ವ್ಯವಸ್ಥೆಯಲ್ಲಿ ಪರಭಕ್ಷಕ/ಪರತಂತ್ರ ಜೀವಿಗಳು, ಜೈವಿಕ ಪೀಡೆ ನಾಶಕಗಳನ್ನು ಗುರುತಿಸಿ ಆಯ್ಕೆ ಮಾಡುವುದು.
- ರೈತ/ಪ್ರದೇಶ ನಿಶ್ಚಿತ ಸಂಶೋಧನೆಯನ್ನು ಉತ್ತೇಜಿಸುವುದು
- ಸಾವಯವ ಕೃಷಿ ಉತ್ಪನ್ನಗಳಲ್ಲಿರುವ ಪೋಷಕಾಂಶಗಳ ಸಂಶೋಧನಾ ಮಾಹಿತಿಯನ್ನು ದೃಢೀಕರಿಸುವುದು.
- ಸಾವಯವ ಕೃಷಿಕರು ಹಾಲಿ ಪಾಲಿಸುತ್ತಿರುವ ಬೇಸಾಯ ಪದ್ಧತಿಗಳನ್ನು ಗುರುತಿಸಿ ದಾಖಲು ಮಾಡಲಾಗುವುದು.
- ರೈತರ ಮತ್ತು ವಿಸ್ತರಣಾ ಸಿಬ್ಬಂದಿಯವರ ಪ್ರಾತ್ಯಕ್ಷಿಕೆ ಉದ್ದೇಶಕ್ಕಾಗಿ ಕೃಷಿ ವಿಶ್ವವಿದ್ಯಾನಿಲಯಗಳು ಕನಿಷ್ಠ ತಮ್ಮ ಒಂದು ಕೃಷಿ ಕ್ಷೇತ್ರವನ್ನು ಸಂಪೂರ್ಣ ಸಾವಯವ ಕೃಷಿ ಪದ್ಧತಿಗೆ ಪರಿವರ್ತಿಸುವುದು.
- ರೋಗ ಮತ್ತು ಪರಾವಲಂಬಿ ಜೀವಿಗಳ ನಿರೋಧಕ ಮತ್ತು ಸ್ಥಳೀಯ ಪರಿಸ್ಥಿತಿಗೆ ಹೊಂದಿಕೊಳ್ಳುವ ಸ್ಥಳೀಯ ಪಶು ತಳಿಗಳನ್ನು ಗುರುತಿಸಿ, ಆಯ್ಕೆ ಮಾಡಿ ಅಭಿವೃದ್ಧಿಪಡಿಸುವುದು. ಅಲ್ಲದೇ, ರೋಗ ಮತ್ತು ಪರಾವಲಂಬಿ ಜೀವಿಗಳ ನಿಯಂತ್ರಣಕ್ಕಾಗಿ ಗಿಡಮೂಲಿಕೆ ಔಷಧಿಗಳನ್ನು ಗುರುತಿಸಿ ಆಯ್ಕೆ ಮಾಡುವುದು.
- ವೇದ ಮತ್ತು ಪುರಾತನ ಗ್ರಂಥಗಳಲ್ಲಿನ ಮಾಹಿತಿಯನ್ನು ದಾಖಲಿಸುವುದು.
- ಸಂಶೋಧನಾ ಮನೋಭಾವವುಳ್ಳ ರೈತರೊಂದಿಗೆ ನಿಟಕವಾಗಿ ಸಮಾಲೋಚಿಸುವುದು.
- ಆಗಿಂದಾಗ್ಗೆ ಸಂಶೋಧನಾ ಕೆಲಸ ಕಾರ್ಯಗಳನ್ನು ಮೌಲ್ಯಮಾಪನ ಮಾಡುವುದು.

ಔಷಧೀಯ, ಸುಗಂಧ ಮತ್ತು ಬಣ್ಣ ಉತ್ಪಾದನೆಗೆ ಬಳಸುವ ಬೆಳೆಗಳನ್ನು ಅಂತರ ಬೆಳೆಗಳಾಗಿ ಬೆಳೆಯುವುದು.

ರೈತ ಸಂಘಗಳು/ರೈತರ ಕ್ಲಬ್‌ಗಳು/ರೈತರ ಸಹಕಾರಿ ಸಂಸ್ಥೆಗಳು/ರೈತರ ಕಂಪನಿಗಳು/ಸ್ವ-ಸಹಾಯ ಗುಂಪುಗಳು/ಸರ್ಕಾರೇತರ ಸಂಸ್ಥೆಗಳಿಗೆ ಔಷಧೀಯ ಸಸ್ಯ, ಸುಗಂಧ ಮತ್ತು ಬಣ್ಣ ಉತ್ಪಾದನೆಗೆ ಬಳಸುವ ಬೆಳೆಗಳ ಬಿತ್ತನೆ/ಸಸಿಗಳನ್ನು ಪಡೆಯಲು ಮತ್ತು ಕಟಾವಿನ ನಂತರದ ಮತ್ತು ಸಂಸ್ಕರಣೆ ಸೌಲಭ್ಯಗಳಿಗಾಗಿ ಧನಸಹಾಯ ನೀಡಲಾಗುವುದು.

**ತರಬೇತಿ, ವಿಸ್ತರಣೆ ಮತ್ತು ಅಧ್ಯಯನ ಪ್ರವಾಸ**

ರಾಜ್ಯ ಸರ್ಕಾರದ ಕೃಷಿ ತೋಟಗಾರಿಕೆ, ರೇಷ್ಮೆ ಮತ್ತು ಪಶು ಸಂಗೋಪನೆ ಇಲಾಖೆಗಳ ವತಿಯಲ್ಲಿನ ಕ್ಷೇತ್ರಗಳನ್ನು ಸಾವಯವ ಕೃಷಿಯ ಮಾದರಿ ಕ್ಷೇತ್ರಗಳನ್ನಾಗಿ ಪರಿವರ್ತಿಸಿ, ರೈತರಿಗೆ ಮತ್ತು ವಿಸ್ತರಣಾ ಕಾರ್ಯಕರ್ತರಿಗೆ ತರಬೇತಿಗಾಗಿ ಮತ್ತು ಶಿಕ್ಷಣಕ್ಕಾಗಿ ಬಳಸಲಾಗುವುದು.

ಸಾವಯವ ಕೃಷಿಗೆ ಸಂಬಂಧಿಸಿದ ಇಲಾಖೆಗೆ ಅಧಿಕಾರಿಗಳಿಗೆ ಸಾವಯವ ಕೃಷಿ ತತ್ವದ ಬಗ್ಗೆ ಹಾಗೂ ರಾಷ್ಟ್ರೀಯ ಸಾವಯವ ಕೃಷಿ ಮಾನಕಗಳ ಬಗ್ಗೆ ತರಬೇತಿಯನ್ನು ನೀಡಲಾಗುವುದು. ಆಯ್ದ ರೈತರ ಗುಂಪು ಹಾಗೂ ಅದರಲ್ಲೂ ರೈತ ಮಹಿಳೆಯರಿಗೆ ಸಾವಯವ ಕೃಷಿಯ ಪರಿಕಲ್ಪನೆ, ಸಾವಯವ ಮಾನಕಗಳು ಮತ್ತು ಪ್ರಮಾಣೀಕರಣದ ಅಗತ್ಯತೆಯ ಬಗ್ಗೆ ಪ್ರತ್ಯೇಕ ತರಬೇತಿಗಳನ್ನು ರೂಪಿಸಲಾಗುವುದು. ರಾಜ್ಯ/ಇತರೆ ರಾಜ್ಯಗಳಲ್ಲಿನ ಮಾದರಿ ಸಾವಯವ ಕೃಷಿ ಕ್ಷೇತ್ರಗಳಿಗೆ ಇಲಾಖಾ ಅಧಿಕಾರಿಗಳಿಗೆ ಮತ್ತು ರೈತರಿಗೆ ಅದರಲ್ಲೂ ರೈತ ಮಹಿಳೆಯರಿಗೆ ಅಧ್ಯಯನ ಪ್ರವಾಸವನ್ನು ಹಮ್ಮಿಕೊಳ್ಳಲಾಗುವುದು. ಜೈವಿಕ-ಕ್ರಿಯಾತ್ಮಕ (ಬಯೋ ಡೈನಮಿಕ್) ಬೇಸಾಯ, ಪಂಚಗವ್ಯ ಮತ್ತು ಅಗ್ನಿಹೋತ್ರ ಪದ್ಧತಿಗಳನ್ನು ಪ್ರೋತ್ಸಾಹಿಸಲಾಗುವುದು.

ಅತ್ಯುತ್ತಮ ಸಾವಯವ ಕೃಷಿ ರೈತರನ್ನು ಗುರುತಿಸಿ ಪ್ರಶಸ್ತಿಗಳನ್ನು ನೀಡಲಾಗುವುದು.

ಪ್ರಾಕೃತಿಕ ಹಾಗೂ ಇತರೇ ವಿಸ್ತರಣಾ ಕಾರ್ಯಗಳಿಗಾಗಿ ಅಗತ್ಯವಿದ್ದಲ್ಲಿ ಸರ್ಕಾರೇತರ ಸಂಸ್ಥೆಗಳ ಸೇವೆಯನ್ನು ಸೂಕ್ತ ಆರ್ಥಿಕ ಸಹಾಯ ನೀಡುವುದರ ಮೂಲಕ ಬಳಸಿಕೊಳ್ಳಲಾಗುವುದು.

ಬೆಂಗಳೂರು ಸಮೀಪದ ಹುಳಿಮಾವುಗಳಲ್ಲಿನ ಜೈವಿಕ ತಾಂತ್ರಿಕತೆ ಕೇಂದ್ರದಲ್ಲಿ ಸಮುದಾಯ ಬಿತ್ತನೆ ಬೀಜದ ಬ್ಯಾಂಕನ್ನು ಸ್ಥಾಪಿಸಿ ಸ್ಥಳೀಯ/ಸಾಂಪ್ರದಾಯಿಕ ತಳಿಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗಾಗಿ ಪ್ರೋತ್ಸಾಹ ನೀಡಲಾಗುತ್ತದೆ.

**ಪ್ರಚಾರ ಮತ್ತು ಸಾರ್ವಜನಿಕರಲ್ಲಿ ಜಾಗೃತಿ**

ಸಮೂಹ ಮಾಧ್ಯಮಗಳಲ್ಲಿ ದೂರದರ್ಶನ, ಬಾನುಲಿ, ದಿನಪತ್ರಿಕೆ, ಭಿತ್ತಿ ಚಿತ್ರಗಳು, ಹಸ್ತಪ್ರತಿಗಳು, ಯಶೋಗಾಥೆಗಳ ವಿಡಿಯೋ ಚಿತ್ರೀಕರಣ ಮುಂತಾದವುಗಳನ್ನು ಯಶಸ್ವಿಯಾಗಿ ಬಳಸಿಕೊಂಡು ಸಾರ್ವಜನಿಕರಲ್ಲಿ ಅದರಲ್ಲೂ ಮಹಿಳೆಯರಲ್ಲಿ ರಾಸಾಯನಿಕ ಕೃಷಿಯಿಂದಾಗಿ ಪರಿಸರ, ಪ್ರಾಣಿಗಳು ಮತ್ತು ಮನುಷ್ಯರ ಮೇಲೆ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಸೂಕ್ತ ತಿಳುವಳಿಕೆಯನ್ನು ನೀಡಲಾಗುವುದು. ಪರಿಸರ ಸ್ನೇಹಿ ಸಾವಯವ ಕೃಷಿಯನ್ನು ಕೈಗೊಳ್ಳುವುದರಿಂದ ಪರಿಸರ ಸಮತೋಲನ ಕಾಯ್ದುಕೊಳ್ಳುವ ಬಗ್ಗೆ ಒತ್ತು ನೀಡಲಾಗುವುದು. ಆಹಾರದಲ್ಲಿ ರಾಸಾಯನಿಕ ಉಳಿಕೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಮನವರಿಕೆ ಮಾಡಿಕೊಡಲಾಗುವುದು. ಗ್ರಾಹಕರ ಹಿತಾಸಕ್ತಿಯನ್ನು ಕಾಪಾಡುವ ಸಲುವಾಗಿ ಆಹಾರ ಕಲಬೆರಕೆ ನಿರೋಧ ಕಾಯ್ದೆ 1954 ಮತ್ತು ನಿಯಮಾವಳಿ 1955ನ್ನು ತೀವ್ರವಾಗಿ ಜಾರಿಗೊಳಿಸಲಾಗುವುದು. ರಫ್ತಿನ ಉದ್ದೇಶಕ್ಕಾಗಿ ಸಿದ್ಧಪಡಿಸುವ ಸಾವಯವ ಕೃಷಿ ಉತ್ಪನ್ನಗಳಿಗೆ ಗುರುತಿನ ಚೀಟಿ (ಲೇಬಲ್) ಅಂಟಿಸುವುದನ್ನು ಕಟ್ಟುನಿಟ್ಟಾಗಿ ಪಾಲಿಸುವುದರ ಬಗ್ಗೆ ಖಚಿತಪಡಿಸಿಕೊಳ್ಳಲಾಗುವುದು. ನಗರಗಳಲ್ಲಿ ಮತ್ತು ಪಟ್ಟಣಗಳಲ್ಲಿ ಸಾವಯವ ತಾರಸಿ ತೋಟ ಮತ್ತು ಕೈತೋಟಗಳನ್ನು ಮಾಡಲು ಪ್ರೋತ್ಸಾಹ ಹಾಗೂ ನೆರವು ನೀಡಲಾಗುವುದು.

**ಪ್ರಾಥಮಿಕ/ಮಾಧ್ಯಮಿಕ ಶಿಕ್ಷಣದಲ್ಲಿ ಸಾವಯವ ಕೃಷಿ ಬಗ್ಗೆ ಪಠ್ಯಕ್ರಮ**

ಸಾವಯವ ಕೃಷಿ ಪದ್ಧತಿಯಲ್ಲಿ ಕೃಷಿ, ತೋಟಗಾರಿಕೆ ಪಶುಸಂಗೋಪನೆ ಹಾಗೂ ಜೈವಿಕ ವೈವಿಧ್ಯತೆ, ಅರಣ್ಯೀಕರಣ ಮುಂತಾದ ಪಠ್ಯಕ್ರಮಗಳನ್ನು ಪ್ರಾಥಮಿಕ ಮತ್ತು ಮಾಧ್ಯಮಿಕ ಮಟ್ಟದಲ್ಲಿ ತರಲಾಗುವುದು. ಅದರಿಂದಾಗಿ ಮಕ್ಕಳಲ್ಲಿ, ಉಪಾಧ್ಯಾಯರಲ್ಲಿ ಪೋಷಕ




www.shikarat.com

ಮುಂತಾಧವರಲ್ಲಿ ರಾಸಾಯನಿಕ ವಸ್ತುಗಳ ರಹಿತ ಬೇಸಾಯ ಪದ್ಧತಿಗಳ ಬಗ್ಗೆ ಮತ್ತು ಪರಿಸರ ಮಾಲಿನ್ಯ ತಡೆ ಮತ್ತು ಆರೋಗ್ಯ ಸುಧಾರಿಸುವ ಬಗ್ಗೆ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಜಾಗೃತಿ ಮೂಡುತ್ತದೆ.

**ಸಾವಯವ ಕೃಷಿಕರಿಗೆ ಹೆಚ್ಚಿನ ಆದ್ಯತೆ**

ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಫಲಾನುಭವಿಗಳನ್ನು ಆರಿಸುವಾಗ ಸಾವಯವ ಕೃಷಿಕರಿಗೆ ಆದ್ಯತೆ ನೀಡಲಾಗುವುದು.

**ಮಕ್ಕಳಿಗೆ ಸುರಕ್ಷಿತ ಆಹಾರ**

ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆ ಇರುವುದರಿಂದಲೂ ಮ್ತು ಅವರ ದೇಹದಿಂದ ಕಲ್ಮಶಗಳನ್ನು ಹೊರಹಾಕುವ ವ್ಯವಸ್ಥೆ ಇನ್ನೂ ಅಭಿವೃದ್ಧಿ ಹೊಂದದೆ ಇರುವುದರಿಂದ ಮಕ್ಕಳು ವಯಸ್ಕರಿಗಿಂತ ಆಹಾರದಲ್ಲಿನ ರಾಸಾಯನಿಕ ಉಳಿಕೆಗಳಿಂದ ಹೆಚ್ಚಿನ ತೊಂದರೆಗೆ ಒಳಪಡುತ್ತಾರೆ. ಇದನ್ನರಿತ ಹಲವು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಮಕ್ಕಳಿಗೆ ಸಾವಯವ ಆಹಾರವನ್ನು ನೀಡುವ ನೀತಿಯನ್ನು ಹೊರತರುತ್ತಿದ್ದಾರೆ. ಈ ಉತ್ಪನ್ನಗಳನ್ನೊಳಗೊಂಡ ಮಕ್ಕಳ ಆಹಾರ ತಯಾರಿಕಾ ಉದ್ಧಿಮೆ ಅಭಿವೃದ್ಧಿ ಹೊಂದಿದ ದೇಶದಲ್ಲಿ ಗಣನೀಯ ಪ್ರಮಾಣದಲ್ಲಿ ಬೆಳೆದಿರುತ್ತದೆ. ರಾಜ್ಯ ಸರ್ಕಾರವು ಶಿಶು ಆಹಾರ ಉತ್ಪಾದನಾ ಉದ್ದಿಮೆಯಲ್ಲಿ ಸಾವಯವ ಪದ್ಧತಿಯಲ್ಲಿ ಬೆಳೆದ ಉತ್ಪನ್ನಗಳನ್ನು ಬಳಸಲು ಪ್ರೋತ್ಸಾಹಿಸುತ್ತದೆ. ಶಿಶು ಆಹಾರ ಮತ್ತು ಉತ್ಪಾದಕರು ಹಾಗೂ ರೈತರ ಸಂಘಗಳು/ರೈತರ ಕೂಟ/ರೈತರ ಸಹಕಾರ ಸಂಘಗಳು/ರೈತರ ಕಂಪನಿಗಳು/ಸ್ವ–ಸಹಾಯ ಸಂಘಗಳು/ಸರ್ಕಾರೇತರ ಸಂಸ್ಥೆಗಳ ನಡುವೆ ಒಪ್ಪಂದ ಕೃಷಿ ವ್ಯವಸ್ಥೆ ಏರ್ಪಡಿಕೆಗೆ ಸೂಕ್ತ ವ್ಯವಸ್ಥೆ ಮಾಡಲಾಗುವುದು.

**ಪರಿಸರ ಪ್ರವಾಸೋದ್ಯಮ**

ವಿಶ್ವದಾದ್ಯಂತ ಪರಿಸರ ಸ್ನೇಹಿ ಪ್ರವಾಸೋದ್ಯಮ ಬೆಳೆಯುತ್ತಿದೆ. ಸ್ಥಳೀಯ ಜೀವನ ಶೈಲಿ ಕಾಪಾಡುತ್ತಾ ಅದನ್ನೇ ರೈತರ ಆರ್ಥಿಕ ಅಭಿವೃದ್ಧಿಯ ಸಾಧನವನ್ನಾಗಿ ಮಾಡುವುದು ಇದರ ಉದ್ದೇಶವಾಗಿದೆ. ರೈತರಲ್ಲಿನ ಸಾಂಪ್ರದಾಯಿಕ ಕೃಷಿ ಪದ್ಧತಿಗಳು, ಅಲ್ಲಿಯ ಪರಿಸರ, ಆತಿಥ್ಯ ಮೊದಲಾದವುಗಳು ದೇಶೀಯ, ವಿದೇಶೀಯ ಪ್ರವಾಸಿಗರನ್ನು ಆಕರ್ಷಿಸುತ್ತವೆ ಹಾಗೂ ಇದರಿಂದ ಸ್ಥಳೀಯ ಉತ್ಪಾದನೆಯೊಂದಿಗೆ ಉತ್ತಮ ಮಾರುಕಟ್ಟೆ ದೊರೆಯುವುದು. ಪರಿಶುದ್ಧ ಹವೆ, ನೀರು, ಆಹಾರವನ್ನು ಒದಗಿಸುವ ಸಾವಯವ ಕೃಷಿ ಗ್ರಾಮಗಳು, ಪರಿಸರ ಸ್ನೇಹಿ ಪ್ರವಾಸಿಗರ ನೆಚ್ಚಿನ ತಾಣಗಳಾಗುತ್ತವೆ. ಸರ್ಕಾರವು ಇದಕ್ಕಾಗಿ ನೆರವು ಮತ್ತು ಪ್ರೋತ್ಸಾಹ ನೀಡುವುದಲ್ಲದೆ ಪ್ರಚಾರ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರ ಮಾಡುವುದು.

**ರಾಸಾಯನಿಕ ಗೊಬ್ಬರ/ಪೀಡೆ ನಾಶಕ ಮುಕ್ತ ವಲಯಗಳು**

ರಾಜ್ಯದಲ್ಲಿ ಸೂಕ್ಷ್ಮ ಪರಿಸರದ, ಸಮೃದ್ಧ ಜೀವ ಸಂಕುಲವಿರುವ ಸ್ಥಳಗಳಿವೆ ಹಾಗೂ ನೈಸರ್ಗಿಕ ಸಂಪನ್ಮೂಲಗಳಿವೆ. ಇವನ್ನು ರಾಸಾಯನಿಕ ಗೊಬ್ಬರ ಹಾಗೂ ಕ್ರಿಮಿನಾಶಕಗಳ ಉಳಿಕೆಗಳಿಂದ ರಕ್ಷಿಸಬೇಕಾಗಿದೆ. ರಾಜ್ಯದಲ್ಲಿ ರಾಸಾಯನಿಕ ಗೊಬ್ಬರ ಹಾಗೂ ಕ್ರಿಮಿನಾಶಕಗಳನ್ನು ಅತ್ಯಲ್ಪ ಪ್ರಮಾಣದಲ್ಲಿ ಬಳಸುವ ಪ್ರದೇಶಗಳು ಸಹ ಇವೆ. ಇಂತಹ ಪ್ರದೇಶಗಳನ್ನು ಗುರುತಿಸಿ ಅವುಗಳನ್ನು 'ರಾಸಾಯನಿಕ ಗೊಬ್ಬರ/ಕ್ರಿಮಿನಾಶಕ ಮುಕ್ತ ವಲಯಗಳೆಂದು' ಘೋಷಿಸಲಾಗುವುದು.

**ವಿವಿಧ ಕಾರ್ಯಕ್ರಮಗಳಿಗೆ ನೀಡುವ ನೆರವಿನ ಪ್ರಮಾಣ**

ರಾಜ್ಯಮಟ್ಟದ ಅಧಿಕಾರಯುಕ್ತ ಸಮಿತಿ(ಎಂಪವರ್ಡ್ ಕಮಿಟಿ) ಸಾವಯವ ಕೃಷಿ ಕಾರ್ಯ ನಿರ್ವಹಣಾ ಸಮಿತಿಯ ಜೊತೆ ಸಮಾಲೋಚಿಸಿ ಸಾವಯವ ಕೃಷಿ ನೀತಿಯಲ್ಲಿನ ಕಾರ್ಯಸೂಚಿಯಂತೆ ಮಾರ್ಗದರ್ಶಕ ಸೂತ್ರಗಳನ್ನು ರೂಪಿಸುವುದು ಹಾಗೂ ಸಾವಯವ ಕೃಷಿಗೆ ಉತ್ತೇಜನ ನೀಡಲು ಸಹಾಯ, ರಿಯಾಯಿತಿಗಳ ಬಗ್ಗೆ ನಿರ್ಧರಿಸುವುದು.

## 24. ಹೆಣ್ಣು ಭ್ರೂಣ ಹತ್ಯೆ

ನಮ್ಮ ಭಾರತದ ಸಂಸ್ಕೃತಿಯೇ ಹಾಗೆ; ಕುಟುಂಬಗಳಲ್ಲಿ ಬಹುತೇಕ ಗಂಡುಮಕ್ಕಳನ್ನು ಪಡೆಯುವ ಹಂಬಲ ಅಧಿಕ. ಇದಕ್ಕೆ ಜಾತಿ, ಧರ್ಮ, ಸಾಮಾಜಿಕ– ಆರ್ಥಿಕ ಹಿನ್ನೆಲೆಯಾಗಲೀ ಅಡ್ಡಿಯಾಗುವುದಿಲ್ಲ. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣುಮಕ್ಕಳು ಕುಟುಂಬದಲ್ಲಿ


www.shikarat.com

ಪುರುಷರ ಅಧೀನದಲ್ಲೇ ಇರುತ್ತಾರೆ. ಆಸ್ತಿಯ ಹಕ್ಕಿನಲ್ಲಿ ತಾರತಮ್ಯ, ಮಹಿಳೆಯರಿಗೆ ಕಡಿಮೆ ವೇತನ ಅಥವಾ ವೇತನವಿಲ್ಲದ ಕೆಲಸ ನಮ್ಮ ಸಮಾಜದಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಬಹುತೇಕ ಮಹಿಳೆಯರ ಕೆಲಸ ಗೃಹಕೃತ್ಯಕ್ಕೇ ಸೀಮಿತವಾಗುತ್ತದೆ. ವಿವಾಹದ ನಂತರ ವಧುವಿನ ಹೊಣೆಯನ್ನು ಹೊರುವ ಸಲುವಾಗಿ ವಿವಾಹದ ಸಂದರ್ಭದಲ್ಲಿ ವರನ ಕುಟುಂಬದವರಿಗೆ ವಧುವಿನ ಕುಟುಂಬದವರು ವರದಕ್ಷಿಣೆ ನೀಡುವ ಪದ್ಧತಿ ಬೆಳೆದುಬಂದಿದೆ. ಕೆಲ ಸಮುದಾಯಗಳಲ್ಲಿ ಹೆಣ್ಣುಮಗು ಹುಟ್ಟಿದ ತಕ್ಷಣ ತಾಯಿ ಅಥವಾ ಕುಟುಂಬದ ಹಿರಿಯ ಮಹಿಳೆಯರು ಹೆಣ್ಣುಮಗುವನ್ನು ಹತ್ಯೆಮಾಡುವ ಅನಿಷ್ಟ ಸಂಪ್ರದಾಯವೂ ಇದೆ. ಜೀವಮಾನವಿಡೀ ಹಿಂಸೆ, ಕಿರುಕುಳ ಮತ್ತು ಅವಮಾನ ಅನುಭವಿಸುವುದನ್ನು ತಪ್ಪಿಸಲು ಇಂಥ ಕ್ರೂರ ಕ್ರಮಕ್ಕೆ ಮುಂದಾಗುತ್ತಾರೆ.

ಮಹಿಳೆಯರ ವಿರುದ್ಧ ಸಾಮಾಜಿಕ ತಾರತಮ್ಯದಿಂದಾಗಿ, ವ್ಯವಸ್ಥಿತವಾಗಿ ಮಹಿಳೆಯರ ಆರೋಗ್ಯವನ್ನು ಹುಟ್ಟಿನಿಂದ ಸಾವಿನವರೆಗೂ ಕಡೆಗಣಿಸಲಾಗುತ್ತಿದೆ. ಹೆಣ್ಣುಭ್ರೂಣ ಹತ್ಯೆ ಅಥವಾ ಹೆಣ್ಣುಮಕ್ಕಳನ್ನು ವ್ಯವಸ್ಥಿತವಾಗಿ ಹತ್ಯೆ ಮಾಡುವ ಪದ್ಧತಿ ಇಂದಿಗೂ ಹಲವು ರಾಜ್ಯಗಳಲ್ಲಿ ಜಾರಿಯಲ್ಲಿದೆ. ಒಟ್ಟಾರೆ ಲಿಂಗಾನುಪಾತ ಪ್ರಮಾಣ ಕೇರಳ ರಾಜ್ಯವನ್ನು ಹೊರತುಪಡಿಸಿದರೆ ಉಳಿದ ಯಾವ ರಾಜ್ಯಗಳಲ್ಲೂ ಆಶಾದಾಯಕವಾಗಿಲ್ಲ.

ಹೆಣ್ಣುಶಿಶು ಹತ್ಯೆಗೆ ಪ್ರಮುಖ ಕಾರಣವೆಂದರೆ ನಮ್ಮ ಸಮಾಜದಲ್ಲಿ ಬಲವಾಗಿ ಬೇರೂರಿರುವ ವರದಕ್ಷಿಣೆಯ ಭೂತ ಮತ್ತು ಬಹುಪತ್ನಿತ್ವದಂಥ ಪಿಡುಗುಗಳು. ಸಮಾಜದಲ್ಲಿ ಹಲವು ದಶಕಗಳಿಂದ ಕಂಡುಬರುತ್ತಿರುವ ಇನ್ನೊಂದು ಪ್ರಮುಖವಾದ ಸಮಸ್ಯೆ ಎಂದರೆ, ಗಂಡುಮಕ್ಕಳ ಮೇಲಿನ ಅತಿಯಾದ ಪ್ರೀತಿ. ಈ ಹಿನ್ನೆಲೆಯಲ್ಲಿ ಹೆಣ್ಣುಭ್ರೂಣ ಎಂದು ಗೊತ್ತಾದ ತಕ್ಷಣ ಅದನ್ನು ತೆಗೆಸಲು ಕ್ರಮ ಕೈಗೊಳ್ಳಲಾಗುತ್ತದೆ. ಭ್ರೂಣದ ಆರೋಗ್ಯವನ್ನು ಪತ್ತೆ ಮಾಡಲು ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗುತ್ತಿದ್ದು, ಇದನ್ನು ಕಾನೂನುಬದ್ಧವಾಗಿ, ಮಕ್ಕಳು ಹುಟ್ಟುವ ಮುನ್ನ ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸಲು ಮಾತ್ರ ಬಳಕೆ ಮಾಡಿಕೊಳ್ಳಬೇಕು. ಆದರೆ ವಾಸ್ತವವಾಗಿ ಇದನ್ನು ಹೆಣ್ಣುಭ್ರೂಣ ಹತ್ಯೆಯ ಸಾಧನವಾಗಿಯೇ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಹೆಣ್ಣುಭ್ರೂಣವನ್ನು ತೆಗೆಸುವ ಅಥವಾ ಗರ್ಭಪಾತ ಮಾಡಿಸುವುದು ಒತ್ತಾಯಪೂರ್ವಕವೇ ಎನ್ನುವುದು ಪ್ರಶ್ನೆ. ಹೌದು ಎನ್ನುವುದು ಇದಕ್ಕೆ ಉತ್ತರ. ಅಲ್ಟ್ರಾ ಸೋನೊಗ್ರಫಿ, ಅಮಿನೊಸಿಂಥೆಸಿಸ್, ಕೊರಿಯಲ್ ವಿಲ್ಲಿ ಬಯಾಪ್ಸಿ, ಭ್ರೂಣ ಸ್ಕ್ಯಾನ್, ಮೆಟಿರಿಯಲ್ ಸೆರಮ್ ಅನಾಲಿಸಿಸ್ ಮತ್ತಿತರ ತಂತ್ರಜ್ಞಾನಗಳು ಇದಕ್ಕೆ ಸಹಕರಿಸುತ್ತಿವೆಯೇ? ಮತ್ತೆ ಬಹುತೇಕ ಹೌದು ಎನ್ನುವುದೇ ಉತ್ತರ.

ಹಲವು ಜನಗಣತಿಗಳಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಗಣನೀಯವಾಗಿ ಇಳಿಕೆ ಕಾಣುತ್ತಿರುವುದೇ ಈ ಉತ್ತರಕ್ಕೆ ಪುಷ್ಟಿ ನೀಡುವ ಅಂಶ.

ಜನಗಣತಿ ವರ್ಷ
0–6 ವರ್ಷಗಳ ಮಕ್ಕಳ ಲಿಂಗಾನುಪಾತ
1981–

962 ಹೆಣ್ಣು/1000 ಗಂಡು
1991–

945 ಹೆಣ್ಣು/ 1000 ಗಂಡು
2001–

927 ಹೆಣ್ಣು/ 1000 ಗಂಡು
2011–

916 ಹೆಣ್ಣು/ 1000 ಗಂಡು

ಜೀವಶಾಸ್ತ್ರದ ಪ್ರಕಾರ, ಹೆಣ್ಣುಮಕ್ಕಳು ಹೆಚ್ಚು ಬಲಶಾಲಿ. ಹೆಣ್ಣುಮಕ್ಕಳ ಅಭಿವೃದ್ಧಿಗೆ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಂಡ ಬಳಿಕವೂ 1981ರಲ್ಲಿದ್ದ ಲಿಂಗಾನುಪಾತ ಉಳಿದುಕೊಳ್ಳಬೇಕಿತ್ತು. ಆದರೆ ಕಳೆದ ಇಪ್ಪತ್ತು ವರ್ಷಗಳಲ್ಲಿ ಇದು ಗಣನೀಯವಾಗಿ ಕುಸಿದಿರುವುದನ್ನು ನಾವು ಕಾಣಬಹುದು. ಹೆಣ್ಣು ಭ್ರೂಣಹತ್ಯೆಗೆ ಯಾವ ನೈತಿಕ ಸಮರ್ಥನೆಗಳೂ ಇಲ್ಲ. ಅದಾಗ್ಯೂ ಈ ಅನಿಷ್ಟ ಪದ್ಧತಿ ಮುಂದುವರಿದುಕೊಂಡುಬಂದಿದೆ. ಭ್ರೂಣದಲ್ಲಿ ಬೆಳೆಯುತ್ತಿರುವ ಮಗು ಗಂಡೇ ಅಥವಾ ಹೆಣ್ಣೇ ಎಂಬ ಪ್ರಸವಪೂರ್ವ ಲಿಂಗ ನಿರ್ಧರಣೆ ಕೇವಲ ಮಹಾನಗರಗಳಿಗೆ ಮಾತ್ರ ಸೀಮಿತವಾಗದೇ, ಗ್ರಾಮಮಟ್ಟದಲ್ಲೂ ಈ ವ್ಯವಸ್ಥೆ ಬಹುತೇಕ ಜಾರಿಯಲ್ಲಿದೆ. ಇದೇ ಪ್ರವೃತ್ತಿ ಮುಂದುವರಿದರೆ, ಮುಂದಿನ ಕೆಲವೇ ದಶಕಗಳಲ್ಲಿ ಇದಕ್ಕೆ ಇಡೀ ಮನುಕುಲ ಭಾರೀ ಬೆಲೆ ತೆರಬೇಕಾಗುತ್ತದೆ.

ಹೆಣ್ಣಾಗಿರಲಿ, ಗಂಡಾಗಿರಲಿ, ಮಕ್ಕಳಿಗೆ ದೊಡ್ಡ ಬೆಂಬಲ ನೀಡುವವರೆಂದರೆ ತಂದೆ– ತಾಯಿ. ಒಂದು ಹೆಣ್ಣುಮಗುವಿಗೆ ತಂದೆಯ ಅಪಾರ ಪ್ರೀತಿ ದೊರಕಿ, ಎಲ್ಲ ಮೂಲಭೂತ ಹಕ್ಕುಗಳು ದೊರೆಯುವಂತಾದರೆ, ಅಂಥ ಹೆಣ್ಣುಮಗು ಖಂಡಿತವಾಗಿಯೂ ಕೀರ್ತಿ ತರುವ



Universal Coaching Centre
www.shikarat.com

ಮಟ್ಟಕ್ಕೆ ಬೆಳೆಯುತ್ತದೆ. ಆದರೆ ಬಹುತೇಕ ತಂದೆಯಂದಿರು ಮಕ್ಕಳಿಗೆ ಭೌತಿಕ ಐಷಾರಾಮಿ ವ್ಯವಸ್ಥೆಯನ್ನು ಕಲ್ಪಿಸುತ್ತಾರೆಯೇ ವಿನಃ ಅವರ ಜೀವನ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಅವರ ಹಕ್ಕನ್ನು ನಿರಾಕರಿಸುತ್ತಾರೆ. ಈ ಸಂದರ್ಭದಲ್ಲಿ ಈ ಕೆಳಗಿನ ಕವನದ ಸಾಲುಗಳು ಬಹಳಷ್ಟು ಅರ್ಥಪೂರ್ಣ. ಹೆಣ್ಣುಮಗು ತನ್ನ ತಂದೆಯ ಬಗ್ಗೆ ಯಾವ ಭಯ ಹೊಂದಿರುತ್ತದೆ ಎನ್ನುವುದನ್ನು ಈ ಸಾಲು ಬಿಂಬಿಸುತ್ತದೆ. ಅದರ ಸಾರಾಂಶವೆಂದರೆ, ನಾನು ಬಾನಿನ ಕ್ರೋಧವನ್ನಾದರೂ ಸಹಿಸಿಕೊಳ್ಳಬಲ್ಲೆ; ಆದರೆ ತಂದೆಯ ಕೋಪವನ್ನಲ್ಲ ಎನ್ನುವುದು.

ಮಗಳೊಬ್ಬಳಿಗೆ ತನ್ನ ತಂದೆ ತನ್ನ ಬೆಂಬಲಕ್ಕೆ ಇಲ್ಲ ಎನ್ನುವುದಕ್ಕಿಂತ ಹೆಚ್ಚಿನ ದುರಂತ ಬೇರೆ ಇಲ್ಲ. ಆ ಹೆಣ್ಣುಮಗುವನ್ನು ಕುಟುಂಬದಲ್ಲಿ ತಿರಸ್ಕಾರದಿಂದ ಕಂಡರೆ, ಅದರ ಪರಿಣಾಮ ಸಂಕೀರ್ಣವಾಗುತ್ತಾ ಹೋಗುತ್ತದೆ. ತಂದೆ– ತಾಯಿ ತನ್ನನ್ನು ಪ್ರೀತಿಸುವುದಿಲ್ಲ ಎನ್ನುವುದು ಹೆಣ್ಣುಮಕ್ಕಳಿಗೆ ಸಾವಿಗಿಂತಲೂ ಅಧಿಕ ನೋವು ಕೊಡುವ ಸಂಗತಿ.

ಕೆಲ ತಿಂಗಳ ಹಿಂದೆ, ದೆಹಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು, ಸಂಸತ್ತಿನಲ್ಲಿ ಮಂಡಿಸಿದ ಪ್ರಸವಪೂರ್ವ ಚಿಕಿತ್ಸಾ ಮಸೂದೆಯ ಪರವಾಗಿ ದೊಡ್ಡ ಜಾಥಾ ನಡೆಸಿದರು. ಹೆಣ್ಣು ಭ್ರೂಣಹತ್ಯೆಗೆ ಕಾರಣವಾಗುವ ವೈದ್ಯರ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಲು ಈ ಮಸೂದೆ ಉದ್ದೇಶಿಸಿದೆ.

ಇದೀಗ ಜಾರಿಯಲ್ಲಿರುವ 1994ರ ಪ್ರಸವಪೂರ್ವ ಚಿಕಿತ್ಸಾ ಕಾಯ್ದೆಯಲ್ಲಿ ಮಹತ್ವದ ಬದಲಾವಣೆಗಳನ್ನು ತರಲು ಹೊಸ ಮಸೂದೆ ಉದ್ದೇಶಿಸಿದೆ. ಎಲ್ಲ ರೀತಿಯ ಸ್ಕ್ಯಾನ್‌ಗಳನ್ನು ದಾಖಲಿಸುವುದಷ್ಟೇ ಅಲ್ಲದೇ, ಪ್ರತಿ ಸ್ಕ್ಯಾನಿಂಗ್‌ನ ವಿವರಗಳನ್ನು ದಾಖಲಿಸುವುದೂ ಕಡ್ಡಾಯ. ಈ ಕಾಯ್ದೆ ಉಲ್ಲಂಘಿಸಿದರೆ ಶಿಕ್ಷೆಯ ಪ್ರಮಾಣವನ್ನೂ ಹೆಚ್ಚಿಸಲಾಗಿದೆ. ಆದರೆ ಈ ಉದ್ದೇಶಿತ ತಿದ್ದುಪಡಿಗೆ ಪ್ರಭಾವಿ ವೈದ್ಯ ಲಾಬಿ ಪ್ರತಿರೋಧ ಒಡ್ಡಿದೆ.

ಪಂಜಾಬ್‌ನಲ್ಲಿ 1979ರಲ್ಲಿ ದೇಶದ ಮೊಟ್ಟಮೊದಲ ಲಿಂಗನಿರ್ಧರಣಾ ಕ್ಲಿನಿಕ್ ಸ್ಥಾಪನೆಯಾದ ಬಳಿ, ಇಂಥ ಕ್ಲಿನಿಕ್‌ಗಳು ಕ್ಷಿಪ್ರವಾಗಿ ದೇಶಾದ್ಯಂತ ನಾಯಿಕೊಡೆಗಳಂತೆ ಹರಡಿದವು. 1980ರ ದಶಕದ ಆರಂಭದ ವೇಳೆಗೆ ಗ್ರಾಮೀಣ ಪ್ರದೇಶಳಗಳಲ್ಲಿ ಕೂಡಾ ಅಗ್ಗದ ದರದಲ್ಲಿ ಲಿಂಗ ನಿರ್ಧರಿಸುವ ಕೇಂದ್ರಗಳು ನಾಯಿಕೊಡೆಗಳಂತೆ ಹುಟ್ಟಿಕೊಂಡವು.

ದೆಹಲಿ ಮೂಲದ ಮಹಿಳಾ ಗುಂಪು "ಸಾಹೆಬ್" ಪ್ರಕಾರ, 1978ರಿಂದ 1982ರವರೆಗೆ ಸುಮಾರು 78 ಸಾವಿರ ಹೆಣ್ಣುಭ್ರೂಣ ಹತ್ಯೆ ನಡೆದಿದೆ. 1987– 88ರಲ್ಲಿ ದೆಹಲಿಯ ಏಳು ಕ್ಲಿನಿಕ್‌ಗಳಲ್ಲೇ ಸುಮಾರು 13 ಸಾವಿರ ಲಿಂಗ ನಿರ್ಧರಣೆ ಪರೀಕ್ಷೆಗಳು ನಡೆದಿವೆ. ಇಂದು ಈಶಾನ್ಯ ರಾಜ್ಯಗಳಲ್ಲಿ ಇಂಥ ಹಲವು ಕ್ಲಿನಿಕ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಇಲ್ಲಿ ಲಿಂಗಾನುಪಾತ ಪ್ರಮಾಣ ಕನಿಷ್ಠವಾಗಿದೆ. ಪಂಜಾಬ್ ರಾಜ್ಯದಲ್ಲಿ ಪ್ರತಿ ಸಾವಿರ ಗಂಡುಮಕ್ಕಳಿಗೆ 846 ಹೆಣ್ಣುಮಕ್ಕಳಿದ್ದರೆ, ಹರಿಯಾಣಾದಲ್ಲಿ ಈ ಪ್ರಮಾಣ 830ರಷ್ಟು ಮಾತ್ರ ಇದೆ. ದೆಹಲಿಯಲ್ಲಿ ಪ್ರತಿ 1000 ಗಂಡುಮಕ್ಕಳಿಗೆ 866 ಹೆಣ್ಣುಮಕ್ಕಳಿದ್ದಾರೆ ಎಂದು 2011ರ ಜನಗಣತಿ ಅಂಕಿ ಅಂಶಗಳು ಹೇಳುತ್ತವೆ.

ಲಿಂಗಾನುಪಾತ ಕುಸಿತದ ಪ್ರಮಾಣ ದೊಡ್ಡ ನಗರಗಳಲ್ಲಿ ಗ್ರಾಮೀಣ ಪ್ರದೇಶಗಳಿಗಿಂತ ದುಪ್ಪಟ್ಟು ಹೆಚ್ಚಾಗಿದೆ. ಮಹಿಳೆಯರು ತಮಗೆ ಬೇಡದ ಗರ್ಭವನ್ನು ಗರ್ಭಪಾತ ಮಾಡಿಸುವ ಹಕ್ಕು ಹೊಂದಿದ್ದಾರೆ ನಿಜ; ಆದರೆ ಹೊಸ ತಂತ್ರಜ್ಞಾನವನ್ನು ಕೇವಲ ಹೆಣ್ಣುಮಕ್ಕಳ ಭ್ರೂಣಹತ್ಯೆಗಷ್ಟೇ ಬಳಸಿಕೊಂಡರೆ, ಅದನ್ನು ಪ್ರಶ್ನಿಸಲೇಬೇಕಾಗುತ್ತದೆ.

ಈ ನಿಟ್ಟಿನಲ್ಲಿ ಪಿಎನ್‌ಡಿಟಿ ಮಸೂದೆ ಒಂದು ಪ್ರಯತ್ನ ಎನ್ನಬಹುದು. ಲಿಂಗ ತಾರತಮ್ಯ ಮತ್ತು ಅಸಮಾನತೆ ವಿರುದ್ಧ ರಾಷ್ಟ್ರವ್ಯಾಪಿ ಹೋರಾಟ ನಡೆಯಬೇಕು. ದೊಡ್ಡ ಮಟ್ಟದಲ್ಲಿ ಪ್ರಚಾರಾಂದೋಲನ ನಡೆಯಬೇಕು. ಹೆಣ್ಣು ಭ್ರೂಣ ಹತ್ಯೆ ಅಥವಾ ಹೆಣ್ಣು ಶಿಶುಹತ್ಯೆಯ ಮೂಲ ಕಾರಣವನ್ನು ಪತ್ತೆ ಮಾಡಿ, ಅದನ್ನು ಪರಿಹರಿಸುವ ಕೆಲಸ ಆಗಬೇಕು. ಒತ್ತಾಯದ ಮದುವೆ, ವರದಕ್ಷಿಣೆ, ಅನಕ್ಷರತೆಯಂಥ ಪಿಡುಗುಗಳು ಮಹಿಳೆಯರಲ್ಲಿ ನಿವಾರಣೆಯಾಗುವವರೆಗೂ ಇಂಥ ಸಮಸ್ಯೆ ಕೂಡಾ ಮುಂದುವರಿಯುತ್ತದೆ. ಮಹಿಳೆಯರ ಜೀವನಮಟ್ಟದಲ್ಲಿ ಯಾವ ಬದಲಾವಣೆಯೂ ಸಾಧ್ಯವಿಲ್ಲ. ಪ್ರಸವಪೂರ್ವ ಲಿಂಗ ನಿರ್ಧರಣೆಯನ್ನು ನಿಷೇಧಿಸುವುದು ಈ ಹಕ್ಕಿಗಾಗಿ ಹೋರಾಟ ಮಾಡುತ್ತಿರುವ ಚಳವಳಿಗಾರರ ಕಿರೀಟಕ್ಕೆ ಒಂದು ಹೊಸ ಸೇರ್ಪಡೆಯಾಬಹುದಷ್ಟೆ. ಆದರೆ ಕೇವಲ ಅದರಿಂದ ಪವಾಡ ಸದೃಶ ಬದಲಾವಣೆಯಂತೂ ಸಾಧ್ಯವೇ ಇಲ್ಲ. ಅಥವಾ ಮಹಿಳೆಯರ ಬದುಕಿನಲ್ಲೂ ಇದು ಯಾವುದೇ ಗುಣಾತ್ಮಕ ಬದಲಾವಣೆ ತರಲಾರದು. ಈ ಬಗ್ಗೆ ಸಾಮಾಜಿಕ ಜಾಗೃತಿ ಮೂಡಿಸುವ ಹಾಗೂ ಹೆಣ್ಣುಮಕ್ಕಳಿಗೆ ಗೌರವದ ಸ್ಥಾನ ನೀಡುವ ಪರಿಸ್ಥಿತಿ ನಿರ್ಮಾಣವಾಗುವವರೆಗೆ ಅಥವಾ ರಾಜಕೀಯ ಇಚ್ಛಾಶಕ್ತಿ ರೂಪಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನಗಳು ನಡೆಯುವವರೆಗೆ ಈ ಸಮಸ್ಯೆಗೆ ಪರಿಹಾರ ಸಾಧ್ಯವಿಲ್ಲ.

## 25. ಪರಿಸರ ಮಾಲಿನ್ಯ

ಮಾನವನ ಉತ್ತಮ ಆರೋಗ್ಯಕ್ಕೆ ಉತ್ತಮ ಪರಿಸರ ಅನಿವಾರ್ಯ. ಆದರೆ ತನ್ನ ಜೀವಾಳ ಎನಿಸಿದ ಪರಿಸರಕ್ಕೆ ನಾಶ ಮಾಡುವಲ್ಲಿ ಮನುಷ್ಯರೇ ಮುಂದು ಎನ್ನುವ ವಿಚಿತ್ರ ಸನ್ನಿವೇಶವನ್ನು ನಾವಿಂದು ಕಾಣುತ್ತಿದ್ದೇವೆ. ತಕ್ಷಣದ ಭೌತಿಕ ಸುಖಕ್ಕಾಗಿ ಮತ್ತು ಹಣದ ದುರಾಸೆಯಿಂದ ಪರಿಸರ ನಾಶ ಮಾಡುವ ಮೂಲಕ ತನ್ನ ಮುಂದಿನ ತಲೆಮಾರಿಗೇ ಅಪಾಯ ತಂದುಕೊಡುವ ಸ್ಥಿತಿಯನ್ನು ಮನುಷ್ಯ ನಿರ್ಮಿಸಿರುವುದು ವಿಚಿತ್ರ.

ಇತಿಹಾಸದುದ್ದಕ್ಕೂ ಪರಿಸರ ಮಾಲಿನ್ಯದ ಬಗ್ಗೆ ನೀತಿ ನಿರೂಪಕರಾಗಲೀ, ತಜ್ಞರಾಗಲೀ ಇಲ್ಲವೇ ನ್ಯಾಯಾಲಯಗಳಾಗಲೀ ಧ್ವನಿ ಎತ್ತಿದ ನಿದರ್ಶನಗಳಿಲ್ಲ; ಅಥವಾ ಈ ಬಗ್ಗೆ ಕಾಳಜಿ ಇಂಥ ಜವಾಬ್ದಾರಿ ಸ್ಥಾನದಿಂದ ವ್ಯಕ್ತವಾಗಿಲ್ಲ. ಕನಿಷ್ಠ ಭಾರತದಲ್ಲಾದರೂ ಇದು ನಿಜ. ಪರಿಸರ ಹಾನಿ ಮತ್ತು ಆರ್ಥಿಕ ಚಟುವಟಿಕೆಗಳ ನಡುವಿನ ಸಂಬಂಧವನ್ನು ಪತ್ತೆ ಮಾಡುವ ಸಂಬಂಧ ಕಳೆದ ಕೆಲ ವರ್ಷಗಳಲ್ಲಿ ಹಲವು ಅಧ್ಯಯನಗಳು ನಡೆದಿವೆ. ಪರಿಸರವನ್ನು ಸಂರಕ್ಷಿಸುವ ಸಲುವಾಗಿ ಮತ್ತು ಹೆಚ್ಚುತ್ತಲೇ ಇರುವ ಪರಿಸರ ಮಾಲಿನ್ಯವನ್ನು ಕಡಿಮೆ ಮಾಡುವ ಸಲುವಾಗಿ ಹೊಸ ತಂತ್ರಜ್ಞಾನದ ಅಗತ್ಯತೆಯನ್ನು ಬಹುತೇಕ ಎಲ್ಲ ಅಧ್ಯಯನಗಳು ಕಂಡುಕೊಂಡಿವೆ.


www.shikarat.com

ಕ್ಷಿಪ್ರ ಕೈಗಾರಿಕಾ ಪ್ರಗತಿಯ ಪರಿಣಾಮವಾಗಿ ಮನುಕುಲದ ಮೌಲ್ಯಯುತ ಪರಂಪರೆ ಎನಿಸಿಕೊಂಡ ನೈಸರ್ಗಿಕ ವಾತಾವರಣಕ್ಕೆ ಅಪಾಯ ಎದುರಾಗಿದ್ದು, ಮಾಲಿನ್ಯ ಮಿತಿಮೀರಿದೆ. ಹಿಂದೆ ಬಹುತೇಕ ಎಲ್ಲ ಆರ್ಥಿಕ ಚಟುವಟಿಕೆಗಳ, ಅಭಿವೃದ್ಧಿ ನೀತಿನಿಯಮಗಳ ಮೂಲ ಉದ್ದೇಶ ಆರ್ಥಿಕ ಲಾಭವಷ್ಟೇ ಆಗಿತ್ತು. ಆದರೆ ಕಳೆದ ಕೆಲ ವರ್ಷಗಳಿಂದ ಪರಿಸರ ಸಂರಕ್ಷಣೆಯ ಕ್ಷೇತ್ರದಲ್ಲೂ ಹೂಡಿಕೆ ಮಾಡುವುದು ಅನಿವಾರ್ಯ ಎನ್ನುವ ವಾಸ್ತವ ಅರಿವಿಗೆ ಬಂದಿದೆ. ಉತ್ಪಾದಕತೆ ಹೆಚ್ಚಿಸುವ ನಿಟ್ಟಿನಲ್ಲಿ ಪರಿಸರ ಮಾಲಿನ್ಯವನ್ನು ನಿಯಂತ್ರಿಸುವ ಕ್ರಮವನ್ನೂ ಅನುಸರಿಸುವುದು ಅಗತ್ಯ ಎನ್ನುವುದು ಮನವರಿಕೆಯಾಗಿದೆ. ಪ್ರಕೃತಿ ಮನುಕುಲದ ಮೇಲೆ ಸೇಡು ತೀರಿಸಿಕೊಳ್ಳುವುದನ್ನು ತಪ್ಪಿಸಿಕೊಳ್ಳಬೇಕಾದರೆ, ಮಾಲಿನ್ಯ ನಿಯಂತ್ರಣ ತಡೆಯುವುದು ಅಗತ್ಯ ಎನ್ನುವುದು ಬಹುತೇಕ ಮಂದಿಗೆ ಮನವರಿಕೆಯಾಗಿದೆ.

ಪರಿಸರ ಮಾಲಿನ್ಯದ ಪರಿಣಾಮವಾಗಿ ಜಾಗತಿಕ ತಾಪಮಾನ ಗಣನೀಯವಾಗಿ ಏರಿಕೆಯಾಗುತ್ತಿದ್ದು, ಇದು ಇಡೀ ನಾಗರೀಕತೆಗೆ ದೊಡ್ಡ ಅಪಾಯವನ್ನು ತಂದೊಡ್ಡಿದೆ. 1992ರಲ್ಲಿ ಹವಾಮಾನ ಬದಲಾವಣೆ ಕುರಿತು ನಡೆದ ವಿಶ್ವಸಂಸ್ಥೆಯ ಸಮಾವೇಶದಲ್ಲೂ ಬಹುತೇಕ ಎಲ್ಲ ರಾಷ್ಟ್ರಗಳು ಕೂಡಾ ಈ ವಾದವನ್ನು ಒಪ್ಪಿಕೊಂಡಿವೆ. ಈ ಸಮಾವೇಶದ ನಿರ್ಣಯದ ಪ್ರಕಾರ, ಕೈಗಾರಿಕಾ ಕ್ಷೇತ್ರದಲ್ಲಿ ಮುಂದುವರಿದ ರಾಷ್ಟ್ರಗಳೇ ಹಸಿರು ಮನೆ ಪರಿಣಾಮಕ್ಕೆ ಮುಖ್ಯ ಕಾರಣ. ಇಂಥ ಕೈಗಾರಿಕೆಗಳು ಉಂಟುಮಾಡುವ ಮಾಲಿನ್ಯದಿಂದಾಗಿಯೇ ಹಸಿರುಮನೆ ಅನಿಲಗಳು ಹೆಚ್ಚುಹೆಚ್ಚು ಬಿಡುಗಡೆಯಾಗಿ ವಾತಾವರಣದಲ್ಲಿ ಪ್ರಬಲವಾಗುತ್ತಾ ಹೋಗುತ್ತದೆ. ಇದು ಭೂಮಿಯ ವಾತಾವರಣವನ್ನು ಹದಗೆಡಿಸುವುದಲ್ಲದೇ, ಹವಾಮಾನ ಬದಲಾವಣೆಗೂ ಪ್ರಮುಖ ಕಾರಣವಾಗುತ್ತಿದೆ.

ಜಪಾನ್‌ನ ಪ್ರಾಚೀನ ರಾಜಧಾನಿ ಕ್ಯೂಟೊದಲ್ಲಿ 1997ರಲ್ಲಿ ಜಾಗತಿಕ ಉಷ್ಣತೆ ಬಗೆಗಿನ ಹತ್ತು ದಿನಗಳ ಸಮಾವೇಶ ನಡೆಯಿತು. ಆದರೆ ಈ ಮಾತುಕತೆ ಫಲಪ್ರದವಾಗಲಿಲ್ಲ. ಭೂಗ್ರಹಕ್ಕೆ ಮಾರಕವಾಗುವ ರೀತಿಯಲ್ಲಿ ಆಗುತ್ತಿರುವ ಮಾಲಿನ್ಯವನ್ನು ತಡೆಗಟ್ಟುವ ಉಪಕ್ರಮವನ್ನು ಕೈಗೊಳ್ಳಲು ಯಾವ ದೇಶಗಳೂ ಮುಂದಾಗದ ಹಿನ್ನೆಲೆಯಲ್ಲಿ ಮಾತುಕತೆ ಕಗ್ಗಂಟಾಯಿತು. 2012ರ ಒಳಗಾಗಿ ಹಸಿರುಮನೆ ಪರಿಣಾಮಕ್ಕೆ ಕಾರಣವಾಗುವ ಅನಿಲವನ್ನು ವಾತಾವರಣಕ್ಕೆ ಬಿಡುವ ಪ್ರಮಾಣವನ್ನು ಕಡಿಮೆ ಮಾಡಲು ಅಮೆರಿಕ ಹಾಗೂ ಇತರ 37 ಕೈಗಾರಿಕಾ ದೇಶಗಳು ಒಪ್ಪಿಕೊಂಡವು ಮತ್ತು 1990ರ ಮಟ್ಟಕ್ಕಿಂತ ಕನಿಷ್ಠ ಶೇಕಡ ಐದರಷ್ಟು ಕಡಿಮೆ ಪ್ರಮಾಣಕ್ಕೆ ಮಾಲಿನ್ಯವನ್ನು ನಿಯಂತ್ರಿಸುವ ಭರವಸೆ ನೀಡಿದವು. ಮುಂದಿನ ಸಭೆ 1998ರ ನವೆಂಬರ್ 14ರಂದು ಬ್ಯೂನಸ್ ಐರಿಸ್‌ನಲ್ಲಿ ನಡೆಯಿತು. 2000ನೇ ಇಸ್ವಿಯ ಒಳಗಾಗಿ ಬಗೆಹರಿಸಬೇಕಾದ ಪರಿಸರ ಸಂಬಂಧಿ ವಿಷಯಗಳ ಬಗ್ಗೆ ನಿಗದಿತ ವೇಳಾಪಟ್ಟಿಯನ್ನೂ ಇಲ್ಲಿ ಅಂತಿಮಪಡಿಸಲಾಯಿತು.

ವಾಸ್ತವವಾಗಿ ಅಮೆರಿಕ ಮತ್ತು ಯೂರೋಪಿಯನ್ ದೇಶಗಳು, ಪರಿಸರ ಮಾಲಿನ್ಯ ತಡೆ ನಿಟ್ಟಿನಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳಾದ ಭಾರತ, ಚೀನಾ ಮತ್ತಿತರ ದೇಶಗಳು ಕ್ಯೂಟೊ ಒಪ್ಪಂದಕ್ಕೆ ಅನುಗುಣವಾಗಿ ನಡೆದುಕೊಳ್ಳಬೇಕು ಎಂದು ಪಟ್ಟುಹಿಡಿದವು. ಆದರೆ ಭಾರತ ಹಾಗೂ ಚೀನಾ ಇದನ್ನು ವಿರೋಧಿಸಿ, ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಈಗಷ್ಟೇ ಕೈಗಾರಿಕೀಕರಣ ಆರಂಭವಾಗಿದೆ. ಈ ಹಿನ್ನೆಲೆಯಲ್ಲಿ ಅಭಿವೃದ್ಧಿಹೊಂದಿದ ದೇಶಗಳು ಮೊದಲು ಪರಿಸರ ಮಾಲಿನ್ಯ ತಡೆಗೆ ಹೆಚ್ಚಿನ ಪ್ರಯತ್ನ ನಡೆಸಬೇಕು ಎಂದು ಆಗ್ರಹಿಸಿದವು. ಅಭಿವೃದ್ಧಿ ಹೊಂದಿದ ದೇಶಗಳೇ ನಿಜವಾಗಿ ಅಧಿಕ ಪರಿಸರ ಮಾಲಿನ್ಯಕ್ಕೆ ಹೊಣೆ ಎನ್ನುವುದು ಈ ದೇಶಗಳ ವಾದವಾಗಿತ್ತು.

ಈಗ ಕಂಡುಬರುತ್ತಿರುವ ಕಾಳಜಿ ಮತ್ತು ಸಂರಕ್ಷಣಾ ಪ್ರಯತ್ನಗಳು ಮಾನವನ ಕ್ರಿಯೆಗಳ ಪರಿಣಾಮವಾಗಿ ಬಂದ ಮಾಲಿನ್ಯದಿಂದ ಉಂಟಾಗಿರುವುದು. ಮಾನವನ ಬೇಡಿಕೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇವೆ. ಆಧುನೀಕರಣ ಹಾಗೂ ಜನಸಂಖ್ಯಾ ಸ್ಫೋಟದಿಂದ ಈ ಬೇಡಿಕೆಗಳು ಏರುಗತಿಯಲ್ಲೇ ಸಾಗಿವೆ. ಇಂಥ ಹೆಚ್ಚುವರಿ ಬೇಡಿಕೆಗಳನ್ನು ಈಡೇರಿಸಲು ಅಗತ್ಯವಾದಷ್ಟು ಸಂಪನ್ಮೂಲ ನಮ್ಮಲ್ಲಿಲ್ಲ. ಸಂಪನ್ಮೂಲ ಸದಾ ನಿಯಮಿತವಾಗಿರುತ್ತವೆ. ಅತ್ಯಧಿಕ ಹಾಗೂ ನಿರಂತರವಾಗಿ ನೈಸರ್ಗಿಕ ಸಂಪನ್ಮೂಲಗಳನ್ನು ಶೋಷಿಸುತ್ತಲೇ ಮನುಕುಲ ಮುಂದುವರಿಯುತ್ತಿದೆ. ಇದರ ಪರಿಣಾಮದಿಂದ ಪರಿಸರದ ಶುದ್ಧತೆ ಮಾಯವಾಗುತ್ತಿದೆ. ಡೆಂಗೆ, ವೈರಸ್ ಜ್ವರ, ಸಾಂಕ್ರಾಮಿಕ ರೋಗಗಳು, ಮಣ್ಣಿನ ಸವಕಳಿ, ಪ್ರವಾಹ, ಬರ ಪರಿಸ್ಥಿತಿ, ಭೂಕಂಪ, ನಗರಗಳ ದಟ್ಟಣೆ ಮತ್ತು ವಿವಿಧ ಸಸ್ಯ ಹಾಗೂ ಪ್ರಾಣಿ ಪ್ರಭೇದಗಳು ವಿನಾಶದಂಚಿಗೆ ತಲುಪಿರುವುದು, ಹಲವು ಪ್ರಾಣಿ ಪಕ್ಷಿಗಳು ನಮ್ಮಿಂದ ಮರೆಯಾಗಿರುವುದು ಎಲ್ಲವೂ ಪರಿಸರ ಮಾಲಿನ್ಯದ ಪರಿಣಾಮವಾಗಿಯೇ.

ಮಾನವನ ಉತ್ತಮ ಆರೋಗ್ಯಕ್ಕೆ ಉತ್ತಮ ಪರಿಸರ ಅನಿವಾರ್ಯ. ಆದರೆ ತನ್ನ ಜೀವಾಳ ಎನಿಸಿದ ಪರಿಸರಕ್ಕೆ ನಾಶ ಮಾಡುವಲ್ಲಿ ಮನುಷ್ಯರೇ ಮುಂದು ಎನ್ನುವ ವಿಚಿತ್ರ ಸನ್ನಿವೇಶವನ್ನು ನಾವಿಂದು ಕಾಣುತ್ತಿದ್ದೇವೆ. ತಕ್ಷಣದ ಭೌತಿಕ ಸುಖಕ್ಕಾಗಿ ಮತ್ತು ಹಣದ ದುರಾಸೆಯಿಂದ ಪರಿಸರ ನಾಶ ಮಾಡುವ ಮೂಲಕ ತನ್ನ ಮುಂದಿನ ತಲೆಮಾರಿಗೇ ಅಪಾಯ ತಂದುಕೊಡುವ ಸ್ಥಿತಿಯನ್ನು ಮನುಷ್ಯ ನಿರ್ಮಿಸಿರುವುದು ವಿಚಿತ್ರ. ಯೋಜನಾಬದ್ಧವಲ್ಲದ ಮತ್ತು ಅಳತೆ ತಪ್ಪಿದ ಕೈಗಾರಿಕೀಕರಣ ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರಿದೆ. ವಾತಾವರಣದ ಶುದ್ಧತೆಯನ್ನು ಹಾಳುಮಾಡುವ ಹಲವು ಅನಿಲಗಳು, ಹೊಗೆ, ಧೂಳು ಮತ್ತು ಜ್ವಾಲೆಯನ್ನು ವಾತಾವರಣಕ್ಕೆ ಬಿಡುವ ಮೂಲಕ ಪರಿಸರ ಮಾಲಿನ್ಯಕ್ಕೆ ಗಣನೀಯ ಕೊಡುಗೆ ನೀಡುತ್ತಿವೆ. ಜೌಗು ಪ್ರದೇಶ ಮತ್ತು ನದಿಗಳಿಗೆ ಕೈಗಾರಿಕೆಗಳ ತ್ಯಾಜ್ಯ ಸೇರಿ ಇದು ಕೂಡಾ ಮಲಿನವಾಗುತ್ತಿದೆ. ಈ ಜಲಮಾಲಿನ್ಯ ಅರಣ್ಯದ ಮೇಲೂ ವ್ಯತಿರಿಕ್ತ ಪರಿಣಾಮವನ್ನು ಬೀರಿದೆ. ಅರಣ್ಯ ಪ್ರದೇಶದಲ್ಲಿ ಅವ್ಯಾಹತವಾಗಿ ಗಣಿಗಾರಿಕೆ ನಡೆಸಿದ ಪರಿಣಾಮವಾಗಿ ಸುತ್ತಮುತ್ತಲಿನ ಹಲವಾರು ಅರಣ್ಯ ಪ್ರದೇಶ ನಾಶವಾದ ನಿದರ್ಶನಗಳು ರಾಜಸ್ಥಾನದ ಅಲ್ವಾರ್, ಮಕ್ರಾನಾ, ಕಿಶನ್‌ಗಢ, ರಾಜ್‌ಸಮಾಧ್ ಪ್ರದೇಶದಲ್ಲಿ, ಉತ್ತರಖಂಡದ ಡೆಹ್ರಾಡೂನ್ ಪ್ರದೇಶದಲ್ಲಿ ಕಾಣಸಿಗುತ್ತವೆ. ಇತರ ಹಲವಾರು ಕಡೆಗಳಲ್ಲಿ ಸ್ವಾಭಾವಿಕ ಪರಿಸರ ಸಮತೋಲನ ತಪ್ಪಿದೆ. ಎಲ್ಲಕ್ಕಿಂತ ಹೆಚ್ಚಾಗಿ ಪರಿಸರ ಮಾಲಿನ್ಯ ಮಾನವನ ಆರೋಗ್ಯಕ್ಕೆ ಗಂಡಾಂತರಕಾರಿಯಾಗಿ ಪರಿಣಮಿಸಿದೆ.

ಪರಿಸರ ಮಾಲಿನ್ಯದ ವಿನಾಶಕಾರಿ ಪರಿಣಾಮವನ್ನು ಭಾರತ ಕ್ಷಿಪ್ರವಾಗಿ ಗುರುತಿಸಿದೆ. ಭಾರತ ಸರ್ಕಾರ ಮೊಟ್ಟಮೊದಲ ಬಾರಿಗೆ ನಾಲ್ಕನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲೇ (1969– 1974) ಪರಿಸರ ಮಾಲಿನ್ಯದ ದುಷ್ಪರಿಣಾಮವನ್ನು ಗುರುತಿಸಿದೆ. ಇದರ ಪರಿಣಾಮವಾಗಿಯೇ 1980ರಲ್ಲಿ ಪರಿಸರ ಇಲಾಖೆ ರಾಷ್ಟ್ರಮಟ್ಟದಲ್ಲಿ ಅಸ್ತಿತ್ವಕ್ಕೆ ಬಂತು. ದೇಶದಲ್ಲಿ ಪರಿಸರ ಸಂರಕ್ಷಣೆಯ ಹೊಣೆಯನ್ನು ಈ ಇಲಾಖೆಗೆ ವಹಿಸಲಾಯಿತು. ಮುಂದಿನ ಪಂಚವಾರ್ಷಿಕ ಯೋಜನೆಗಳಲ್ಲೂ ಪರಿಸರ ಸಂರಕ್ಷಣೆಗೆ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲಾಯಿತು. 1982ರಲ್ಲಿ ನವದೆಹಲಿಯಲ್ಲಿ ಪರಿಸರ ಶಿಕ್ಷಣ ಕುರಿತ ಅಂತಾರಾಷ್ಟ್ರೀಯ ಸಮಾವೇಶವೂ ನಡೆಯಿತು. ಪರಿಸರ ಶಿಕ್ಷಣ, ಸಂಶೋಧನೆ ಮತ್ತು ನಿರ್ವಹಣೆಗೆ ಬೃಹತ್ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಅಗತ್ಯತೆಯನ್ನು ಸಮಾವೇಶ ಪ್ರತಿಪಾದಿಸಿತು. ಮಕ್ಕಳಿಗೆ ಶಿಕ್ಷಣದ ಪ್ರಾಥಮಿಕ ಹಂತದಲ್ಲೇ ಪರಿಸರ ಸಂರಕ್ಷಣೆಯ ಬಗ್ಗೆ ಅರಿವು ಮೂಡಿಸುವ ಪ್ರಯತ್ನವೂ ನಡೆಯಿತು. ಪ್ರಕೃತಿ ಬಗೆಗಿನ ವಿಶ್ವ ಸನ್ನದು 1982ರ ಅಕ್ಟೋಬರ್


www.shikarat.com

28ರಂದು ವಿಶ್ವಸಂಸ್ಥೆಯ ಸಾಮಾನ್ಯಸಭೆಯಲ್ಲಿ ಅಂಗೀಕಾರವಾಯಿತು. ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಕರ್ತವ್ಯ. ಅದರ ಎಲ್ಲ ಮೂಲಭೂತ ಅಂಶಗಳನ್ನು ಯಥಾಸ್ಥಿತಿಯಲ್ಲಿ ಉಳಿಸಬೇಕು ಎಂದು ಈ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು. ಎಲ್ಲ ಆರ್ಥಿಕ ಯೋಜನೆಗಳ ಪ್ರಮುಖ ಅಂಶ ಪರಿಸರ ಸಂರಕ್ಷಣೆ ಆಗಿರಬೇಕು ಎಂದು ಸೂಚಿಸಲಾಯಿರು. ಪರಿಸರ ಸಮಸ್ಯೆಗಳನ್ನು ಬೆಳಕಿಗೆ ತರಲು ಮತ್ತು ಪರಿಸರ ನೀತಿಯ ಬಗ್ಗೆ ಶಿಫಾರಸ್ಸು ಮಾಡುವ ಉದ್ದೇಶದಿಂದ 1983ರಲ್ಲಿ ರಾಷ್ಟ್ರೀಯ ಪರಿಸರ ಸಲಹಾ ಸಮಿತಿಯನ್ನು ನೇಮಕ ಮಾಡಲಾಯಿತು. ಈ ಸಮಿತಿ ದೇಶಾದ್ಯಂತ ಪರಿಸರದ ಮಹತ್ವವನ್ನು ಪ್ರತಿಪಾದಿಸುವ ಚರ್ಚಾವೇದಿಕೆಗಳನ್ನು ಕೂಡಾ ಸಂಘಟಿಸಿತು. 1992ರಲ್ಲಿ ಕೇಂದ್ರ ಸರ್ಕಾರ ಪ್ರತಿ ವರ್ಷ ಪರಿಸರ ಪರಿಶೋಧನೆಯನ್ನೂ ಕಡ್ಡಾಯಗೊಳಿಸಿತು. ಇದರ ಅನ್ವಯ ಪ್ರತಿ ಕೈಗಾರಿಕೆಗಳು 1993ನೇ ಹಣಕಾಸು ವರ್ಷದಿಂದ ಕಡ್ಡಾಯವಾಗಿ ಪರಿಸರ ಪರಿಶೋಧನಾ ವರದಿಗಳನ್ನು ಸಲ್ಲಿಸಬೇಕು.

ನಗರಗಳಲ್ಲಿ ಮಾಲಿನ್ಯ ನಿಯಂತ್ರಿಸುವಲ್ಲಿ ಮತ್ತು ಅರಣ್ಯ ಸಂರಕ್ಷಣೆಯ ನಿಟ್ಟಿನಲ್ಲಿ ಸುಪ್ರೀಂಕೋರ್ಟ್ ಮಹತ್ವದ ಪಾತ್ರವನ್ನು ವಹಿಸಿದೆ. ಹಲವು ಪ್ರಕರಣಗಳಲ್ಲಿ ಸುಪ್ರೀಂಕೋರ್ಟ್ ನೀಡಿದ ಮಹತ್ವದ ತೀರ್ಪಿನಿಂದಾಗಿ, ಅರಣ್ಯ ಪ್ರದೇಶಗಳಲ್ಲಿ ಗಣಿಗಾರಿಕೆಯನ್ನು ಸ್ಥಗಿತಗೊಳಿಸುವ ನಿರ್ಧಾರವನ್ನು ಕೇಂದ್ರ ಸರ್ಕಾರ ಕೈಗೊಳ್ಳಬೇಕಾಯಿತು. ದೇಶದ ಪ್ರಮುಖ ನಗರ ಹಾಗೂ ಮಹಾನಗರಗಳಲ್ಲಿ ವಾಹನಗಳು ಉಗುಳುವ ಹೊಗೆಯಿಂದಾಗಿ ಪರಿಸರ ಮಾಲಿನ್ಯ ಉಂಟಾಗುತ್ತಿರುವುದನ್ನು ಮನಗಂಡ ಸುಪ್ರೀಂಕೋರ್ಟ್, ಈ ನಿಟ್ಟಿನಲ್ಲೂ ಸರ್ಕಾರಕ್ಕೆ ಕಟ್ಟುನಿಟ್ಟಿನ ಸೂಚನೆಯನ್ನು ನೀಡಿ, ವಾಹನಗಳ ಹೊಗೆ ತಪಾಸಣೆಯನ್ನು ಕಡ್ಡಾಯಗೊಳಿಸುವಂತೆ ಮಾಡಿದೆ. ಪರಿಸರ ಮಾಲಿನ್ಯವನ್ನು ಕಡಿಮೆ ಮಾಡುವ ತಂತ್ರಜ್ಞಾನವನ್ನು ಸಾಧ್ಯವಾದಷ್ಟೂ ಹೆಚ್ಚಿನ ಪ್ರಮಾಣದಲ್ಲಿ ಅಳವಡಿಸಿಕೊಳ್ಳುವಂತೆ ಮತ್ತು ಮಹಾನಗರಗಳಲ್ಲಿ ಬಸ್ಸು ಮತ್ತು ಆಟೋಗಳಿಗೆ ಸಿಎಜ್‌ಜಿ ಇಂಧನ ಬಳಸುವಂತೆಯೂ ಸುಪ್ರೀಂಕೋರ್ಟ್ ಸೂಚನೆ ನೀಡಿದೆ. ಈ ಹಲವಾರು ಕ್ರಮಗಳ ಮೂಲಕ ನಗರಗಳ ಮಾಲಿನ್ಯ ಪ್ರಮಾಣವನ್ನು ಕಡಿಮೆ ಮಾಡಲು ಸುಪ್ರೀಂಕೋರ್ಟ್ ನೆರವಾಗಿದೆ. ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರದ ಜಲಜನಕ ಇಂಧನ ಬಳಸುವ ವಾಹನಗಳ ಅಭಿವೃದ್ಧಿ ಸಂಶೋಧನೆಗಳಿಗೆ ಸರ್ಕಾರ ಹಸಿರು ನಿಶಾನೆ ತೋರಿರುವುದು ಕೂಡಾ ಈ ನಿಟ್ಟಿನಲ್ಲಿ ಸ್ವಾಗತಾರ್ಹ ಬೆಳವಣಿಗೆ. 2003ರಲ್ಲಿ ಕೇಂದ್ರ ಸರ್ಕಾರ ಉನ್ನತ ಮಟ್ಟದ ಸಮಿತಿಯೊಂದನ್ನು ರಚಿಸಿ, ಭಾರತದಲ್ಲಿ ಜಲಜನಕವನ್ನು ಪರ್ಯಾಯ ಇಂಧನವಾಗಿ ಬಳಸುವ ಕುರಿತು ನೀಲನಕ್ಷೆ ಸಿದ್ಧಪಡಿಸುವಂತೆ ಆದೇಶ ನಿಡಿದೆ. ಅಮೂಲ್ಯ ನೈಸರ್ಗಿಕ ಹಾಗೂ ಸ್ವಾಭಾವಿಕ ವಾತಾವರಣವನ್ನು ಕಾಪಾಡಿಕೊಂಡು ಬರುವ ನಿಟ್ಟಿನಲ್ಲಿ ಹೊಗೆರಹಿತ ತಂತ್ರಜ್ಞಾನಕ್ಕೆ ಭಾರತದಲ್ಲಿ ಹೆಚ್ಚು ಒತ್ತು ನೀಡಲಾಗುತ್ತಿದೆ. ದೇಶದಲ್ಲಿ ಹಸಿರು ತೆರಿಗೆ ಅಥವಾ ಇಂಗಾಲ ತೆರಿಗೆ ವಿಧಿಸುವಂಥ ಕ್ರಮದಿಂದ ಇದನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸಾಧ್ಯವಿದೆ. ಪರಿಸರ ಸ್ನೇಹಿಯಲ್ಲದ ವಾಹನಗಳ ಮೇಲೆ ಅಧಿಕ ತೆರಿಗೆ ವಿಧಿಸುವುದು, ಅರಣ್ಯೀಕರಣ ಆಂದೋಲನವನ್ನು ಹಮ್ಮಿಕೊಳ್ಳುವುದು, ಪರಿಸರ ಸಂಶೋಧನೆ ಮತ್ತು ಪರ್ಯಾಯ ಇಂಧನ ಕ್ಷೇತ್ರದ ಸಂಶೋಧನೆಗಳಿಗೆ ಒತ್ತು ನೀಡುವ ಮೂಲಕ ಪರಿಸರ ಮಾಲಿನ್ಯವನ್ನು ನಿಯಂತ್ರಣಕ್ಕೆ ತರಲು ಅವಕಾಶವಿದೆ.

ಪರಿಸರ ಸಂರಕ್ಷಣೆಗೆ ಸರ್ಕಾರ ಗಂಭೀರ ಹಾಗೂ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುತ್ತಿದ್ದರೂ, ನಮ್ಮ ಸಲುವಾಗಿ ಮತ್ತು ಮುಂದಿನ ಪೀಳಿಗೆಯ ಸಲುವಾಗಿ ಪರಿಸರದ ಶುದ್ಧತೆಯನ್ನು ಕಾಪಾಡುವ ಹೊಣೆ ಎಲ್ಲ ಕೈಗಾರಿಕೋದ್ಯಮಿಗಳ ಮೇಲೆ ಮತ್ತು ಎಲ್ಲ ನಾಗರಿಕರ ಮೇಲೆ ಇದೆ. ನಮ್ಮ ಬದುಕಿನ ತೀರಾ ಮೂಲಭೂತ ಅಗತ್ಯತೆ ಎನಿಸಿದ ಆಮ್ಲಜನಕವನ್ನು ನಾವು ಪಡೆಯುವುದೇ ವಾತಾವರಣದಿಂದ. ನಮ್ಮ ಜೀವಜಲ ಎನಿಸಿದ ನೀರಿನಲ್ಲೇ ನಮ್ಮ ಅಸ್ತಿತ್ವ ಅಡಗಿದೆ. ಇವನ್ನೇ ನಾವು ಕಲುಷಿತಗೊಳಿಸಿದರೆ, ಅದು ನಾವು ಆತ್ಮಹತ್ಯೆ ಮಾಡಿಕೊಂಡಂತಾಗುತ್ತದೆ. ಮುಂದಿನ ಪೀಳಿಗೆಗೆ ನಾವು ನೀಡಬಹುದಾದ ಅತಿದೊಡ್ಡ ಕೊಡುಗೆ ಎಂದರೆ ಮಾಲಿನ್ಯಮುಕ್ತ ಪರಿಸರ.

## 26. ಮೀಸಲಾತಿ ನೀತಿ

ಭಾರತಕ್ಕೆ ವಿಸ್ತೃತ ತಳಹದಿಯ, ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗೆ ಬುನಾದಿ ಹಾಕಬೇಕಾದರೆ, ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಸಮಗ್ರ ಬದಲಾವಣೆ ತರಬೇಕು. ಸಾಮಾಜಿಕ ಶೋಷಣೆಗಳನ್ನು ತಡೆಯಲು ಅಗತ್ಯ ಕ್ರಮ ಕೈಗೊಳ್ಳಬೇಕು. ಪ್ರಜಾಸತ್ತಾತ್ಮಕ ಮೌಲ್ಯಗಳು ಮತ್ತು ಪದ್ಧತಿಗಳನ್ನು ಆಮೂಲಾಗ್ರವಾಗಿ ಬದಲಿಸಬೇಕು. ಭಾರತದ 7.5 ಲಕ್ಷ ಹಳ್ಳಿಗಳಲ್ಲಿ ವಾಸವಾಗಿರುವ ಗ್ರಾಮೀಣ ಜನತೆ ತಮ್ಮ ಬದುಕನ್ನು ತಾವೇ ರೂಪಿಸಿಕೊಳ್ಳುವ ರೂವಾರಿಗಳಾಗಬೇಕು. ಮಹಿಳೆಯರಿಗೆ ಎಲ್ಲ ಗೌರವಗಳನ್ನು ನೀಡುವ ಜತೆಗೆ ಅವರಿಗೆ ಸಮಾನ ಅವಕಾಶ ಕಲ್ಪಿಸಿಕೊಡುವ ಮೂಲಕ ಅಭಿವೃದ್ಧಿಯಲ್ಲಿ ಅವರೂ ಸಮಾನ ಪಾಲು ಪಡೆಯಲು ಅವಕಾಶ ಮಾಡಿಕೊಡಬೇಕು.

ಆರ್ಯನ್ನರ ಕಾಲದಲ್ಲಿ, ಭಾರತದಲ್ಲಿ ವಿಶಿಷ್ಟವಾದ ಪಂಚಾಯತ್ ಪದ್ಧತಿ ಜಾರಿಯಲ್ಲಿತ್ತು. ಇದು ಅತ್ಯಂತ ಪ್ರಬಲ ಹಾಗೂ ಬಹುತೇಕ ಸ್ವತಂತ್ರ ಸಂಸ್ಥೆಯಾಗಿತ್ತು. ಸ್ವಾತಂತ್ರ್ಯಾ ನಂತರ ಈ ಪಂಚಾಯತ್‌ರಾಜ್ ಸಂಸ್ಥೆಗಳನ್ನು ಪುನರುಜ್ಜೀವನಗೊಳಿಸುವ ಪ್ರಯತ್ನಗಳು ವ್ಯಾಪಕವಾಗಿ ನಡೆದವು. ಗ್ರಾಮೀಣ ಜನತೆ ತಾವು ಬೆಳೆಯುವ ಜತೆಗೆ ಇಡೀ ದೇಶದ ಬೆಳವಣಿಗೆಗೂ ಕೊಡುಗೆ ನೀಡುವಂತಾಗಲು ಪಂಚಾಯತ್‌ರಾಜ್ ಸಂಸ್ಥೆಗಳೇ ಸೂಕ್ತ ಎಂಬ ನಿರ್ಧಾರಕ್ಕೆ ಅಂದಿನ ಮುಖಂಡರು ಬಂದಿದ್ದರು. ಗಾಂಧೀಜಿಯವರ ಅಭಿವೃದ್ಧಿಯ ಪರಿಕಲ್ಪನೆಯಲ್ಲಿ ದೇಶದ ಅಭಿವೃದ್ಧಿ ಎಂದರೆ ಪ್ರತಿ ಹಳ್ಳಿಗಳ ಅಭಿವೃದ್ಧಿ. ಪ್ರತಿ ಹಳ್ಳಿಗಳು ಕೂಡಾ ಸ್ವಾವಲಂಬನೆ ಸಾಧಿಸಿಕೊಂಡು ತಮ್ಮ ವ್ಯವಹಾರಗಳನ್ನು ತಾವೇ ನಿರ್ವಹಿಸಿಕೊಳ್ಳಲು ಸಮರ್ಥರಾಗಬೇಕು ಎಂದು ಗಾಂಧೀಜಿ ಪ್ರತಿಪಾದಿಸಿದ್ದರು. ಅವರ ಪ್ರಕಾರ ಗ್ರಾಮಪಂಚಾಯ್ತಿಗಳಿಗೆ ನ್ಯಾಯ ತೀರ್ಮಾನದ ಅಧಿಕಾರವನ್ನು ಕೂಡಾ ನೀಡಬೇಕು ಎನ್ನುವುದಾಗಿತ್ತು. ಬಡ ಹಳ್ಳಿ ಮಂದಿ ಕೋರ್ಟ್‌ಗಳಿಗೆ ಅಲೆದು ತಮ್ಮ ಹಣ ಮತ್ತು ಶ್ರಮ ವ್ಯರ್ಥ ಮಾಡಿಕೊಳ್ಳುವಂತಾಗಬಾರದು. ಅವರ ಮನೆಬಾಗಿಲಲ್ಲೇ ನ್ಯಾಯದಾನ ದೊರಕುವಂತಾಗಲು ಪಂಚಾಯ್ತಿಗಳಿಗೆ ಈ ಅಧಿಕಾರ ನೀಡಬೇಕು ಎಂದು ಅವರು ಅಭಿಪ್ರಾಯಪಟ್ಟಿದ್ದರು.

"ಭಾರತ ಬಡವಾಗಿರುವುದು ಇಲ್ಲಿನ ಹಳ್ಳಿಗಳು ಬಡವಾಗಿರುವ ಕಾರಣದಿಂದ. ಭಾರತ ಶ್ರೀಮಂತವಾಗಬೇಕಾದರೆ ದೇಶದ ಹಳ್ಳಿಗಳು ಶ್ರೀಮಂತವಾಗಬೇಕು. ಪಂಚಾಯತ್‌ಗಳಿಗೆ ಹೆಚ್ಚಿನ ಅಧಿಕಾರ ನೀಡಬೇಕು. ಗ್ರಾಮೀಣ ಜನತೆಗೆ ಸ್ವರಾಜ್ಯದ ಅನುಕೂಲತೆಗಳ ಬಗ್ಗೆ ಅರಿವು ಮೂಡಿಸಬೇಕು. ಅವರ ಹಳ್ಳಿಗಳಲ್ಲೇ ಅವರು ಪ್ರತಿಯೊಂದನ್ನೂ ಪಡೆಯುವಂತಾಗಬೇಕು" ಎಂದು ಹೇಳಿದ್ದರು.


www.shikarat.com